UNIVERSAL
LIBRARY
OU_200370
UNIVERSAL
LIBRARY

OUP—391—29-4-72—10,000.

**OSMANIA UNIVERSITY LIBRARY**

Call No. Accession No.

Author

Title

This book should be returned on or before the date last marked below.

೬೯೯೭ ೫

# ಲೀಲೂ ಗಂಡ

( ಸಾಮಾಜಿಕ ಚಿತ್ರ )


**ಚಿ. ಸದಾಶಿವಯ್ಯ**

ದೇಶೀಯ ವಿದ್ಯಾಶಾಲೆ – ಬೆಂಗಳೂರು ೪.



ಪ್ರಕಾಶಕರು :

**ಆನಂದ್ ಬ್ರದರ್ಸ್**

**ಬೆಂಗಳೂರು ೨.**

೧೯೫೦

ಮೊದಲ ಮುದ್ರಣ ೧೯೫೦

*Copy Right Reserved*

**ಬೆಲೆ: ರೂ. ೧—೦—೦**

ಮುದ್ರಕರು:
ಎಂ. ಎಸ್. ಚಿಂತಾಮಣಿ
ದಿ ಈಸ್ವರ್ಸ್ ಪ್ರೆಸ್
೧೧-ಎ, ಜಯಚಾಮರಾಜೇಂದ್ರ ರಸ್ತೆ
ಬೆಂಗಳೂರು ನಗರ

ವೈರಾಗ್ಯ ಮೂರ್ತಿಗಳಾಗಿದ್ದ
ಪೂಜ್ಯರಾದ ಶ್ರೀ ಭಾರತಿ ವೆಂಕಟದಾಸಪ್ಪನವರ
ಪವಿತ್ರಾತ್ಮದ
ಚಿರಸ್ಮೃತಿಗೆ

ಈ ಕತೆಯು ಕಾಣಿಕೆಯಾಗಿದೆ.

— ಸದಾಶಿವ.

# ಲೀಲೂ ಗಂಡ

## ೧

"ಹೆಣ್ಣು ಹುಡುಗಿಯರಿಗೆ ಈ ಫಿಸಿಕ್ಸ್, ಕೆಮಿಸ್ಟ್ರಿ, ಆಲ್ಜೀಬ್ರಾ, ವಿದ್ಯಾಭ್ಯಾಸ ಅನಗತ್ಯ. ಏನೋ ನಿನ್ನಿಷ್ಟಕ್ಕೆ ಅಡ್ಡಿ ಬರಬಾರದೂಂತ ಈಗ ಲೀಲೂನ ಎಸ್. ಎಸ್. ಎಲ್. ಸಿ ವರೆಗೆ ಓದಿಸಿದ್ದಾಯಿತು. ಈಗ ಅವಳು ಪರೀಕ್ಷೇಲಿ ಪ್ಯಾಸಾಗಲೀ, ಫೇಲಾಗಲಿ – ಅವಳೀ ವಿದ್ಯಾಭ್ಯಾಸ ಇಲ್ಲಿಗೇನೇ ಬಂದ್"

"ಹಾಗೆ ಮಾಡಬೇಡೀಂದ್ರೇ – ನಿಮ್ಮ ದಮ್ಮಯ್ಯ. ನಿಮ್ಮ ಕಣ್ಣಿಗೆ ಲೀಲೂ ಬರೀ ಹೆಣ್ಣು ಮಗುವಾಗಿ ಕಾಣುತಾಳೆ. ಆದರೆ ಅವಳೇ ನನಗೆ ಮಗ – ಮಗಳೂ ಎಲ್ಲಾ. ಹೊಟ್ಟೇಲಿ ಹುಟ್ಟಿದ ಮಕ್ಕಳಿಗೆ, ಅದೂ ತಾವೇ ಓದುತೀವೀಂತ ಆಶೇಪಡೋ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅಡ್ಡಿ ಮಾಡಿದರೆ ಮಹಾಪಾಪ. ಆ ಸುಭಾಷಿತದ ಪದ್ಯ ಮರೆತು ಬಿಟ್ಟಿರಾ—ಮಕ್ಕಳಿಗೆ ತಂದೆ ಬಾಲ್ಯದೊಳಕ್ಕರ ವಿದ್ಯೆಗಳನರಿಪದಿರ್ದೊಡೆ ಕೊಂದಂ| ಲಕ್ಕಧನಮಿರಲು ಕೆಡುಗುಂ ಚಿಕ್ಕಂದಿನ ವಿದ್ಯೆಪೊರೆಗು ಚೂಡಾರತ್ನ—ಅಂತ ?"

"ಲೇ ಸೀತೇ ! ನೀನು ಈ ವಿಚಾರದಲ್ಲಿ ಈ ಸಲ ಮಟ್ಟಿಗೆ ಬಾಯಿ ಹಾಕ್ಕೊಂಡು ಬರಬೇಡ. 'ಗುರುದೈವಂ ವಿದ್ಯಾರ್ಥಿಗೆ, ತರುಣಿಗೆ ಪತಿ ದೈವಂ ||' ಅಂತಾಲೂ ಸುಭಾಷಿತ ಹೇಳಿದೆ. ಹೆಣ್ಣು ಮಕ್ಕಳಿಗೆ ತಕ್ಕ ವಿದ್ಯಾಭ್ಯಾಸ ನಮ್ಮ ದೇಶದಲ್ಲಿ ಇನ್ನೂ ಜಾರಿಗೆ ಬರೋ ಸುಳಿವಿಲ್ಲ. ಅಲ್ಲದೇ ಈ ಹೆಣ್ಣು ಮಕ್ಕಳು ಸ್ಕೂಲಿಗೆ ಹೋಗುತಾ ಇದ್ದರೆ, ಆ ದಾರೀ ಕಾಯ್ತಿರೋ ಆ ಪೋಲೀ ವಿದ್ಯಾರ್ಥಿಗಳ ಪಡೆಗಳನ ನೋಡಿದರೆ, ನನ್ನ ರಕ್ತ ಕುದಿದು ಹೋಗುತ್ತೆ. ನಾನೇ ಈ ಇಂಡಿಯಾ ದೇಶಕ್ಕೆ ನಾಲ್ಕುದಿನದ ಮಟ್ಟಿಗೆ ಡಿಕ್ಟೇಟರಾಗಿದ್ದಿದ್ದರೆ, ಈ ಪಡೆಗಳನ್ನೆಲ್ಲಾ ಬಡಿದುಹಾಕಿಸಿ, ನಮ್ಮ ಹೆಣ್ಣು ಮಕ್ಕಳಿಗೆ ಯಾವ ಬಗೆ

ವಿದ್ಯಾಭ್ಯಾಸ, ಎಲ್ಲಿ ಹೇಗೆ ನಡೀಬೇಕೋ ಅದಕ್ಕೆ ತಳಹದಿ ಹಾಕಿಸಿ ಬಿಡುತಿದ್ದೆ. ಅದು ಹಾಳಾಗಿ ಹೋಗಲೀ. ಈಗ ನಾನು ದೇಶಾನ ಉದ್ಧಾರಮಾಡೋ ಜವಾಬ್ದಾರಿ ಹೊತ್ತಿಲ್ಲ. ಭಗವಂತ ನನ್ನ ರಕ್ಷಣೆಗೆ ಕೊಟ್ಟಿರೋ ಒಬ್ಬಳು ಮಗಳ ಶ್ರೇಯಸ್ಸನ್ನ ಯೋಚಿಸಿ, ಅದಕ್ಕಾಗಿ ದುಡಿದು, ಅವಳನ್ನ ನೆಮ್ಮದಿಯಾದ ಮನೆತನಕ್ಕೆ ಸೇರಿಸಿ ಬಿಟ್ಟರೆ, ನನ್ನ ಇಹಲೋಕದ ಪುರುಷಾರ್ಥವೆಲ್ಲ ಮುಗಿದ ಹಾಗೇ; ತಿಳೀತೇ ? ಇನ್ನು ನೀನು ಈ ವಿಚಾರದಲ್ಲಿ ನಿಶ್ಚಿಂತಳಾಗಿರು."

ಎಂದು ಹೇಳುತ್ತಾ ರಾಮಚಂದ್ರಮೂರ್ತಿ ಮೇಲೆದ್ದ. ಸೀತಮ್ಮನು ಇನ್ನೂ ಉದ್ವಿಗ್ನಳಾಗಿ ಹತ್ತಿರ ಬಂದು ಕೈಹಿಡಿದು "ಸ್ವಲ್ಪ ಕೂತುಕೊಳ್ಳಿ. ನೀವು ದುಡುಕಬೇಡಿ. ನನ್ನ ಒಂದು ಮಾತು ಕಿವೀಮೇಲೆ ಹಾಕ್ಕೊಂಡು ಹೋಗಿ" ಎಂದು ಬಲವಂತವಾಗಿ ಗಂಡನನ್ನ ಕುರ್ಚಿಯ ಮೇಲೆ ಕೂಡಿಸಿ, ತಾನೂ ಮುಂದಿನ ಕುರ್ಚಿಯಮೇಲೆ ಕುಳಿತು ಮತ್ತೆ ಮಾತು ಪ್ರಾರಂಭಿಸಿದಳು. "ನೋಡಿ. ಲೀಲೂ ಬುದ್ಧಿವಂತೆ. ಓದಬೇಕೂನ್ನೋ ಆಶೆ ವಿಪರೀತವಾಗಿದೆ. ಅಲ್ಲದೇ ಅವಳು ಸುಖವಾಗಿ ನೆಮ್ಮದಿಯಾಗಿ ಬಾಳಲೀನ್ನೋ ಆಶೆ ಹೆತ್ತತಾಯಿ ನನಗಿಲ್ಲವೇಂದ್ರೇ ?"

"ನಿನಗಿದೇ ಕಣೇ. ನನಗಿಂತ ನೂರರಷ್ಟಿದೆ. ಆದರೆ ಹೆಂಗಸರ ಪ್ರಕೃತಿ ತುಂಬಾ ನಾಜೋಕು. ಅವರು ದೂರದ ಆಗು ಹೋಗುಗಳನ ಯೋಚಿಸಿ ತಿಳಿಯಲಾರರು. ಅವರಿಗೆ ಆ ಶಕ್ತಿ ಇಲ್ಲ. ಬಹಳ ಕ್ಷಣಂಚಿತ್ತಂ – ಕ್ಷಣಂಪಿತ್ತಂ – ಅನ್ನೋ ಸ್ವಭಾವದವರು. ಈಗೊಂದು ಸಮಯ ಲೀಲೂಗೆ ಪರೀಕ್ಷೇಲಿ ಪ್ಯಾಸಾಯಿತೂಂತ ಇಟ್ಟುಕೊಳ್ಳೋಣ. ಮುಂದಕ್ಕೆ ನಿನ್ನ ಯೋಚನೆ ಹೇಳು ; ಅದರ ಸಾಧಕ ಬಾಧಕಗಳನ್ನ ನಾನು ಹೇಳುತ್ತೇನೆ"

"ಮುಂದಕ್ಕೆ ಇಂಟರ್‌ಮೀಡಿಯಟ್ ಪರೀಕ್ಷೆಗೆ ಓದಿಸೋದು."

"ಮುಂದಕ್ಕೆ ?"

"ಬಿ. ಎಸ್. ಸಿ. ಪ್ಯಾಸ್ ಮಾಡಿಸೋದು."

"ಆಮೇಲೆ ?"

"ಆಮೇಲೆ ಸರಿಯಾದ ವರ ಸಿಕ್ಕಿದರೆ ಮದುವೆಮಾಡೋದು. ಸಿಕ್ಕದೇ ಹೋದರೆ ಅವಳನ್ನ ಡಾಕ್ಟರ ಪರೀಕ್ಷೆಗೆ ಓದಿಸೋದು."

"ಆಮೇಲೇ ?"

"ಮುಂದೆ ಅವಳ ಭವಿಷ್ಯ ಹೇಗಿದೆನ್ನೋದನ್ನ ಬಲ್ಲವರ್‍ಯಾರು ?"

"ನಾನುಬಲ್ಲೆ. ಹೇಳಲೇ? ಕಿವಿದೆರೆದು ಕೇಳಿಬಿಡು. ನಾವು ಬಡವರು. ಈಗ ಲೀಲೂಗೆ ಹದಿನಾಲ್ಕುವರುಷ. ಅವಳ ಮನಸ್ಸಿನಲ್ಲಿ ಗಂಡನ ಕಲ್ಪನೇ ಬರೋದರ ಒಳಗೇ, ನಾವೇ ಯೋಚಿಸಿ, ಅವಳ ಭವಿಷ್ಯ ಮಂಗಳಕರವಾಗಿರೋದನ್ನ ನೆನಸಿ, ಸರಿಯಾದ ಹುಡುಗನಜೊತೇಲಿ ಲಗ್ನಮಾಡಿಬಿಟ್ಟು, ಅವಳಿಗಿನ್ನು ಗೃಹಕೃತ್ಯದ ಪಾಠ ಕಲಿಸಿ, ಒಳ್ಳೇ ಗೃಹಿಣಿಯಾಗಿರೋಹಾಗೆ ಮಾಡಬೇಕಾದದ್ದು ನಮ್ಮ ಧರ್ಮ – ನನ್ನ ಜವಾಬ್ದಾರಿ"

"ತುಂಬಾ ಚೆನ್ನಾಗಿದೇಂದ್ರೆ. ಏನು ನಮ್ಮ ಚಿಕ್ಕತನದ ಕಾಲವೇ – ಮದುವೇಗೆ ಬಾಮ್ಮಾಂದರೆ ಓಡಿಬಂದು ಹಸೇಮಣೇಮೇಲೆ ಕೂತುಬಿಡೋಕೆ? ಅವಳಿಗೇನೆ ಮದುವೆ ಮಾಡಿಕೋಬೇಕೂನ್ನಿಸಿ, ನೋಡಿದ ಹತ್ತಾರು ವರಗಳ ಪೈಕಿ ಅವಳ ಕಣ್ಣಿಗೆ ಒಪ್ಪಿಗೆಯಾಗಿ, ಮನಸ್ಸಿಗೆ ಮೆಚ್ಚಿಗೆಯಾಗಿರೋನನ್ನ ಆರಿಸಿ, ಅವನ ಸ್ಥಿತಿಗತಿ ವಿಚಾರಿಸಿ ಮದುವೆ ಮಾಡಬೇಕೇಹೊರತೂವೇ – ಇನ್ನೂ ಮಗೂ ನಮ್ಮ ಲೀಲೂ – ಅದೂ ಈ ಕಾಲದ ಹುಡುಗೀ..............."

ರಾಮಚಂದ್ರಮೂರ್ತಿಗೆ ಏಕೋ ಸಿಟ್ಟು ಹೆಚ್ಚಿತು. ಹೆಂಡತಿಯು ಮೂರ್ಖಳಾಗಿ ತಲೆ ಕೆಡಿಸಿಕೊಂಡಿದಾಳೆಂದೆನ್ನಿಸಿತು. ಎದ್ದು ಹೋಗಿ ಬಿಡುವುದೇ ಮೇಲೆಂದು ತೋರಿತು. ಆದರೆ ಹುಡುಗರು ಪರೀಕ್ಷೆಯ ಫಲಿತಾಂಶವನ್ನು ನೋಡಿಕೊಂಡು ಬರಲು ಅರ್ಧಘಂಟೆಯ ಹಿಂದೆತಾನೇ ಹೋಗಿದ್ದಾರೆ. ಅವರು ಇನ್ನು ಸ್ವಲ್ಪ ಹೊತ್ತಿನಲ್ಲೇ ಬಂದುಬಿಡಬಹುದು. ಹೆಂಡತಿಯ ತಲೆಯಲ್ಲಿ ಅಂಕುರವಾಗಿರುವ ಮಗಳ ಭವಿಷ್ಯದ ಅಪಾಯಕರವಾದ ಆಕಾಂಕ್ಷೆಯನ್ನು ಈಗಲೇ ಜುಗುಟಿಹಾಕದಿದ್ದರೆ, ಮಗಳ ಮನಸ್ಸಿಗೂ ಇದು ಬೇರೂರಿನಿಂತರೆ, ತನ್ನ ಮಾತೇ ನಡೆಯದಂತಾಗಿ, ತನ್ನ ಕಲ್ಪನೆಯ, ಮಗಳ ಶಾಂತ ಜೀವನದ ಚಿತ್ರವು ದಿಕ್ಕುಗೆಟ್ಟು ಸಮಾಜದ ಹುಚ್ಚು ಜ್ವಾಲಾಮುಖಿಯ ತಾಪದಲ್ಲಿ ಬೆಂದು ಭಸ್ಮವಾಗಿ ಬಿಡುವುದೆಂದು ಅವನ ಮನಸ್ಸಿಗೆ ತೀರ್ಮಾನ ತೋರಿಬಂದಿತು ಹೆಂಡತಿಯ ಈ ಬಗೆಯಾದ ಕಡುಮೂರ್ಖತನವನ್ನು ತಡೆಗಟ್ಟಲು ಸಾಮದಾನೋಪಾಯಗಳು ಫಲಿಸುವಂತೆ ಕಾಣಲಿಲ್ಲ. ಆದರೂ ತನ್ನ ಸರ್ವಪ್ರಯತ್ನವನ್ನೂ ಮಾಡಿ, ಕಡೆಗೆ ಹೆಂಡತಿ, ಮತ್ತು ಮಗಳ ಮೇಲೆ ತನ್ನ ಒಡೆತನದ ಹಕ್ಕನ್ನು ಬಲವಂತವಾಗಿಯಾದರೂ ಚಲಾಯಿಸಿ,

ಸಮಯಕಾದು ಮನೆಗೆ ನುಗ್ಗಿರುವ ಈ ಸುಂಟರಗಾಳಿಯನ್ನು ಬಯಲಿಗಟ್ಟ ಬೇಕೆಂದು ಸ್ಥಿರಸಂಕಲ್ಪಮಾಡಿ, ಮುಖವನ್ನು ಹೆಂಡತಿಯ ಕಡೆಗೆ ತಿರುಗಿಸಿ ಕೊಂಡು, ಗಂಭೀರ ಮುಖಮುದ್ರೆಯಿಂದ ಕೂಡಿ ಹೇಳತೊಡಗಿದ. ಧ್ವನಿಯು ತುಸು ಕೋಪತಾಪಮಿಶ್ರವಾಗಿ ಅರಿವಿಲ್ಲದೆ ಮಧ್ಯೆ ಮಧ್ಯೆ ಗದ್ಗದಿತವಾಗು ತ್ತಿದ್ದಿತು—

"ಸೀತಾ! ನಾನು ಈ ಮನೆಗೆ ಯಜಮಾನ. ನೀನು ನನ್ನ ಹೆಂಡತಿ. ಹೌದೋ ಅಲ್ಲವೋ?"

ಸೀತಮ್ಮನು ಸ್ವಲ್ಪ ಬೆಚ್ಚಿದಳು ತನ್ನ ಕಡೆಯಮಾತಿನಲ್ಲಿ ಗಂಡನನ್ನು ನೋಯಿಸುವಂಥ ಯಾವಮಾತು ಅರಿವಿಲ್ಲದೆಯೇ ಹೊರಬಂದಿತೋ ಅರಿಯ ದಾದಳು. ವಿನಯದಿಂದ ನುಡಿದಳು

"ಇದೇನೂಂದ್ರೇ? ಇದೂ ಒಂದು ಪ್ರಶ್ನೆಯೇ? ಅದೂ ನನ್ನನ್ನ ಕೇಳಬೇಕೇ?"

"ಸರೀ ಹಾಗಾದರೆ. ಲೀಲೂ ನನ್ನ ಮಗಳು. ಅವಳ ಭವಿಷ್ಯಕ್ಕೆ ಜವಾಬ್ದಾರ ನಾನು. ನನಗೆ ಸರಿತೋರಿದಂತೆ ನನ್ನ ಕುಟುಂಬಾನ ಆಳೋ ಹಕ್ಕು ನನಗಿದೇ. ಲೀಲೂಗೆ ಈ ವರ್ಷ ಪ್ಯಾಸಾದರೂಸರೀ – ಫೇಲಾದರೂಸರಿ – ಇನ್ನುಮುಂದೆ ಖಂಡಿತ ಓದಿಸೊಲ್ಲ – ಓದಿಸೊಲ್ಲ – ಓದಿಸೊಲ್ಲ – ..........."

"ಅಯ್ಯೋ ಇದೇನೂಂದ್ರೇ?.........."

"ಇಲ್ಲಿಕೇಳೇ! ಅಲ್ಲದೆ ಈ ವರ್ಷವೇ ಶ್ರಾವಣಮಾಸದಲ್ಲೇ ಅವಳ ಮದುವೆ. ಮಾಡೋನು ಹುಡುಗಿ ಅಪ್ಪ – ನಾನು. ತಿಳೀತೇ? ಇನ್ನು ಈ ವಿಚಾರದಲ್ಲಿ ನಿನ್ನ ಬಾಯಿಂದ ಏನಾದರೂ ಮಾತು ಹೊರಟರೆ, ನನ್ನೀಸಂಕ ಲ್ಪಕ್ಕೆ ಸಹಾಯವಾಗೋದಾಗಿದ್ದರೆ ಮಾತಾಡು. ಇಲ್ಲದಿದ್ದರೆ ಬಾಯಿ ಮುಚ್ಚಿಕೊಂಡು, ನಿಮ್ಮೆಲ್ಲರ ಜವಾಬ್ದಾರಿ ನನ್ನ ತಲೇಮೇಲೆಹಾಕಿ ತೆಪ್ಪಗಿದ್ದು ಬಿಡಿ. ತಿಳೀತೇ!"

ಮನನೊಂದು ನುಡಿದ ರಾಮಚಂದ್ರಮೂರ್ತಿಯ ಧ್ವನಿ ಅನಗತ್ಯವಾಗಿ ತಾರಸ್ಥಾಯಿಯಲ್ಲಿ ರಿಷಭದಲ್ಲಿ ನುಡಿಯುತ್ತಿತ್ತು. ಸೀತಮ್ಮನು ಅವಾಕ್ಕಾ ದಳು. ತನ್ನ ಕಣ್ಮುಂದಿದ್ದ ಮಗಳ ದಿವ್ಯಭವಿಷ್ಯದ ಶೃಂಗಾರಮಂದಿರವು ಕಳಶ ಸಮೇತ ಕಳಚಿಬಿದ್ದಂತಾಯಿತು. ಹಳ್ಳಿಯ ಹುಡುಗಿಯರಂತೆ ತನ್ನ

ಮುದ್ದು ಮಗಳು ಲೀಲಾ ಈ ವಯಸ್ಸಿಗೇನೆ ಬಸಿರುಬಾಣಂತನಗಳಲ್ಲಿ ನಲುಗಿ, ಮಕ್ಕಳು ಮರಿಗಳ ಕೋಟಲೆಗಳಿಗೆ ಸಿಕ್ಕಿ, ಬಡಕಲಾಗಿ ತನ್ನ ಮುಂದೆ ನಿಂತಂತೆ ಭಾಸವಾಗುತಿತ್ತು. ಗಂಡನ ಗಂಡು ಸಂಕಲ್ಪದ ಮುಂದೆ ಹೆಣ್ಣಾದ ತನ್ನ ಕಣ್ಣೀರು ಸಹಾ ವ್ಯರ್ಥವಾಗುತ್ತಿರುವುದನ್ನು ಕಂಡು, ಕಣ್ಣೊರಸಿಕೊಂಡು ಗಂಡನ ಮುಖವನ್ನು ನೋಡಿದಳು. ಅವನ ದೃಷ್ಟಿ ತೀವ್ರವಾಗಿಯೇ ಇತ್ತು. ಸ್ವಲ್ಪ ಧೈರ್ಯಗೊಂಡು —

"ನೀವು ಸಿಟ್ಟಾಗಬೇಡಿ. ನಿಮ್ಮ ದಮ್ಮಯ್ಯ. ನಾನು ದುಡುಕಿ ಏನಾದರೂ ನುಡಿದಿದ್ದರೆ ಕ್ಷಮಿಸಿ" ಎಂದು ಗಂಡನ ಪಾದಗಳನ್ನು ಮುಟ್ಟಲು ಹೋದಳು. ಹೆಂಡತಿಯ ಸೌಜನ್ಯವನ್ನು ಕಂಡು ರಾಮಚಂದ್ರಮೂರ್ತಿಯ ಕೋಪ ಸ್ವಲ್ಪ ಕಡಿಮೆಯಾಯಿತು. ಆದರೆ ತಾಪವು ಇನ್ನೂ ತೀಕ್ಷ್ಣವಾಗಿಯೇ ಇದ್ದಿತು. 'ತಾನು ಮದುವೆಗೆ ಮುಂಚೆ, ಹೆಂಡತಿಯನ್ನು ಹೈಸ್ಕೂಲಿಗೆ ಕಳುಹಿಸದಿದ್ದರೆ ಮದುವೆಯಾಗುವುದಾಗಿ ಹೇಳಿ, ಅದೇ ಒಪ್ಪಂದದಂತೆ ಆವಳು ಹೈಸ್ಕೂಲು ಹೊಸಿಲು ತುಳಿಯದಿದ್ದದ್ದರಿಂದಲೇ, ಇನ್ನೂ ಈ ಅಲ್ಪ ಸ್ವಲ್ಪ ಸೌಜನ್ಯವು ಅಳಿಯದೆ ಉಳಿದಿರುವುದೆಂದೂ ಘಂಟಾಘೋಷದಂತೆ ಹೊಳೆಯಿತು. ಎಷ್ಟಾದರೂ ಹೆಂಡತಿ. ಏನೋ ಮಗಳ ಮೇಲಣ ಮೋಹದಿಂದ ದೂರದೃಷ್ಟಿಯಿಲ್ಲದೆ ನುಡಿದಿರಬಹುದು. ಇರಲಿ ಹೇಗೂ ತನ್ನ ಕಡೆಯುವಾಗ್ಧೋರಣೆ ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಫಲಕಾರಿಯಾಯಿತು' – ಎಂದುಕೊಂಡು, ಕೃತ್ರಿಮ ಕೋಪದಲ್ಲೇ ಹೇಳಿದ.

"ಲೀಲೂ ಮದುವೆಯಂತೂ ನಿಶ್ಚಯ ಇನ್ನು ಈ ಮದುವೆಯ ವಿಚಾರವಾಗಿ ನೀನು ಹೇಳಬೇಕಾದ್ದೇನಾದರೂ ಇದ್ದರೆ ಹೇಳು."

"ನಿಮ್ಮಿಷ್ಟಬಂದಂತೆ ಮಾಡಿ. ಆದರೆ ಬಡವರಾದ ನಮ್ಮ ಮಗಳನ್ನ ಮದುವೆಯಾಗೋ ಗಂಡು ಯಾರೂ? ಅಲ್ಲದೇ ಅವನನ್ನ, ಅವರ ಅಪ್ಪ ಅಮ್ಮನನ್ನ, ಅವನ ಕಡೆಯವರನ್ನೆಲ್ಲಾ ದಣಿಸೋ ಅಷ್ಟು ಸಾವಿರಾರು ರೂಪಾಯಿಗಳು ತಾನೇ ನಮ್ಮಲ್ಲೀಗ ಎಲ್ಲಿದೇ?"

"ಬಡವರಾದ ನಮ್ಮ ಮಗಳನ್ನು ಮದುವೆಯಾಗೋನು ನಮಗಿಂತ ಬಡವನಾಗಿರೋ ಹುಡುಗ. ಇನ್ನು ಅವರಪ್ಪ, ಅಮ್ಮ ಯಾರೂ ಇಲ್ಲದ್ದರಿಂದ, ಸಾವಿರಾರು ರೂಪಾಯಿನ ಅಗತ್ಯವೂ ಇಲ್ಲ. ಗಂಡಿನ ಕಡೆಯವರ

ಕಾಲು ತೊಳೆಯೋದಕ್ಕೆ ನಮ್ಮ ಮನೆ ತೊಳೀಬೇಕಾವದ್ದೂ ಇಲ್ಲ. ಸೀತಮ್ಮನಿಗೇಕೋ ಸಿಡಿಲು ಬಡಿದಂತಾಯಿತು. ಕಾಲ್ಕೆಳಗೆ ಭೂಮಿ ನಡುಗಿ ಬಾಯ್ಬಿರಿದಂತಾಯಿತು. ಹುಣ್ಣಿಮೆಯ ಚಂದ್ರನನ್ನ ಇದ್ದಕ್ಕಿದ್ದಂತೆ ರಾಹು ನುಂಗಿದಂತಾಯಿತು.

"ನಮಗಿಂತಲೂ ಬಡವನಾದ ಹುಡುಗ – ತಾಯಿ ತಂದೆ ಯಾರೂ ಇಲ್ಲದವನು. ನಮಗಿಂತಲೂ ಬಡವನಾದ ಹುಡುಗ – ತಾಯಿ ತಂದೆ ಯಾರೂ ಇಲ್ಲದವನು –" ಈ ಮಾತುಗಳೇ ಸುತ್ತಲೂ ಗಟ್ಟಿಯಾಗಿ ಕೇಳಿಬರುತ್ತಿರುವಂತೆ ಭಾಸವಾಯಿತು. ತಲೆಸುತ್ತಿತು. ಕ್ಷಣಕಾಲ ನಿಶ್ಚೇಷ್ಟಿತಳಾಗಿ ಕುಳಿತಿದ್ದಳು.

"ಏಕೇ ? ಮಾತಾಡು !" ಎಂದು ಕಠಿಣವಾಗಿ ನುಡಿದ ರಾಮಚಂದ್ರ ಮೂರ್ತಿ.

"ಆ ಹುಡುಗ ಯಾರೂಂದ್ರೇ ?" ಎಂದು ಭಯದಿಂದ ಕಂಪಿಸುವ ತುಟಿಗಳಿಂದ ನುಡಿದಳು ಸೀತಮ್ಮ.

ಅವಳ ಮನಸ್ಸಿನ ಆತಂಕವನ್ನು ಗ್ರಹಿಸಿಬಿಟ್ಟ ರಾಮಚಂದ್ರ ಮೂರ್ತಿ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ತನ್ನ ಗಾರುಡೀಮಂತ್ರವನ್ನು ಪೂರ್ಣವಾಗಿಯೇ ಪ್ರಯೋಗಿಸಿಬಿಡಬೇಕೆಂದು ಸ್ಥಿರಮನಸ್ಸಿನಿಂದ ದೃಢವಾದ ಧ್ವನಿಯಿಂದ ದಿಟ್ಟವಾಗಿ ನುಡಿದುಬಿಟ್ಟ "ವೆಂಕಟೇಶಾ ! ತಿಳಿಯಿತೇ ! ನಮ್ಮ ಮನೆಯಲ್ಲಿ ಮೂರುವರುಷದಿಂದಲೂ ಊಟ ಮಾಡಿಕೊಂಡಿರೋ ತಬ್ಬಲಿ ವೆಂಕಟೇಶ. ಅವನೇ ಲೀಲೂಗೆ ಗಂಡ. ಅವನೇ ಲೀಲೂಗೆ ಗಂಡ" ಎಂದು ಕೂಗುತ್ತಾ ತನ್ನ ಕೋಣೆಗೆ ಹೊರಟುಹೋದ. ಅವನ ಕಡೆ ಕಡೆಯಮಾತು ಗಳು ಉನ್ಮಾದದ ಧ್ವನಿಯಲ್ಲಿದ್ದುವು. ಸೀತಮ್ಮನ ಹೃದಯ "ದಢೇಲ್ ಎಂದು ಬಡಿದು ದಿಕ್ಕಾಪಾಲಾಗಿ ಡವಗುಟ್ಟತೊಡಗಿತು.

ಗಂಡನ ಈ ರೀತಿಯಾದ ಮಾನಸಿಕ ಪರಿಸ್ಥಿತಿಯಲ್ಲಿ ಅವನಿಗೆ ಎದುರಾ ಡುವುದು ಕೊಳ್ಳಿಯಿಂದ ತಲೆಯನ್ನು ತುರುಚಿಕೊಂಡಂತೆ ಹಾನಿಕರವಾದು ದೆಂದು ಸೀತಮ್ಮ ಗ್ರಹಿಸಿಬಿಟ್ಟಳು. ಆದರೆ ಒಂದು ತರಗತಿಯಲ್ಲೂ ನಿಲ್ಲದೆ, ಬುದ್ಧಿವಂತಳೆಂದು ಉಪಾಧ್ಯಾಯರುಗಳೆಲ್ಲರಿಂದ ಹೊಗಳಿಸಿಕೊಂಡು, ತರಗತಿ ಗಳಲ್ಲಿ ಬಹುಮಾನವನ್ನು ಪಡೆಯುತ್ತಾ, ಅಮ್ಮನ ಮನಸ್ಸಿನಲ್ಲಿ ಸರಸ್ವತೀ ದೇವಿಯ ವರಪ್ರಸಾದವನ್ನು ಪಡೆದವಳೆಂಬ ನಂಬಿಕೆಯನ್ನು ಮೂಡಿಸಿ ಅವಳ

ಕನಸು ಮನಸಿನ ಕಣ್ಮಣಿಯಾಗಿರುವ ಲೀಲಾ – ಮುದ್ದು ಲೀಲಳನ್ನ, ಕುಂಟಿ ಕೊಂಡು ಹೈಸ್ಕೂಲು ಹತ್ತಿ ಹೇಗೋ ಪರೀಕ್ಷೆಯ ತರಗತಿಗೆ ಬಂದು, ಪರೀಕ್ಷೆಗೆ ಕುಳಿತಿರುವ ಹಳ್ಳಿಯಕೊಂಟ ತಬ್ಬಲಿ ವೆಂಕಟೇಶನ ಹಿಂದು ಮುಂದಿಲ್ಲದ ನಿರಾಧಾರ ಜೀವನಸೂತ್ರದೊಂದಿಗೆ ಬಿಗಿದುಬಿಡುವುದೇ? ಕೈಯಾರ ಆ ಹುಡುಗಿಯ ಸ್ವರ್ನ ಭವಿಷ್ಯಕ್ಕೆ ಮಸಿ ಹಚ್ಚಿಬಿಡುವುದೇ?....ಇಲ್ಲ. ಇಲ್ಲ. ತನ್ನ ಕನಸೇ ನನಸಾಗಬೇಕು. ಆದರೆ ಗಂಡನೇ ಪ್ರತಿಸ್ಪರ್ಧಿಯಾಗಿರುವಾಗ? ಕಣ್ಣೀರು ಕಲಸಕ್ಕೆ ಬಾರದೇ ನಾಚಿ ಹಿಂದಿರುಗಿರುವಾಗ? ಯೋಚಿಸೀ ಯೋಚಿಸೀ ಕಡೆಗೊಂದು ತೀರ್ಮಾನಕ್ಕೆ ಬಂದು, ಮೆಲ್ಲಗಲ್ಲಿಂದೆದ್ದು ಗಂಡನ ಕೋಣೆಗೆ ಬಂದು ಬಾಗಿಲ ಬಳಿ ನಿಂತಳು. ಫಲಿತಾಂಶವನ್ನು ನೋಡಿಕೊಂಡು ಹುಡುಗರು ಹಿಂದಿರುಗುವುದಕ್ಕೆ ಮುಂಚೆಯೇ ತನ್ನ ಕಡೆಯ ಪಟ್ಟನ್ನು ಆಡಿ, ಸಾಧ್ಯವಾದಲ್ಲಿ ಗಂಡನನ್ನು ಮಾತಿಗೆ ಕಟ್ಟುಬೀಳಿಸಬೇಕು.

"ಅಲ್ಲಾಂದ್ರೇ? ಲೀಲೂನ ವೆಂಕಟೇಶನಿಗೆ ಕೊಟ್ಟು ಮದುವೆ ಮಾಡೋದರಲ್ಲಿ ನನ್ನ ಅಭ್ಯಂತರವೇನೂ ಇಲ್ಲ. ನಿಮ್ಮ ಮಗಳು ನನಗೆಷ್ಟು ಅವಳಮೇಲೆ ಪ್ರೀತಿ ಅಧಿಕಾರಗಳಿವೆಯೋ ಅದಕ್ಕಿಂತ ಹೆಚ್ಚಾಗಿ ನಿಮಗಿದೆ. ಅದಕ್ಕೆ ನಾನು ಬೇಡಾಂತೇನೆಯೇ?" ಎಂದು ಮೆಲುದನಿಯಲ್ಲಿ ನುಡಿದಳು.

ರಾಮಚಂದ್ರಮೂರ್ತಿಯ ನೆತ್ತಿಯನ್ನು ಬೆದಕಿ ರೇಗಿಸುತ್ತಿದ್ದ ಮುಖ ವಾಡ ಮಯಣದಂತೆ ಕರಗಿ ಮಂದಹಾಸವನ್ನು ಬೀರಿದಂತಾಯಿತು. ಕತ್ತೆತ್ತಿ ನೋಡಿದ. ಹೆಂಡತಿಯ ಕಣ್ಣುಗಳಲ್ಲಿ ನೀರು ಉಕ್ಕುತ್ತಲೇ ಇದ್ದಿತು. ಆದರೂ ಅವಳು ತನ್ನ ಹಠವನ್ನುಬಿಟ್ಟು ಸೋಲನ್ನೊಪ್ಪಿಕೊಂಡಂತೆ ಕಾಣುತ್ತಿತ್ತು. ಉರಿಬಿಸಿಲಿಗೊಡ್ಡಿದ ಬೋಡುನೆತ್ತಿಯಮೇಲೆ ವರ್ಷಾಕಾಲದ ತಂಗಾಳಿ ಬೀಸಿ ದಂತಾಯಿತು.

"ಬಾ ಸೀತಾ! ಕೂತುಕೋಬಾ! ಕಾಲೇಜಿಗೆ ಹೋಗುವ ಆ ಹೆಣ್ಣು ಮಕ್ಕಳ ಗುಂಪುಗಳನ್ನ ಕಣ್ಣಾರೆಕಂಡು, ಅವರ ಮಾತು ಕತೆ ನಡೆನುಡಿಗಳನ್ನೂ, ಅವರ ನಡೆ ನೋಟಗಳನ್ನೂ, ಕಾದು ನಿಂತಿರುವ ಆ ಭಂಡಹುಡುಗರ ಬಾಳನ್ನು ನೀನು ಕಣ್ಣಾರ ಕಂಡಿದ್ದರೆ ನಾನು ಹೇಳಿದಮಾತಿಗೆ ಮೊದಲೇ ಒಪ್ಪಿಗೆ ಕೊಟ್ಟುಬಿಡುತ್ತಿದ್ದೆ. ನಾನು ಲೀಲೂಭವಿಷ್ಯದ ವಿಚಾರವಾಗಿ ಎಷ್ಟು ಯೋಚಿಸಿ ಯೋಚಿಸಿ, ಕಡೆಗೆ ಈ ತೀರ್ಮಾನಕ್ಕೆ ಬಂದಿದ್ದೇನೋ ಆ ಭಗ

ವಂತನಿಗೇ ಗೊತ್ತು" ಎಂದು ಹೇಳುತ್ತಾ ಹೆಂಡತಿಯನ್ನು ಕುರ್ಚಿಯಮೇಲೆ ಕೂಡುವಂತೆ ಸನ್ನೆಮಾಡಿದ. ತನ್ನ ಸಂಧಾನವು ಫಲಕಾರಿಯಾಗುವ ಶುಭ ಸೂಚನೆಯನ್ನು ಕಂಡು ಸೀತಮ್ಮನು ಮನಸ್ಸಿನಲ್ಲೇ ಹರ್ಷಪಟ್ಟಳು. ಮೆಲ್ಲಗೆ ಬಂದು ಗಂಡನ ಕುರ್ಚಿಯ ಪಕ್ಕದ ಕುರ್ಚಿಯಲ್ಲಿ ಕುಳಿತಳು. "ಅಂಥಾ ಭಂಡಹುಡುಗರನ್ನ ಕಂಡು ದಂಡಿಸೋ ಅಷ್ಟು ಪೌರುಷ ಇಲ್ಲದಿರೋ ನಮ್ಮೀಜನ ಏನುತಾನೇ ಸಾಧಿಸ್ಯಾರು? ಅದಿರಲೀಂದರೇ. ಈಗ ಲೀಲೂ ವಿಚಾರ. ನೀವು ಹೇಳೋಹಾಗೇ ಲೀಲೂಗೆ ಈ ಸಲ ಪ್ಯಾಸಾದರೆ ಮದುವೆ ಮಾಡೋದು – ಆದರೆ ಒಂದು ಸಮಯ ಪ್ಯಾಸಾಗದೇ ಹೋದರೋ?"

"ಏನಂದೆ. ಲೀಲೂಗೆ ಪ್ಯಾಸಾಗೊಲ್ಲವೇ? ಚೆನ್ನಾಗಿ ಹೇಳಿದೆ. ನಮ್ಮ ಲೀಲೂಗೆ ಈ ಸಲ ಪ್ಯಾಸಾಗದೆ ಹೋದರೆ ಮೈಸೂರು ಸ್ಟೇಟ್‌ನಲ್ಲೇ ಯಾರಿಗೂ ಆಗಿರೊಲ್ಲ....ಹಂ. ಒಂದು ಸಮಯ ಪ್ಯಾಸಾಗದೇ ಇದ್ದರೂ ಕೂಡ, ಅದಕ್ಕೋಸ್ಕರ ಮದುವೆ ನಿಲ್ಲಿಸಬೇಕಾದ್ದಿಲ್ಲ."

"ಹೌದೂ! ಅಂತೂ ಹೆಂಡತೀಗಿಂತ ಗಂಡ ಒಂದು ಕ್ಲಾಸಾದರೂ ಮೇಲಿದ್ದರೆ ಮದುವೆಗೆ ಚೆನ್ನಾ ಅಲ್ಲವೇ?"

ರಾಮಚಂದ್ರಮೂರ್ತಿ ತನ್ನ ಕಕ್ಷಿಗಾರನನ್ನ ಮರೆತು ನ್ಯಾಯಕ್ಕೆ ಹೊಡದಾಡುತ್ತಿರುವ ಲಾಯರಂತೆ "ಆಹಾಂ! ಖಂಡಿತವಾಗಿಯೂ; ಒಂದು ಕ್ಲಾಸೇ ಏನು? ಹುಡುಗಿ ಓದಿರೋದರ ನಾಲ್ಕರಷ್ಟು ಓದಿರಬೇಕು ಗಂಡು. ಇಲ್ಲದೇ ಹೆಣ್ಣೇ ಹೆಚ್ಚಾಗಿ ಓದಿದ್ದರೆ ಸಂಸಾರದಲ್ಲಿ ಹೊಂದಿಕೆ ಎಲ್ಲಿಂದ ಬರುತ್ತೇ! ಗಂಡಸು ಗಂಡಸಾಗಿ, ಹೆಂಗಸು ಹೆಣ್ಣಾಗಿರೋಕೆ ಸಾಧ್ಯವೇ ಆಗೊಲ್ಲ."

ಸೀತಮ್ಮ ಕ್ಷಣಕಾಲ ಆನಂದದಿಂದ ತುಂಬಿ ತೆಪ್ಪಗಿದ್ದಳು. ನಂತರ ಮೆಲುದನಿಯಲ್ಲಿ ತನಗೆ ತಾನೇ "ಹೇಗೋ ಅಂತೂ ವೆಂಕಟೇಶನಿಗೂ ಈ ಸಲ ಪ್ಯಾಸಾಗಿ ಬಿಟ್ಟರೇ ಸಾಕೂ" ಎಂದು ಸುಮ್ಮನಾದಳು. ಇದಕ್ಕೆ ರಾಮ ಚಂದ್ರನು ಮೆಚ್ಚಿಕೆ ತೋರಿಸುತ್ತಾ "ಹೌದು. ಹೌದು ಮದುವೆಯಾದ ಮೇಲೆ ಇಂಟರ್ ಮೀಡಿಯೆಟ್ ಮಾಡಿಸಿ ಬಿಟ್ಟು, ಆಮೇಲೆ ಸಾಧ್ಯವಾದರೆ ಮುತ್ತ ಣ್ಣೋರಿಗೆ ಹೇಳಿ, ಇಂಜನಿಯರಿಂಗ್ ಕಾಲೇಜಿಗೆ ಸೇರಿಸೋದು. ನೋಡೋಣ ಲೀಲೂ ಅದೃಷ್ಟ, ಹ್ಯಾಗಿದೆಯೋ?"

ಅದು ನಿಜಾನ್ನೀ. ಅವಳ ಪುಣ್ಯ ಚೆನ್ನಾಗಿದ್ದರೆ ಎಂಥೋನ್ನ ಮದುವೆಯಾದರೂ ರಾಣೀ ಹಾಗಿರುತಾಳೆ....ನೊನ್ನೆ ವೆಂಕಟೇಶ ಲೀಲೂ ಕೈಲಿ ಹೇಳುತಿದ್ದ – 'ಲೆಕ್ಕದಲ್ಲಿ ಅಷ್ಟೇನು ಚೆನ್ನಾಗಿ ಮಾಡಿಲ್ಲ. ಗ್ರೇಸ್ ನಂಬರು ಆರೋ ಏಳೋ ಕೊಟ್ಟರೆ ಪ್ಯಾಸಾಗಬಹುದೂ'ಂತ."

ಸಂಭಾಷಣೆಯಲ್ಲಿ ಏನೋ ಅಪಶ್ರುತಿ ಪ್ರಾರಂಭವಾದಂತೆ ಮೂರ್ತಿಗೆ ಗೋಚರವಾಯಿತು. ಅದನ್ನ ಅಲ್ಲೇ ತಡೆಗಟ್ಟೋದೇ ಮೇಲೆಂದು, ಶಲ್ಯ ಹೆಗಲ ಮೇಲೇರಿಸಿ "ಹುಡುಗರು ಇಷ್ಟು ಹೊತ್ತಾದರೂ ಯಾಕೆ ಬರಲಿಲ್ಲವೋ ನೋಡುತೇನೆ" ಎಂದು ಹೇಳಿ ಹೊರಹೊರಟ. ಸೀತಮ್ಮನು ತನ್ನ ಕಡೇ ಮಾತನ್ನು ಹೇಳಿಬಿಡಬೇಕೆಂದು ಮುಂದೆ ಹೋಗಿ "ಅಂತೂ ದೇವರ ದಯದಿಂದ ವೆಂಕಟೇಶನಿಗೆ ಪ್ಯಾಸಾಗಿ ಬಿಟ್ಟರೆ, ಲೀಲೂ ಪುಣ್ಯ – ಇಲ್ಲದೆ ಇವಳಿಗೆ ಪ್ಯಾಸಾಗಿ ಬಿಟ್ಟು, ಅವನಿಗಾಗದೇ ಹೋದರೆ ಅವನನ್ನ ಅಳಿಯನನ್ನಾಗಿ ಮಾಡಿಕೊಳ್ಳೋ ಪುಣ್ಯ ನಮಾಗೆ ಇಲ್ಲಾಂದುಕೋಬೇಕು. ಅಷ್ಟೇ." ಎಂದಳು. ಹೊಸಲಾಚೆ ಇದ್ದ ರಾಮಚಂದ್ರಮೂರ್ತಿಗೆ ಹೆಂಡತಿಯ ಈ ಮಾತಿನ ನಂತರ ಹಿಂದಿನ ಸಂಭಾಷಣೆಗಳ ಮುಖ ಸ್ಪಷ್ಟವಾದಂತಾಯಿತು. "ದೇವರಿದಾನೆ" ಎಂದು ಹೊರಹೊರಟ.

ನಾಲ್ಕು ಹೆಜ್ಜೆ ಸಹಾ ನಡೆದಿಲ್ಲ. ಎದುರಿಗೇನೇ ಲೀಲೂ ಅವಳ ನಾಲ್ಕಾರು ಜನ ಗೆಳತಿಯರು ಕಿಲಕಿಲನೆ ನಗುತ್ತಾ ಆನಂದಭರಿತರಾಗಿ ರಸ್ತೆಯಗಲಕ್ಕೂ ತಾವೇ ತಾವಾಗಿ ಬರುತ್ತಿದ್ದಾರೆ. ನಡೆದು, ಬೈಸಿಕಲ್‌ಗಳ ಮೇಲೆ, ಗಾಡಿಗಳಲ್ಲಿ ಕುಳಿತು ಹೋಗಿ ಬರುತ್ತಿರುವವರ ನೆಟ್ಟ ಕಣ್ಣುಗಳೆಲ್ಲವೂ ತಮ್ಮನ್ನೇ ಕಬಳಿಸುವಂತೆ ನೋಡುತ್ತಿವೆಯೆಂಬುದು ಆ ಹೆಣ್ಣು ಮಕ್ಕಳಿಗೇನು ಗೊತ್ತು. ರಾಮಚಂದ್ರಮೂರ್ತಿಗೆ ಅವರ ಗುಂಪನ್ನು ನೋಡಿ "ಶುದ್ಧ ಚೆಲ್ಲು ಹುಡುಗಿಯರು" ಎನ್ನಿಸಿತು ಆದರೆ ತನ್ನ ಮುದ್ದಿನ ಮಗಳು ಲೀಲೂ – ಅವಳೂ ಚೆಲ್ಲೇ? ಇಲ್ಲ ಇಲ್ಲ. ಪ್ಯಾಸಾಗಿರುವ ಆನಂದದಿಂದ ನಲಿಯುತ್ತಾ ಬರುತ್ತಿದ್ದಾರಷ್ಟೆ. ಅವರ "ಕಿಲಕಿಲ" ಹಾಸದಲ್ಲಿ ಮಕ್ಕಳ ನಿಷ್ಕಳಂಕ ಶುಭ್ರತೆಯಿದೆ. ಆದರೆ ಹಾದಿ ಹೋಕರೆಲ್ಲರೂ ಅವರನ್ನೂ ಅದೇ ಪಿತೃವಾತ್ಸಲ್ಯದಿಂದ ನೋಡುವುದಾದರೆ?....ಲೀಲೂ ಸಹ ಕಾಲೇಜಿನಲ್ಲಿ ಓದಬಹುದಾಗಿತ್ತು....ಈ ಯೋಚನೆಗಳು ಮಿಂಚಿನಂತೆ ಅವನ ಮನಸ್ಸಿನ ಮುಂದೆ

ಸುಳಿದು ಅಳಿಯುವುದರೊಳಗಾಗಿಯೇ, ಲೀಲೂ ತಂದೆಯನ್ನು ಕಂಡು ಬಿಟ್ಟಳು. ಗೆಳತಿಯರೊಂದಿಗೆ ಓಡಿ ಬಂದು, ತಂದೆಯ ಕೈಗಳನ್ನು ಅಪ್ಪಿ – "ಅಣ್ಣಾ ! ನನಗೆ ಫಸ್ಟ್‌ಕ್ಲಾಸ್. ಈ ಸರೋಜಾನೂ ಫಸ್ಟ್‌ಕ್ಲಾಸ್ಸ್. ಈ ಮಾಲತೀ, ಸುಮಿತ್ರಾ, ಸುನಂದಾ ಮೂರು ಜನಾನೂ ಸೆಕೆಂಡ್ ಕ್ಲಾಸ್. ನಮ್ಮ ಸ್ಕೂಲಿಗೆ ಈ ಸಲ ಸಿಕ್ಸ್ಟಿಪರ್ಸೆಂಟ್ ಪಾಸಸ್. ಸರೋಜಾನೇ ನಮ್ಮ ಸ್ಕೂಲಿಗೆಲ್ಲಾ ಫಸ್ಟ್. ನಮ್ಮ ಹೆಡ್‌ಮೇಡಂ ನಮಗೆಲ್ಲಾ ಕಾಲೇಜಿನಲ್ಲಿ ಸೀಟ್ ರಿಜರ್ವ್ ಮಾಡಿಸಿಬಿಟ್ಟು ಪಿ. ಸಿ. ಎಂಗೆ ಫಾರಂಗಳ್ನ ಕೊಡಿಸಿಬಿಟ್ಟಿದಾರೆ ನೋಡಣ್ಣಾ ! ನಾಳೆ ಗುರುವಾರ ದಿವಸ ಚೆನ್ನಾಗಿದೆ. ನೀನು ಸೈನ್‌ಮಾಡಿ ಕೊಟ್ಟು ಬಿಟ್ಟರೆ ನಾಳೇನೇ ಹೆಸರು ಬರಸಿ ಬಂದು ಬಿಡುತ್ತೇನೆ. ನಮ್ಮ ಹೆಡ್ ಮೇಡಂ ಹೇಳಿದರಣ್ಣಾ. "ಹೀಗೇ ಓದಿದರೇ, ಲೀಲೂ ನಿನಗೆ ಇಂಟರ್ ಮೀಡಿಯೆಟ್ಟಾದ ಮೇಲೆ ಆನರ್ಸ್ ಕೋರ್ಸ್ ಕೊಡಿಸುತೀನಿ ಅಂತ........" ಲೀಲೂ ಇನ್ನೂ ಏನೇನು ಹೇಳಿಬಿಡಬೇಕೂಂತಿದ್ದಳೋ ದೇವರೇ ಬಲ್ಲ. ಆದರೆ ತನಗೆ ಫಸ್ಟ್‌ಕ್ಲಾಸ್‌ನಲ್ಲಿ ಪ್ಯಾಸಾಗಿದೇನ್ನೋ ಮಾತು ಕೇಳಿದಾಗ ಅರಳಿದ ತಂದೆ ಮುಖ ಬರುಬರುತಾ ಮಂಕಾಯಿತೇಕೆ ? ಇದಕ್ಕೆ ಕಾರಣ ತಿಳಿಯಲಿಲ್ಲ. "ಅಣ್ಣಾ ! ಮೈಗೆ ಹುಷಾರಿಲ್ಲವೇ ?" ಎಂದು ಪ್ರೇಮದಿಂದ ಕೇಳಿದಳು. ರಾಮಚಂದ್ರಮೂರ್ತಿ ಎಚ್ಚತ್ತ. "ಇಲ್ಲಮ್ಮ – ಹುಷಾರಿಲ್ಲದೇ ಏನು ! ನಡೀರಿ. ಒಳಗೆ ನಡೀರಿ. ನಿಮ್ಮಮ್ಮ ನಿನ್ನ ರಿಜಲ್ಟ್‌ಗೋಸ್ಕರ ಪಾಪ ಕಾದುಕೂತಿದಾಳೆ....ಅಂದ ಹಾಗೇ ಲೀಲೂ ! ವೆಂಕಟೇಶ ಎಲ್ಲೀ ? ಇಬ್ಬರೂ ಜೊತೇಲೇ ಹೊರಟರಲ್ಲ ಮನೇ ಇಂದಾ ?" ಎಂದ.

"ನಾವು ಚೌಕದ ಹತ್ತಿರ ಹೋಗೋ ವೇಳೆಗೆ, ನನಗೆ ನಮ್ಮಸ್ನೇಹಿತರು ಸಿಕ್ಕಿದರೂ. ಅವನಿಗೂ ಅವನ ಸ್ನೇಹಿತರು ಸಿಕ್ಕಿದರೂ. ಅವನು ಅವರ ಜೊತೇಲಿ ಮಾತಾಡುತಾ ಹೋಟೆಲಕಡೆಗೆ ಹೋದ – ನಾವು ಸೀದಾಹೋಗಿ ರಿಜಲ್ಟ್ ನೋಡಿಕೊಂಡು, ನಮ್ಮ ಹೆಡ್‌ಮೇಡಂ ಹತ್ತಿರ ಮಾತಾಡಿಕೊಂಡು ಮನೆಗೆ ಬರುತಾ ಇದೀವಿ" ಎಂದಳು. ಮುಂದೆ ಪ್ರಶ್ನಿಸುವುದೇ ? ಇಲ್ಲಾ – ತಾನೇ ಹೋಗಿ ವಿಚಾರಿಸುವುದೇ ?........ "ಅವನ ನಂಬರೆಷ್ಟಮ್ಮ ?" ಎಂದ. "ಮೂರುಸಾವಿರದ ನಾನ್ನೂರ ಇಪ್ಪತ್ತಾರಪ್ಪ. ಫೇಲಾಗಿದೆ" ಎಂದಳು ಲೀಲಾ ಸಹಾನುಭೂತಿಯಿಂದ. ಅವಳ ಗೆಳತಿಯೊಬ್ಬಳು "ಯಾರೇ ಲೀಲೂ !

ನಿಮ್ಮ ಮನೆ ಪಾರದ ಹುಡುಗನೇನೇ! ಪಾಪ! ಇ. ಪಿ. ಎಸ್. ಕೂಡ ಬರಲಿಲ್ಲ. ಅಷ್ಟಾದರೂ ಬಂದರೆ ಗಂಡುಹುಡುಗರಿಗೇನಾದರೂ ಒಂದು ಗತಿ. ಇಲ್ಲದಿದ್ದರೆ ದೇವರೇಗತಿ." ಎಂದು ಗಡುಸಾಗಿ ನುಡಿದಳು. "ಹಾಗೆ ಯಾಕಂತೀಯೇ? ಸಪ್ಲಿಮೆಂಟರೀಲಿ ರ್‍ಯಾಂಕ್ ತೆಗೆಯೋ ಛಾನ್ಸ್ ಎವರ್ ಓಪನ್" ಎಂದು ಕುಹಕ ಧ್ವನಿಯಲ್ಲಿ ನುಡಿದಳು ಮತ್ತೊಬ್ಬಳು. "ಫೇಲ್" ಎಂಬ ಮಾತು ಕಿವಿಗೆ ಬೀಳುತ್ತಲೇ ರಾಮಚಂದ್ರಮೂರ್ತಿಯ ಕಣ್ಣು ಮಂಜಾಯಿತು. ಏನೋ ಅಪಘಾತವಾದಂತೆ ತೋರಿತು. ಹುಡುಗಿಯರ ನಂತರದ ಮಾತುಗಳು ಅವನನ್ನು ಅಲ್ಲಿ ನಿಲ್ಲಗೊಡಲಿಲ್ಲ. ನೇರವಾಗಿ ಸರಸರನೆ ಹೊರಟುಬಿಟ್ಟ. ತನ್ನ ತಂದೆಗೆ ಆ ಹುಡುಗನಮೇಲಿನ ಮಮತೆ ಲೀಲೂಗೆ ಗೊತ್ತು. "ಆದರೆ ಮಾಡುವುದೇನು. ಮರಳಿನಲ್ಲಿ ಹಗ್ಗ ಹೊಸೆಯಬಹುದು. ಬಂಡೆಯನ್ನು ಹಿಂಡಿ ಎಣ್ಣೆಯನ್ನು ತರಿಸಬಹುದು. ಆದರೆ ಫೇಲಾದವರನ್ನು ಪ್ಯಾಸ್ ಮಾಡಿಸುವುದು ಅಸಾಧ್ಯ." ಹೀಗಂದುಕೊಂಡು ಲೀಲೂ ಗೆಳತಿಯರೊಂದಿಗೆ ಮನೆಯನ್ನು ಹೊಗುತ್ತಿರುವಂತೆಯೇ "ಅಮ್ಮಾ! ನನಗೆ ಫಸ್ಟ್‌ಕ್ಲಾಸ್" ಎಂದು ಕೂಗಿದಳು. ತಾಯಿ ಒಳಗಿನಿಂದ ಓಡಿಬಂದು ಮಗಳನ್ನಪ್ಪಿ ಕರೆದುಕೊಂಡು ಹೋದಳು. "ಪಾಪ! ವೆಂಕಟೇಶನಿಗೆ ಪೂರ್ತಿ ಫೇಲಾಯಿತಮ್ಮ" ಎಂದ ಕೂಡಲೇ ಮಗಳನ್ನು ಗಾಢವಾಗಪ್ಪಿ, ಕೃತಜ್ಞತೆಯಿಂದ ದೇವರಕಡೆ ನೋಡಿದಳು ಸೀತಮ್ಮ.

## ೨

ಒಂದುವಾರ ಕಳೆದುಹೋಗಿತ್ತು. ಮೂರ್ತಿಯ ಮನೆಯಲ್ಲಿನ ಮೂವರಲ್ಲಿ ಒಬ್ಬರಿಗೂ ಮನಸ್ಸಿಗೆ ನೆಮ್ಮದಿಯಿಲ್ಲ. ಲೀಲು ಕಾಲೇಜಿಗೆ ಸೇರದಿದ್ದಲ್ಲಿ ಪ್ರಾಣಹತ್ಯ ಮಾಡಿಕೊಳ್ಳುವುದಕ್ಕೂ ಮನಸ್ಸಿನಲ್ಲಿ ಸಂಕಲ್ಪಿಸಿದ್ದಳು – ಏಕೆಂದರೆ ಕಾಲೇಜಿಗೆ ಸೇರದೆ ಅವಳೇನಾದರೂ ಮದುವೆಯಾಗಿ ನಿಂತಲ್ಲಿ ಗೆಳತಿಯರ, ತನ್ನ ಮೇಡಮ್‌ಗಳ ಮುಂದೆಲ್ಲಾ ಮಹಾ ಅಪಮಾನವಾದಂತೆ ಅವಳ ಭಾವನೆ. ಸೀತಮ್ಮನ ಮನಸ್ಸಂತೂ ಅಲ್ಲೋಲ ಕಲ್ಲೋಲವಾಗಿತ್ತು. ತನ್ನ ಮನಸ್ಸಿನ ಆಶೆಯನ್ನು ಬದಿಗೊತ್ತಿ, ಗಂಡನ ಮನಸ್ಸಿಗೆ ನೆಮ್ಮದಿಯಾಗಲೆಂದು ಲೀಲೂ

ಕಾಲೇಜ್ ವಿದ್ಯಾಭ್ಯಾಸವನ್ನು ತಡೆಗಟ್ಟಿಹೋದರೂ ಅದು ಸಾಧ್ಯವಿಲ್ಲವಾಗಿದೆ. ಏಕೆಂದರೆ ತನ್ನ ಉತ್ತೇಜನದಿಂದಲೇ ಲೀಲೂ ಅವಳ ಭವಿಷ್ಯವನ್ನು ಅಂತ ರಂಗದಲ್ಲಿ ಖಚಿತವಾಗಿ ರೂಪಿಸಿಕೊಂಡಿದ್ದಳು. ಈಗ ಆ ಕಲ್ಪನೆಯನ್ನು ಅಳಿಸುವುದಾದರೂ ಹೇಗೆ? ಅದಕ್ಕೆ ಲೀಲೂ ಒಪ್ಪುತ್ತಾಳೆಯೇ? ಒಂದು ವೇಳೆ ಒಪ್ಪಿದರೂ ಸಹ, ಅವಳ ಮದುವೆ ವೆಂಕಟೇಶನೊಂದಿಗೆ ಆಗುವ ಸಂಭವ ವಾದರೂ ಎಲ್ಲಿದೆ? ವೆಂಕಟೇಶನು ಒಂದು ದಿನವಾದರೂ ಮನೆಗೆ ಹಿಂತಿರುಗ ಲಿಲ್ಲ. ರಾಮಚಂದ್ರಮೂರ್ತಿಯೂ ಊರೆಲ್ಲಾ ಅಲೆದಲೆದು ಅವನ ಸುಳಿವೇ ಸಿಕ್ಕದೆ ಮನನೊಂದು ಕಂಗೆಟ್ಟು ಕೂತಿದ್ದ. "ತನಗಿಂತ ಚಿಕ್ಕವಳಾದ ಲೀಲೂಗೆ ಫಸ್ಟ್‌ಕ್ಲಾಸ್‌ನಲ್ಲಿ ಪಾಸಾಗಿ, ಗಂಡಸಾದ ತನಗೆ ಫೇಲಾಗಿರುವಾಗ ತಾನು ಅವರ ಮನೆಗೆ ಹಿಂದಿರುಗಿ ಹೋಗಿ ಮುಖ ತೋರಿಸುವುದೆಂತು? 'ನಾವಿಟ್ಟ ಅನ್ನಕ್ಕೆ ಇದೇ ಪ್ರತಿಫಲ?' ಎಂದು ಅವರ ದೃಷ್ಟಿಗಳೇ ಪ್ರಶ್ನಿಸು ತ್ತವಲ್ಲವೇ?" ಈ ಬಗೆಯಾದ ಯೋಚನೆಗಳಿಂದ ವೆಂಕಟೇಶ ತನ್ನ ಹೊಟ್ಟೆಯ ಪಾಡನ್ನೂ ಮರೆತು ಕಣ್ಮರೆಯಾಗಿದ್ದ. ಲೀಲೂವನ್ನು ತನಗೇಕೊಟ್ಟು ವಿವಾಹಮಾಡುವುದಾಗಿ ಮೇಲಿಂದಮೇಲೆ ರಾಮಚಂದ್ರಮೂರ್ತಿಯು ಪ್ರತ್ಯಕ್ಷ ಪರೋಕ್ಷವಾಗಿ ಹೇಳುತ್ತಿದ್ದ ಮಾತುಗಳು ನೆನಪಾದಾಗಲಂತೂ, ಊರನ್ನೇ ಬಿಟ್ಟು ದೇಶಾಂತರ ಹೋಗಿಬಿಡಬೇಕೆಂದು ಅವನ ಮನಸ್ಸಿಗೆ ಅನ್ನಿಸುತ್ತಿತ್ತು. ಆದರೆ ತಂದೆತಾಯಿಯಂತೆ ಅನ್ನವಿಟ್ಟು, ಬಟ್ಟೆಕೊಟ್ಟು, ತಬ್ಬಲಿಗೆ ತೌರಾಗಿ ಸಾಕಿದ ಸೀತಮ್ಮ ಮತ್ತು ರಾಮಚಂದ್ರಮೂರ್ತಿಗೆ ಒಮ್ಮೆಯಾದರೂ ಮುಖ ತೋರಿಸದೇ ಹೋದರೆ ಅದು ಮಹಾ ಕೃತಘ್ನತೆಯಾಗುವುದಲ್ಲವೇ? ಇದೇ ವಿಧವಾದ ಚಿಂತೆಯಲ್ಲಿ ಅವನ ಅಂತಃಕರಣ ತಳಮಳಗೊಂಡಿತ..

ಲೀಲೂ ಕಾಲೇಜಿಗೆ ತನ್ನ ಅರ್ಜಿ ಸಲ್ಲಿಸಲು ಉಳಿದಿದ್ದ ಕಡೆಯ ದಿನ. ತಾನೇ ತಂದೆಯನ್ನು ಕೇಳಲು ಹೆದರಿ ತನ್ನ ರೂಮಿನಲ್ಲೇ ಕಣ್ಣೀರಿಡುತ್ತಿದ್ದಳು. ಹಿಂದಿನಿಂದಲೂ ತನ್ನ ತಂದೆ ಕಾಲೇಜಿಗೆ ಹುಡುಗಿಯರು ಹೋಗಿ ಓದುವುದನ್ನು ನಿಷೇಧಿಸುತ್ತಿದ್ದುದು ಚೆನ್ನಾಗಿ ನೆನಪಿತ್ತು. ಆಗಾಗ ಕಾಲೇಜಿಗೆ ಹೋದ ಹುಡುಗಿಯರು ಒಬ್ಬಿಬ್ಬರ ವಿಚಿತ್ರಪ್ರಸಂಗಗಳನ್ನೂ ಆತ ಮನೆಗೆ ಬಂದು ವರ್ಣಿಸುತ್ತಿದ್ದುದೂ ಚೆನ್ನಾಗಿ ಮನದಟ್ಟಾಗಿತ್ತು. ಆದರೆ ಈಗ, ತಾನು ಕಾಲೇಜಿಗೆ ಸೇರದಿದ್ದಲ್ಲಿ ಹೊರಗಡೆ ತನ್ನ ಗೆಳತಿಯರಾದಿಯಾಗಿ ಪರಿಚಯ

ಸ್ಥರಿಗೆ ಮುಖ ತೋರಿಸುವುದು ಹೇಗೆ? ಅದಕ್ಕಾಗಿ ಅಮ್ಮನಿಗೆ ಹೇಳಿ ಬಿಟ್ಟಿದ್ದಳು– "ಹೇಗಾದರೂ ಮಾಡಿ ಈ ದಿನ ಅರ್ಜಿಗೆ ಅಪ್ಪನು ರುಜು ಹಾಕಿಕೊಟ್ಟರೆ ಸರಿ. ಇಲ್ಲದಿದ್ದರೆ ನಾನಂತೂ ಜೀವ ಬಿಗಿಹಿಡಿದು ಬದುಕಿರಲಾರೆಎಂದು."

ರಾಮಚಂದ್ರಮೂರ್ತಿ ಆರಾಮದ ಕುರ್ಚಿಯ ಮೇಲೆ ಬಳಲಿ ಕುಳಿತಿದ್ದ. ತನ್ನ ಕೆಲಸದಿಂದ ತೆಗೆದುಕೊಂಡಿದ್ದ ನಾಲ್ಕು ದಿನಗಳ ರಜವೂ ಮುಗಿದು ಬಂದಿತ್ತು. ಈ ನಾಲ್ಕು ದಿನಗಳೂ ವೆಂಕಟೇಶನನ್ನು ಊರಲ್ಲೆಲ್ಲಾ ಹುಡುಕಾಡುವುದರಲ್ಲೇ ಕಳೆದುಹೋಗಿತ್ತು. ಮನೆಯಲ್ಲಿ ಈ ಬಗೆಯಾದ ಪರಿಸ್ಥಿತಿ ಬರಲು ತಾನೇ ಕಾರಣನೆಂದು ಕೈಕೈ ಹಿಸುಕಿಕೊಳ್ಳುತ್ತಿದ್ದನು. "ಲೀಲೂಗೆ ಮಿಡಲ್ ಸ್ಕೂಲು ಪರೀಕ್ಷೆಯಾಗುತ್ತಿದ್ದ ಹಾಗೇ, ಓದು ನಿಲ್ಲಿಸಿ ಮನೆಯಲ್ಲಿ ಸಂಗೀತವನ್ನಾದರೂ ಹೇಳಿಸಿದ್ದರೇ?....ಈ ಪ್ರಸಂಗ ಒದಗಿ ಬರುತ್ತಿರಲಿಲ್ಲ. ಅವಳನ್ನು ಹೈಸ್ಕೂಲಿಗೆ ಸೇರಿಸಲು ತಾನೇಕೆ ಒಪ್ಪಬೇಕಾಗಿತ್ತು? ಅಂದು ಲೀಲೂ ವಿದ್ಯಾಭಿವೃದ್ಧಿಯ ಬಗ್ಗೆ ತಾಯಿ ಮಗಳಿಬ್ಬರಿಗೂ ಈಗಿರುವಂಥ ದೃಢ ಕಲ್ಪನೆ ಆಗಿರಲಿಲ್ಲವಲ್ಲಾ?....ಇರಲಿ. ಬೇಕಾದ್ದಾಗಲಿ. ನಾನು ಬಡವ. ನನ್ನ ಕೈಗೆ ಬರಲಿರುವ ಒಂದು ಸಾವಿರ ರೂಪಾಯಿನ ಇನ್ಷೂರೆನ್ಸ್ ಹಣವೇ ನನ್ನ ಆಸ್ತಿ. ಇದರಲ್ಲೇ ಲೀಲೂ ಭವಿಷ್ಯವು ದೃಢವಾಗಿ ರೂಪುಗೊಳ್ಳಬೇಕು. ಕೇವಲ ಒಂದು ಸಾವಿರ ರೂಪಾಯಿನಲ್ಲಿ ಮದುವೆಯಾಗಬೇಕಾದರೆ ತನ್ನ ಅಳಿಯನ ಗ್ರೇಡ್ ಆದರೂ ಎಂಥದಾಗಿರಬೇಕು? ಇಲ್ಲ – ಇಲ್ಲ. ಲೀಲೂ ಕಾಲೇಜಿಗೆ ಹತ್ತಿಬಿಟ್ಟರೆ ತನ್ನ ಹಣವು ಅವಳ ವಿದ್ಯಾಭ್ಯಾಸಕ್ಕೆ ಪುಡಿಯಾಗಿ ಬಿಡುವುದು. ನಂತರ ವಿದ್ಯಾವಂತಳಾದ ಅವಳಿಗೆ ತಕ್ಕ ಗಂಡನನ್ನು ಹೊಂಚುವುದೇ ಪ್ರಯಾಸವಾಗಿ ಬಿಡುವುದು. ಒಂದು ವೇಳೆ ಹೊಂಚಿದರೂ, ಅವರು ಮೆಚ್ಚುವಂತೆ ಹುಡುಗಿಯನ್ನ ಮದುವೆ ಮಾಡಿಕೊಡಲು ಯಾವ ಬ್ಯಾಂಕಿಗೆ ಕನ್ನಾ ಹಾಕುವುದು?....ಛೇ ಛೇ! ಅದೆಲ್ಲಾ ಆಗದ ಮಾತು. ಅಲ್ಲದೇ ಬೆಳೆದ ಮುದ್ದು ಮಗಳು ಕಾಲೇಜಿಗೆ ಹೋಗುವಾಗ ಹೆಣ್ಣು ಮಕ್ಕಳನ್ನು ವಕ್ರದೃಷ್ಟಿಯಿಂದ ನೋಡಲೆಂದೇ ನೆರೆದುನಿಂತ ಆ ಪಾಪಿಗಳ ಕಣ್ಣುಗಳು?!.... ಓಹೋಹೋ! ಕೂಡದು. ಕೂಡದು ನನ್ನ ಲೀಲೂಗೆ ಈಗಾಗಿರುವ ವಿದ್ಯಾಭ್ಯಾಸವೇ ಸಾಕು. ನನ್ನ ಯೋಗ್ಯತೆಗೆ ತಕ್ಕ ಅಳಿಯನನ್ನು ನೋಡಿ,

ಮದುವೆ ಮಾಡಿಬಿಟ್ಟರೆ ಅವಳ ಭವಿಷ್ಯ ನೆಮ್ಮದಿಯಾಗಿ ಬಿಡುವುದು.... ಅಲ್ಲದೇ, ಒಂದು ವೇಳೆ ಅವಳು ಕಾಲೇಜಿನಲ್ಲೂ ಓದಿ ಚೆನ್ನಾಗಿ ಪಾಸ್‌ಮಾಡಿ ಬಿಟ್ಟರೇ....ಅವಳಿಗೆ ತಕ್ಕ....ಅದೂ ಅವಳೊಪ್ಪುವ ವರನನ್ನ ಹುಡುಕಿ,.... ಅಥವಾ ಅವಳೇ ಹುಡುಕಿದವನನ್ನ....ಒಪ್ಪಿ....ಹಾಗೂ ಮದುವೆ ಮಾಡಲು ಸಾಕಷ್ಟು ಹಣವಿಲ್ಲದೆ........ಗಾಂಧರ್ವ ವಿವಾಹ....ಅಬ್ಬಬ್ಬ ! ಯೋಚಿಸಲೂ ಶಕ್ಯವಿಲ್ಲ, ಸಾಧ್ಯವಿಲ್ಲ. ಲೀಲೂ ತಿಳಿಯದ ಹುಡುಗಿ ಎರಡು ದಿನ ಹಠ ಮಾಡುತ್ತಾಳೆ. ನಂತರ ಸುಮ್ಮನಾಗುತ್ತಾಳೆ. . ಅರಿಯದ ವಯಸ್ಸು. ನನ್ನ ಸಂಕಲ್ಪವೇ ಸರಿ.” ಹೀಗೆ ರಾಮಚಂದ್ರಮೂರ್ತಿಯ ಮನಸ್ಸು ತನ್ನನ್ನು ತಾನೇ ಕಚ್ಚುತ್ತಿದ್ದಿತು. ಹಿಂದಿನಿಂದ ಯಾರೋ ಬಾಗಿಲು ತೆರೆದ ಹಾಗಾಯಿತು. ಅಷ್ಟು ನಿಧಾನವಾಗಿ ತೆರೆದದ್ದನ್ನ ನೋಡಿ ವೆಂಕಟೇಶನೋ ಎಂಬ ಅನುಮಾನದಿಂದ ಹಿಂದಿರುಗಿ ನೋಡಿದ. ಬಾಗಿಲಬಳಿ ಸೊರಗಿ ಬೆಂಡಾಗಿದ್ದ ಸೀತಮ್ಮ ಬಂದು ನಿಂತಿದ್ದಳು. ಮುಖದಲ್ಲಿ ಆ ಉತ್ಸಾಹ ಉದ್ವೇಗಗಳು ಅಳಿಸಿ ಹೋಗಿದ್ದುವು. ವಿಷ ಪಾನಮಾಡಲಿರುವ ಭವಿಷ್ಯಹೀನ ಜನುಮದಂತೆ ಕಣ್ಣುಗಳ ದೃಷ್ಟಿ ಕಾಂತಿಹೀನವಾಗಿ ಶೂನ್ಯವಾಗಿದ್ದಿತು. ರಾಮಚಂದ್ರ ಮೂರ್ತಿಯ ಮನಸ್ಸು ಅವಳ ಮುಖವನ್ನು ಕಾಣುತ್ತಲೇ ಕಲಕಿಹೋಯಿತು.

“ಬಾ ಸೀತಾ ! ಕುಳಿತುಕೋ ಬಾ !” ಎಂದ.

ಸೀತಮ್ಮ ಬಾಗಿಲನ್ನು ಮುಚ್ಚಿ ಬಂದು ಪಕ್ಕದ ಬೆತ್ತದ ಕುರ್ಚಿಯಲ್ಲಿ ಕುಳಿತಳು.

“ನಂದಗೋಕುಲದಂತೆ ಸಂತೋಷದಿಂದ ನಲಿಯುತ್ತಿದ್ದ ನನ್ನ ಮನೆಗೆ ಯಾವ ರಾಹುವಿನ ವಕ್ರದೃಷ್ಟಿ ಬಿದ್ದಿತೋ ? ! ಸೀತಾ ! ನೀನೂ ಸಹ ನನ್ನ ಮಾತಿನ ಸತ್ಯಾರ್ಥವನ್ನ ಗ್ರಹಿಸದೆ ಹೀಗೆ ಮನೆಯಲ್ಲಿ ಅಶಾಂತಿಪರ್ವವನ್ನ ಹರಡಿದ್ದೀಯಲ್ಲಾ ?”

“ಮನೆಗೊಂದು ಮುತ್ತಿನಂಥ ಹೆಣ್ಣು. ಬುದ್ಧಿವಂತೆ. ಆ ಮಗು ತನ್ನ ಸ್ನೇಹಿತರಂತೆ ತಾನೂ ಓದಬೇಕೂಂತ ಹೇಳೋದೆ ನಿಮಗೆ ಮಹಾಪಾತಕವಾಗಿ ಕಾಣುತಿದೆಯಲ್ಲಾ ! ನಾನು ಏನು ಹೇಳಲಿ ? ಒಂದೇಸಮನೆ ನಾಲ್ಕಾರುದಿನದಿಂದ ಆ ಮಗು ಅನ್ನ ನೀರೂ ಬಿಟ್ಟು ಗೋಳಾಡುತಾ ಕೂತಿದೆ. ಆದರಮೇಲಿನ ಮಮತೆಯಾದರೂ ನಿಮ್ಮ ಅರ್ಥವಿಲ್ಲದ ಸಂಕಲ್ಪಾನ ಅಳಿಸ

ಲಾರದೇ ಹೋಗಿದೆಯಲ್ಲಾ. ನಿಮ್ಮ ಹುಚ್ಚಿಗೆ ನಾನು ಏನು ಹೇಳಲೀ"

"ಅರ್ಥವಿಲ್ಲದ ಸಂಕಲ್ಪಾ! ನಿಜ ನಿಜ! ನಿನ್ನಸಂಕಲ್ಪದ ಅನರ್ಥ ನಿನಗೆ ತಿಳಿಯದಾಗಿದೆ. ನಾವು ಬಡವರು. ನಮಗೆ ಆಸ್ತಿಯಿಲ್ಲ, ಪಾಸ್ತಿಯಿಲ್ಲ. ಹುಟ್ಟಿರುವುದು ಹೆಣ್ಣುಮಗು. ಎರಡುಕಡೆ ಖರ್ಚು ವಹಿಸಿಕೊಂಡು, ಹೊರ ಲಾರದಷ್ಟು ಸಾಲ ಹೊತ್ತುಕೊಂಡು, ಮದುವೆಮಾಡಿಕೊಟ್ಟರೆ ಆ ಹೆಣ್ಣು ಮಗೂಗೆ ಒಂದು ನೆಲೇಂತ ಸಿಕ್ಕುತ್ತೆ. ಲೀಲೂಗೆ ಈಗಾಗಿರೋದೆ ನಮ್ಮ ಯೋಗ್ಯತೇಗೆ ಹೆಚ್ಚಿನ ವ್ಯಾಸಂಗ. ನಾಳೆ ಅವಳಿಗೆ ಬಿ. ಎಸ್‌ಸಿ. ಫಸ್ಟ್‌ಕ್ಲಾಸ್ ನಲ್ಲಾದರೆ, ಎಂ. ಎಸ್‌ಸಿ. ಫಸ್ಟ್‌ಕ್ಲಾಸ್‌ನಲ್ಲಿ ಪಾಸಾಗಿರೋ ಗಂಡನ್ನೇ ಹುಡುಕಬೇಕು. ಅವರಂತಸ್ತಿಗೆ ತಕ್ಕಹಾಗೆ ಮದುವೆ ಮಾಡಿಕೊಡಬೇಕು. ನಿನ್ನಾಸ್ತಿಯೆಲ್ಲಾ ನಿನ್ನ ಕತ್ತಿನಲ್ಲಿರೋ ತಾಳಿ. ನನ್ನಾಸ್ತಿಯೆಲ್ಲಾ ಈ ಬಡಕಲ ದೇಹದಲ್ಲಿರೋ ಪ್ರಾಣ ಮಾತ್ರ. ಸೀತೇ! ಯೋಚಿಸಿನೋಡು! ಚೆನ್ನಾಗಿ ಯೋಚಿಸಿನೋಡು. ಒಂದುವೇಳೆ ಅವಳು ಡಿಗ್ರೀ ಪರೀಕ್ಷೆಯಾದಮೇಲೆ ನಾವು ನೋಡೋ ಗಂಡನ್ನ ಒಪ್ಪುತಾಳೆಯೇ? ಇಲ್ಲದೇಹೋದರೆ ಅವಳೇ ನೋಡಿ ಕೊಳ್ಳೊ ಗಂಡನ್ನ ನೀನು ಒಪ್ಪುತೀಯೋ?"

"ಛೀ ಛೀ! ಎಂಥಾ ಮಾತಾಡುತೀರಿ ಲೀಲೂ ವಿಚಾರದಲ್ಲಿ? ಅವಳೇ ಗಂಡನ್ನ ನೋಡಿಕೊಳ್ಳೋಣಾಂದರೇನು?"

"ಸೀತೇ! ಲೀಲೂ ಬೆಳೆದ ಹುಡುಗಿಯಾಗುತಾಳೆ. ಹೆಂಗಸೇ ಆಗಿರು ತಾಳೇ. ಅವಳ ಕಣ್ಣುಗಳನ್ನ ಕಟ್ಟೇನು ನೀನು ಕಾಲೇಜಿಗೆ ಕಳಿಸೊಲ್ಲ. ಆ ವಾತಾವರಣದಲ್ಲಿ ಅಲ್ಲಿಗೆ ಅದು ಸಹಜವಾಗೇ ಇರುತ್ತೇ. ನಾರಣಯ್ಯರ ಮಗಳ ವಿಚಾರ ನೆನಪಿರಲಿ. ಗೌರಿಯಂಥ ಮಗು. ಆದರೆ ಕಡೆಗೆ ಯಾರಹಿಂದೆ ಓಡಿ ಹೋಯಿತು?.... ಬೇಡ! ಬೇಡ! ಸಾರಿಸಾರಿ ಹೇಳುತೇನೆ. ನಮ್ಮ ಯೋಗ್ಯ ತೇಗೆ ಕಾಲೇಜು ವಿದ್ಯಾಭ್ಯಾಸ ನಮ್ಮ ಲೀಲೂಗೆ ಬೇಡ. ಅವಳ ವಿಚಾರದಲ್ಲಿ ನಿನಗೆ ನಿಜವಾದ ಪ್ರೀತಿಯಿದ್ದರೆ, ಅವಳನ್ನ ಸಮಾಧಾನಮಾಡು. ಮನೇಲೇ ಒಂದುವರ್ಷ ಸಂಗಿತಪಾಠ ಹೇಳಿಸೋಣ."

"ಆಮೇಲೇ?"

"ಆಮೇಲೆ ಮದುವೆ ಮಾಡೋಣ."

"ಯಾರಿಗೆ ಕೊಟ್ರು ?"

"ವೆಂಕಟೇಶನಿಗೆ"

"ಇ. ಪಿ. ಎಸ್. ಕೂಡಾ ಆಗದ ಆ ಪಡ್ಡ........"

"ಸಾಕು ಸುಮ್ಮನಾಗು, ಟೈಫಾಯಿಡ್ ಬಂದು ನರಳಿ, ನಿತ್ರಾಣ ವಾಗಿದ್ದರೂ, ಡಾಕ್ಟರು ಬೇಡಾಂದ್ರೂ, ಪರೀಕ್ಷೆಗೆ ಕೂತ ಆ ಹುಡುಗ – ನೆಟ್ಟಗೆ ಓದಿದ್ದರೆ ಅವನೂ ಫಸ್ಟ್‌ಕ್ಲಾಸ್ ಬರುತಿದ್ದ."

"ಅಲ್ಲಾಂದರೇ ! ಲೀಲೂ ಎಸ್. ಎಸ್. ಎಲ್. ಸಿ. ಫಸ್ಟ್‌ಕ್ಲಾಸ್. ಅವನು ಫೇಲ್. ವರಸಾಮ್ಯ ಹೇಗಾಗುತ್ತೇ ? ನಿಮಗಿನ್ನೂ ಆ ಹುಡುಗನ ಹುಚ್ಚು ಹೋಗಲಿಲ್ಲವಲ್ಲ ?"

"ಸೀತಾ ! ಕೇಳು. ಅವನು ಸಪ್ಲಿಮೆಂಟರಿ ಪರೀಕ್ಷೇಲಿ ಫಸ್ಟ್‌ಕ್ಲಾಸ್‌ನಲ್ಲಿ ಪ್ಯಾಸ್‌ಮಾಡಿ, ಕಾಲೇಜಿಗೆ ಸೇರಿ, ಇಂಟರ್‌ಮೀಡಿಯೆಟ್ ಪರೀಕ್ಷೇಲಿ ಫಸ್ಟ್‌ಕ್ಲಾಸ್‌ನಲ್ಲಿ ಪ್ಯಾಸಾದಮೇಲೆ ಮದುವೆ ಮಾಡಿ, ಆಮೇಲೆ ಅವನನ್ನ ಇಂಜನಿಯರಿಂಗ್‌ಗೆ ಸೇರಿಸೋದು. ತಿಳೀತೇ ?"

"ನಮ್ಮ ದುರಾದೃಷ್ಟಕ್ಕೆ ಏನಂತಾ ಹೇಳಲೀ ? ಫೇಲಾಗಿ ಕೂತಿರೋ ಆ ಕಂಡೋರ ಹುಡುಗನ ಭವಿಷ್ಯದ ಕನಸುಕಾಣುತಾ ಹಿಗ್ಗುತೀರೇ ಹೊರತೂ, ಫಸ್ಟ್‌ಕ್ಲಾಸ್‌ನಲ್ಲಿ ಪ್ಯಾಸ್‌ಮಾಡಿ, ಮುಂದಕ್ಕೆ ಓದುತೀನೀ ಅನ್ನೋ ಹೊಟ್ಟೇಲಿ ಹುಟ್ಟಿದ ಮಗಳ ಕಣ್ಣೀರಕಡೆ ಗಮನವೇ ಇಲ್ಲವಲ್ಲ."

"ಸೀತಾ !! ನನ್ನ ಕಡೇ ಮಾತು ಕೇಳಿಬಿಡು. ಕಾಲೇಜು, ಡಿಗ್ರೀ, ಈ ವಿಧ್ಯಾಭ್ಯಾಸ, ಹೊಡೆದಾಟ, ಇವೆಲ್ಲಾ ಕೇವಲ ಗಂಡಸರಿಗೆ ; ಅದೂ ಕೇವಲ ಅವರ ಹೊಟ್ಟೇಪಾಡಿಗೋಸ್ಕರವೇ. ಇನ್ಯಾವ ಶ್ರೇಯಸ್ಸಿಗೂ ಅಲ್ಲ. ಇಂಥಾ ವಿದ್ಯಾಭ್ಯಾಸ ಹೆಣ್ಣುಮಕ್ಕಳಿಗೆ ಸುತರಾಂ ಕೂಡದು. ಯಾಕೇಂದರೆ ಸಂಪಾದಿಸಿ ತಂದುಹಾಕೋ ಗಂಡನ ಆಶ್ರಯದಲ್ಲಿ ನೆಮ್ಮದಿಯಾಗಿರಬೇಕಾದ ವರು ಅವರು ಈ ವಿದ್ಯಾಭ್ಯಾಸದಿಂದ ಅವರ ನೆಮ್ಮದಿ ಹಾಳಾಗುತ್ತೆ. ಮನೆ ಹಾಳಾಗುತ್ತೆ. ತಂದೆತಾಯಿಗಳ ಬಾಳು ಹಾಳಾಗುತ್ತೆ. ಕೇಳು ಸೀತೇ ! ಗಂಡಸು ಮರ – ಹೆಂಗಸು ಅದಕ್ಕೆ ಹಬ್ಬಿರಬೇಕಾದ ಬಳ್ಳಿ. ಮದುವೇಂದರೆ, ಈ ರೀತಿ ಸ್ವತಂತ್ರವಾಗಿ ಜಗತ್ತಿನ ಝಂಝಾವಾತಗಳನ್ನ ಎದುರಿಸಿ ನಿಲ್ಲಲಾರದ ಬಳ್ಳಿಗೆ, ಯೋಗ್ಯವಾಗಿ ನೆಟ್ಟಗೆ ಬೆಳೆದಿರೋ ಒಂದು ವೃಕ್ಷ ತೋರಿಸಿ, ಅದಕ್ಕೆ

ಹೆಬ್ಬುವಂತೆ ಮಾಡೋದು. ನೀನು ಸಂಕಲ್ಪಿಸಿರೋದು ಕೈಯಾರ ಬೆಳಸಿದ ಬಳ್ಳೀನ ನೀರವಾಗಿ ನಿಲ್ಲಿಸಿ, ಕೈಬಿಟ್ಟು, ಕಣ್ಣು ಮುಚ್ಚಿಕೊಳ್ಳೋ ಅಂಥ ಆತ್ಮ ಘಾತುಕತನ – ಆತ್ಮವಂಚನೆ. ಸೀತಾ ! ಇನ್ನು ನನ್ನ ಬೆದಕಬೇಡ ! ಹೋಗು ! ಹೊರಟುಹೋಗು !" ರಾಮಚಂದ್ರಮೂರ್ತಿಯು ಮತ್ತೆ ಉದ್ವಿಗ್ನನಾಗಿದ್ದ. ಸೀತಮ್ಮನ ಮನಸ್ಸು ಗಂಡನ ಅಂತಃಕರಣವನ್ನರಿಯಲು ಹೊಯ್ದಾಡುತ್ತಿತ್ತು. "ಪಾಪ ! ತನಗಿಂತ ಹೆಚ್ಚಾಗಿ ಮಗಳನ್ನು ಪ್ರೀತಿಸುತ್ತಾರೆ. ಅವಳ ಸುಖಕ್ಕಾಗಿ ಏನುಮಾಡಲೂ ಹಿಂದೆಗೆಯುವುದಿಲ್ಲ. ಆದಕಾರಣ ಅವರ ಈ ವಿಪರೀತ ಸಂಕಲ್ಪನೆಯ ಉದ್ದೇಶವೂ, ಕಾರಣವೂ ಮಗಳಮೇಲಿನ ಪ್ರೇಮವೇ ಅಲ್ಲವೇ ? ಹಾಗಾದರೆ ತನ್ನ ಹೃದಯದಲ್ಲಿ ಮಗಳ ವಿಚಾರದಲ್ಲಿ ಪ್ರೇಮವಿಲ್ಲವೇ ? ಇದೆ. ಅಗಾಧವಾಗಿದೆ. ಹೀಗಿದ್ದೂ ಇಬ್ಬರ ಉದ್ದೇಶಗಳೂ ವಿರುದ್ಧವಾಗಲು ಕಾರಣವೇನು ?.... ಅರಿಯದಾಗಿದೆ. ಇರಲಿ. ಈ ಸಂಜೆ ಮಠಕ್ಕೆಹೋಗಿ ಸ್ವಾಮಿಗಳನ್ನ ಒಂದುಮಾತು ಕೇಳಿದರೆ ಅವರು ಸಮಂಜಸವಾಗಿ ಹೇಳಿಬಿಡುವರು." ಹೀಗೆಂದು ತೀರ್ಮಾನಿಸಿಕೊಂಡು ಸೀತಮ್ಮನು ಹೊರಗೆ ಬಂದುಬಿಟ್ಟಳು.

ಹೊರಗಡೆ ತನ್ನ ಕೋಣೆಯ ಕಿಟಕಿಯಿಂದ ತಾಯಿಯ ಬರುವಿಕೆಯನ್ನೇ ಎದುರು ನೋಡುತ್ತಿದ್ದ ಲೀಲಾ "ಅಮ್ಮಾ ! ಏನಾಯಿತು ?" ಎಂದು ಕಾತುರಳಾಗಿ ಪ್ರಶ್ನಿಸಿದಳು. "ಸ್ವಲ್ಪ ನಿಧಾನಿಸು ಲೀಲಾ – ಅವರ ಮನಸ್ಸು ಸ್ವಸ್ಥವಾಗಿಲ್ಲ." ಎಂದು ತಾಯಿಯು ನುಡಿದ ಶುಷ್ಕವಾದ ಉತ್ತರದಿಂದ ಲೀಲಾ ನಿರಾಶಳಾದಳು "ಅಮ್ಮನ ಮನಸ್ಸೂ ಬದಲಾಯಿಸಿಬಿಡಿತೋ ? ಇಲ್ಲ – ನನ್ನ ಕಣ್ಣೀರಿಗಿಂತ–ನನ್ನ ದುಃಖಕ್ಕಿಂತ ಅಪ್ಪನ ಹಠವೇ ಅಮ್ಮನಿಗೆ ಹೆಚ್ಚಾಯಿತೋ ? ಈ ದಿನವೇ ಕಡೆಯದಿನ ಅರ್ಜಿ ಕೊಟ್ಟುಬರಲು. ಏನಾದರೂ ಮಾಡಲೇಬೇಕು. ಕಾಲೇಜು ಸೇರಲೇಬೇಕು. ಗತ್ಯಂತರವಿಲ್ಲ" ಹೀಗೆಂದು ಯೋಚಿಸುತ್ತಾ ಲೀಲಾ ಮಂಚದಮೇಲೆ ಒರಗಿದ್ದಳು.

ಸೀತಮ್ಮನು ಮಠಕ್ಕೆ ಹೋಗಲು ಅಣಿಮಾಡಿಕೊಳ್ಳುತ್ತಿದ್ದಳು. "ಯಾವ ಬಗೆಯಾದ ಮಮಕಾರದ ಸುಳಿವಾಗಲೀ, ಫಲಾಪೇಕ್ಷೆಯಾಗಲೀ ಇಲ್ಲದೆ ಪವಿತ್ರ ಗಂಗೆಯಂತಿರುವ ಸ್ವಾಮಿಗಳ ತಿಳಿಜಲದಲ್ಲಿ ತನ್ನ ಕುಟುಂಬದ, ತನ್ನ ಪತಿಯ ನಿಜಸ್ಥಿತಿಗಳು ತಿಳಿದುಬರುವುವು. ಅವರು ಜಗತ್ತಿನ ಕಲ್ಯಾಣಕ್ಕಾಗಿ

ಈಶ್ವರ ಪ್ರಾರ್ಥನೆಮಾಡುತ್ತಾ ಜೀವಿಸಿರುವವರು. ಅವರ ಮಾತಿನಂತೆ ನಡೆದರೆ ನಮ್ಮ ಲೀಲೂ ಕಲ್ಯಾಣ ಸಹಾ ಆಗೇ ಆಗುವುದು." ಹೀಗೆಂಬ ಯೋಚನೆ, ಆಶೆ, ಆಕಾಂಕ್ಷೆಗಳು ಸೀತಮ್ಮನ ಹೃದಯವನ್ನು ತುಂಬುತ್ತಿದ್ದುವು. ಹಾಲು, ಹಣ್ಣುಹಂಪಲುಗಳನ್ನು ಅಣಿಮಾಡಿಕೊಂಡು ಸೀತಮ್ಮನು ಮನೆಯಿಂದ ಹೊರಹೊರಟಳು. ಇದನ್ನು ನೋಡುತ್ತಿದ್ದ ಲೀಲಾ ನಿರಾಶಳಾದಳು. "ನಮ್ಮ ಮನೆಯ ವಿಚಾರವನ್ನು ನಮ್ಮ ನಮ್ಮಲ್ಲಿ ತೀರ್ಮಾನ ಮಾಡುವುದನ್ನು ಬಿಟ್ಟು, ಅದೂ ಕನ್ನಡಿಯಂತೆ ಸ್ಪಷ್ಟವಾಗಿರುವ ವಿಚಾರ – ಇದಕ್ಕಾಗಿ ಕಲ್ಲುದೇವರನ್ನಾಗಲೀ, ನಮ್ಮಂತೆಯೇ ಇರುವ ಇತರ ಮಾನವರ ಸಹಾಯ ಸಲಹೆಗಳನ್ನಾಗಲಿ ಬೇಡುವುದು ಶುದ್ಧ ಮೌಢ್ಯ. ಈ ಮೌಢ್ಯ ಹೋಗಬೇಕಾದರೆ ನಮ್ಮ ದೇಶದ ಹೆಣ್ಣುಹುಡುಗಿಯರೆಲ್ಲರೂ ಇಂಗ್ಲಿಷ್ ಕಲಿತು, ಕಾಲೇಜುಗಳಲ್ಲಿ ಓದಿ, ಪ್ರಪಂಚದ ವಿಚಾರದಲ್ಲಿ ಸರಿಯಾದ ಪರಿಜ್ಞಾನವನ್ನು ಸಂಪಾದಿಸಿ, ಆತ್ಮಬಲ, ಆತ್ಮಚಿಂತನೆಯಿಂದ ಜೀವನ ಸಮಸ್ಯೆಗಳನ್ನು ಪರಿಹರಿಸಬೇಕು. ಹೀಗಿರುವಲ್ಲಿ, ನನ್ನಮ್ಮ ಮಗಳನ್ನು ಕಾಲೇಜಿಗೆ ಸೇರಿಸುವ ಸಣ್ಣದೊಂದು ವಿಚಾರಕ್ಕಾಗಿ ತಾನೇ ತೀರ್ಮಾನಿಸಲಾರದೇ, ಕಲ್ಲುದೇವರ ಬಳಿಗೋ, ವ್ಯವಹಾರದ ಅರಿವೇ ಇಲ್ಲದೆ, ಅದರಿಂದ ಓಡಿಹೋಗಿ ಕೈಕಟ್ಟಿ ಕುಳಿತಿರುವ ಯಾವನೋ ಯತಿಯ ಬಳಿಗೋ ಹೋಗುವುದೇ? ಮಹಾ ಮೌಢ್ಯ!....ಆದರೆ, ನ್ಯಾಯವೇ! ನಮ್ಮ ತಾಯಿ ತಾನೇ ಏನು ಓದಿದ್ದಾಳೆ ಮಹಾ–ಅವಳಿಗೆ ಇಷ್ಟೊಂದು ವಿಚಾರ ಶಕ್ತಿ ಇರಲು?....ಹುಂ. ಇನ್ನು ಇವರ ಸಲಹೆ, ತೀರ್ಮಾನಗಳಾಗುವಲ್ಲಿ ವರುಷವೇ ಪೂರೈಸಿ ಹೋಗುವುದೋ ಏನೋ?....ಏನು ಮಾಡುವುದು?" ಹೀಗೆಂದು ಯೋಚಿಸುತ್ತಾ ಕೋಣೆಯಲ್ಲಿ ಶತಪಥ ತಿರುಗುತ್ತಿದ್ದಳು. ಎದುರಿಗೆ ಗೋಡೆಯಲ್ಲಿ ತೂಗುಹಾಕಿದ್ದ ತನ್ನ ತಂದೆಯ ಫೋಟೋ ಪ್ರೇಮದಿಂದ ತನ್ನನ್ನೇ ಹತ್ತಿರ ಕರೆಯುತ್ತಿದ್ದಂತೆ ಭಾಸವಾಯಿತು. ಮೆಲ್ಲಗೆ ಸಮೀಪಕ್ಕೆ ಹೋದಳು. ಹಾಗೇ ನೋಡುತ್ತಿರುವಲ್ಲಿ ಅದರ ಮೂಲೆಯಲ್ಲಿದ್ದ ತನ್ನ ತಂದೆಯ ರುಜು, ಅದರ ಕೆಳಗಿದ್ದ ಫೋಟೋ ತೆಗೆಸಿದ ತಾರೀಖು ಕಣ್ಣಿಗೆ ಬಿದ್ದುವು. ಏನೋ ಒಂದು ದಾರಿ ಹೊಳೆದಂತಾಯಿತು. ತಟ್ಟನೆ ಕಾಗದ ಪೇನಾ ಹಿಡಿದು ಆ ಫೋಟೋ ಮೇಲಿಟ್ಟು ತಂದೆಯ ರುಜುವನ್ನು ಅದರಂತೆಯೇ ಹತ್ತಾರು ಬಾರಿ ಬರೆದಳು. ಬರ

ಬರುತ್ತಾ ಅಲ್ಲಿನ ಮೂಲಕ್ಕೆ ವ್ಯತ್ಯಾಸವೇ ಇಲ್ಲದಂತೆ ರುಜು ಬಂದಿತು. ಮೇಜಿನ ಮೇಲಿದ್ದ ಕಾಲೇಜ್ ಅಪ್ಲಿಕೇಷನ್ ಫಾರಂನ್ನು ಕೈಗೆ ತೆಗೆದುಕೊಂಡು ನಿಧಾನವಾಗಿ ಅದರಲ್ಲಿ ತಂದೆಯ ರುಜುವಾಗಬೇಕಾಗಿದ್ದ ಸ್ಥಳದಲ್ಲಿ ತಾನೇ ಆತನ ರುಜುವನ್ನು ಬರೆದಳು – "ನಿಜ! ನಿಜವಾಗಿಯೂ ಆತನೇ ರುಜು ಮಾಡಿದಂತಿದೆ. ಏನೂ ವ್ಯತ್ಯಾಸವಿಲ್ಲ" ಲೀಲೂಗೆ ಸಂತೋಷದ ಪ್ರವಾಹ ದೊಂದಿಗೆ ಏನೋ ದೂರದ ಭಯದ ಸುಳಿಯೊಂದು–"ಹೀಗೆ ತಂದೆಯ ರುಜು ವನ್ನು ತಾನೇ ಮಾಡಿದ್ದು ಫೋರ್ಜರಿ! ಹೌದು! ನಾಳೆ ಕಾಲೇಜಿನವರಿಗೆ ಇದು ಗೊತ್ತಾಗಿಬಿಟ್ಟರೆ ಎಂಥ ಅವಮಾನ! ಅಯ್ಯೋ! ಉಂಟೆ ಉಂಟೇ! ಮಾಡಬಾರದಾಗಿತ್ತು....ಆದರೆ ಈಗ ತಂದೆ ಮಾಡುವಂತಿಲ್ಲ. ಈ ದಿನವೇ ಕಡೆಯ ದಿನ....ಅಲ್ಲದೇ ನಾಳೆ ತಂದೆಯವರಿಗೆ ತಿಳಿದ ಮೇಲೂ, ಅವರು ನನ್ನ ಮೇಲೆ ದೂರುಹೇಳಿ ಅವಮಾನ ಮಾಡಿಸುವರೇ! ಅಂಥ ತಂದೆಯಲ್ಲಾ. ತನ್ನನ್ನ ತಮ್ಮ ಪಂಚಪ್ರಾಣವಾಗಿ ತಿಳಿದಿದ್ದಾರೆ. ಈಗೇನೋ 'ಆ ಹುಡುಗ ವೆಂಕಟೇಶನಿಗೆ ಫೇಲಾಗಿ ಹೋಗಿದೆಯಲ್ಲಾ—ಅಲ್ಲದೇ ಅವನೂ ಸಹ ಮುಖ ತೋರಿಸದೆ ಹೊರಟುಹೋದನಲ್ಲಾ' ಎಂಬ ದುಃಖದಲ್ಲಿ ಮಂಕಾಗಿ ಬಿಟ್ಟಿದ್ದಾರೆ. ನಾಳೆ ವೆಂಕಟೇಶನೂ ಬಂದಮೇಲೆ ಅವರ ಮನಸ್ಸಿಗೂ ನೆಮ್ಮದಿಯಾದಮೇಲೆ ನಾನು ಮಾಡಿರುವ ಈ ಕೆಲಸಕ್ಕೆ ನಿಜವಾಗಿಯೂ 'ಜಾಣೆ' ಎಂದು ಬೆನ್ನು ಚಪ್ಪರಿಸುತ್ತಾರೆ ಇರಲಿ. ಈಗಾಗಲೇ ಹೊತ್ತಾ ಗುತ್ತಿದೆ. ನಾನು ಸರೋಜನ ಮನೆಗೆ ಹೋಗಿ, ಅವಳೊಂದಿಗೆ ಕಾಲೇಜಿಗೆ ಹೋಗಿ ಅಪ್ಲಿಕೇಷನ್ ಫಾರಂ, ಅಡ್ಮಿಷನ್ ಫೀಸ್ ಕೊಟ್ಟು ಬಂದುಬಿಡುತ್ತೇನೆ." ಹೀಗೆಂದು ಸಂಕಲ್ಪಿಸಿ, ಫಾರಂನ್ನು ಸುರಳಿಮಾಡಿ ಹಿಡಿದು ಕೋಣೆಯ ಬಾಗಿಲನ್ನು ಮುಂದಕ್ಕೆಹಾಕಿ ಹೊರಹೊರಟಳು. ಹಾಗೇ ತಂದೆಯನ್ನು ಒಮ್ಮೆ ಇಣಿಕಿನೋಡಿದಳು. ಮೂರ್ತಿಯು ಹಿಂದಿನಂತೆ ಬಾಗಿಲಕಡೆಗೆ ಬೆನ್ನುಮಾಡಿ ಚಿಂತಾಕ್ರಾಂತನಾಗಿ ಕುಳಿತಿದ್ದ. ಪಾದರಕ್ಷೆಗಳನ್ನು ಮೆಟ್ಟಿದರೆ ಸದ್ದಾದೀತೆಂದು ಲೀಲೂ ಬರಿಗಾಲಲ್ಲೇ ನಡೆದು ಹೊರಟಳು.

* * *

ಒಂದು ಘಂಟೆಯು ಉರುಳಿತ್ತು. ರಾಮಚಂದ್ರಮೂರ್ತಿಯ ಕೋಣೆಯ ಅರೆತೆರೆದ ಬಾಗಿಲು ಸದ್ದಾಯಿತು. ಹಿಂದಿರುಗಿನೋಡಿದ.

ಸೀತಮ್ಮನು ಅನುಕಂಪದೀಪ ಒಳಗೆಬಂದು ಹತ್ತಿರದ ಕುರ್ಚಿಯನ್ನೆಳೆದು ಕುಳಿತಳು.

"ಸ್ವಾಮಿಗಳ ಬಳಿಗೆ ಹೋಗಿ ಪ್ರಶ್ನೆ ಮಾಡಿದೇಂದ್ರೇ ಲೀಲೂ ವಿಚಾರ. ಅವರೂ ಸಹ 'ಹೆಣ್ಣುಮಗುವಿಗೆ ಆ ವಿದ್ಯಾಭ್ಯಾಸದಿಂದ ಸಾರ್ಥಕವಂತೂ ಇಲ್ಲ. ಸುತರಾಂ ಇಲ್ಲ. ಆದರೆ ಬಾಧಕಗಳು ಪ್ರತ್ಯಕ್ಷ ಪರೋಕ್ಷ ನೂರಾರಿವೆ. ಗೃಹಿಣಿಯಾಗಲೀ ಮಗಳೂಂತ ತಂದೆ ತಾಯಿಗಳಿಗೆ ಅಭಿಪ್ರಾಯವಿದ್ದರೆ ಆ ಕಾಲೇಜ್ ಹವಾ ಸೋಕದಿರಲಿ ಮಗೂಗೆ', ಅಂತಾನೇ ಅಪ್ಪಣೆ ಕೊಡಿಸಿದರು." ಎಂದಳು. ಈ ಮಾತುಗಳನ್ನು ಕೇಳುತಾ ಕೇಳುತಾ 'ಕತ್ತಲೆಯ ಮನೆಗೆ ಮಣಿ ದೀಪವಾದಂತೆ' ಆಯಿತು. "ಹೌದೇ ಸೀತಾ! ಸತ್ಯವಾಗಿಯೂ ಹಾಗೆ ಹೇಳಿದರೇ? ಇಲ್ಲ, ನೀನು ನನ್ನನ್ನ ಹಾಸ್ಯ ಮಾಡೋಕೋಸ್ಕರ ಹೀಗಾಡುತಾ ಇದೀಯೋ? ನಿಜಹೇಳು" ಎಂದು ಅಂಗಲಾಚಿದ. ಸೀತಮ್ಮ ಗಂಡನ ಕೈಗಳನ್ನು ಹಿಡಿದು – "ಸತ್ಯವಾಗಿಯೂ ಹೇಳಿದರೂಂದರೆ. ಸುಮಾರು ಅರ್ಧಘಂಟೆ ಹೇಳಿದರು. ನಾನು ಅವರನ್ನ ಪ್ರಶ್ನೆ ಮಾಡೋದು ಹಾಗಿರಲಿ. ಅವರೇ ನನ್ನನ್ನು ಪ್ರಶ್ನೆಮಾಡುತಾ ನನ್ನ ಬಾಯಿಂದಲೇ ಈ ಮಾತುಗಳನ್ನ ಹೊರಡಿಸಿದರು. ಅದೇನೋ – ಶ್ರೇಯಸ್ಸು – ಪ್ರೇಯಸ್ಸು ಎರಡು ಮುಖ ಪ್ರತಿಯೊಂದು ವಿಚಾರಕ್ಕೂ ಬಂದು ನಿಲ್ಲುತ್ತೆ. ಪ್ರೇಯಸ್ಸು ಎಷ್ಟು ಮನೋಹರವಾಗಿ ಕಂಡರೂ ಅದಕ್ಕೆ ಮಾರು ಹೋಗಬಾರದು. ಶ್ರೇಯಸ್ಸು ಕಠಿಣವಾಗಿ ಕಂಡರೂ ಅದನ್ನೇ ಆಶ್ರಯಿಸಬೇಕೂಂತ ಎಲ್ಲಾ ಹೇಳಿ, ನಮ್ಮ ದೇಶ, ನಮ್ಮ ದೇಶದ ಹೆಂಗಸರು – ಇತರ ದೇಶದವರಿಗಿಂತ ಇವರಲ್ಲಿ ಅಪೇಕ್ಷಿಸೋ ಧರ್ಮ ಪ್ರೇಮ, ಅದರ ಮುಂದಿನ ಶ್ರೇಯಸ್ಸು ಎಲ್ಲಾನೂ ವಿವರವಾಗಿ ಹೇಳಿದರು. ಅವರ ಮಾತೆಲ್ಲಾ ನನಗೆ ಅರ್ಥವಾಗಲಿಲ್ಲ. ಆದರೆ ನಮ್ಮ ಲೀಲೂ ವಿಚಾರವಂತೂ ಸ್ಪಷ್ಟವಾಗಿ ಅರ್ಥವಾಯಿತು. ಈಗೀಗ ಅವಳ ಈಚಿನ ಕೆಲವು ಕೊಂಕುಗಳಿಗೂ ಕಾರಣ ತಿಳೀತಾ ಇದೆ. ನಾನು ಅದಕ್ಕೆ ಆ ಒಬ್ಬಿಬ್ಬರು ಸ್ನೇಹಿತರೇ ಕಾರಣರೂಂತಿದ್ದೆ. ಅಲ್ಲದೆ ಏನೋ ಮುದ್ದಿನಿಂದ ಸಾಕಿದ್ದೀವಿ ; ಆದರಿಂದ ಹೀಗಾಡ್ತ್ಯಾಳೂಂತಿದ್ದೆ ; ಸ್ವಾಮಿಗಳು ಅಂಜನಾ ಹಾಕ್ಕೊಂಡು ನೋಡೋಹಾಗೆ ಇವರ ಸಣ್ಣಪುಟ್ಟ ನಡೆವಳಿಕೆಗಳಲ್ಲಿ ಬರೋ ವಕ್ರಗತೀನೆಲ್ಲಾ ಗೆರೇ ಎಳೆದಹಾಗೆ ತೋರಿಸಿ

ಬಿಟ್ಟಿರು. ನಿಶ್ಚಯ. ಈಗ ನಿಮ್ಮ ಸಂಕಲ್ಪದ ಅರ್ಥವಾಗುತಾ ಇದೆ. ಸದ್ಯ ನನಗಾದರೂ ಇಷ್ಟು ಬೇಗ ತಿಳಿವಳಿಕೆ ಬಂತಲ್ಲಾ. ಅಲ್ಲಾಂದ್ರೇ! ಇಂಥಾ ಪರಿಸ್ಥಿತಿಲಿರೋರ ಒಬ್ಬೊಬ್ಬರ ನಡೆನುಡೀನೂ ಸಣ್ಣಪುಟ್ಟ ವಿಚಾರಗಳಲ್ಲೆಲ್ಲಾ ಹೀಗೆ ಹೀಗೆ ಹರಿಯುತ್ತೇಂತ ಹ್ಯಾಗೆ ಗೊತ್ತಾಗುತ್ತೆ ಸ್ವಾಮಿಗಳಿಗೆ?"

"ಅದೊಂದು ಅನುಭವಶಾಸ್ತ್ರ ಸೀತಾ! ಮನುಷ್ಯನ ಮನಸ್ಸಿನ ಸಹಸ್ರ ಮುಖಗಳನ್ನೂ ಅದರ ವಕ್ರವೃತ್ತಿಗಳನ್ನೂ ಅಳೆದು ಕಂಡಿರುತಾರೆ. ಹೊರಗಿನ ವ್ಯವಹಾರದಲ್ಲಿರೋ ಮೂಲದೋಷಗಳನ್ನೆಲ್ಲಾ ತಿಳಿದು ಪಟ್ಟಿಮಾಡಿ ಕೊಂಡಿರುತಾರೆ. ನಾವು ಹದಿನೆಂಟೆಂಟಲ ನೂರನಲವತ್ತನಾಲ್ಕೂಂತ ಮಗ್ಗಿ ಹೇಳಿಬಿಟ್ಟಹಾಗೆ ಗುಣಾಕಾರಮಾಡಿ ಕ್ರಿಯೆ ಪ್ರಕ್ರಿಯೆಗಳನ ಹೇಳಿಬಿಡುತಾರೆ. ನಡೀ ದೇವರಮನೆಗೆ ಹೋಗಿ ತುಪ್ಪದದೀಪ ಹಚ್ಚು. ನನ್ನ ಮನೆಗೆ ಈಗ ಬೆಳಕಾದಹಾಗಾಯಿತು. ಮನೆಗೆ ನೆರಳುಬಿಟ್ಟಿದ್ದ ಅನಿಷ್ಟ ದೂರವಾದಹಾಗಾ ಯಿತು. ನೋಡುಸೀತಾ! ಗೃಹಣಿ ಹಿತೈಷಿಣಿಯಾಗಿದ್ದರೆ ಹೀಗೆ, ಆ ಮನೆ ಬೆಳಕಾಗಿರುತ್ತೆ" ಎಂದು ಮೂರ್ತಿ ಸೀತಮ್ಮನೊಂದಿಗೆ ಹೊರ ಹೊರಟ. ಲೀಲಾ ರೂಮಿಗೆಬರುವಂತೆಯೇ, "ಲೀಲಾ; ಲೀಲಾ" ಎಂದು ಕೂಗಿದ. "ಎಲ್ಲೋ ಸ್ನೇಹಿತರಮನೆಗೆ ಹೋಗಿರಬಹುದು" ಎಂದು ಸೀತಮ್ಮನು ಹೇಳಿದಮೇಲೆ ಇಬ್ಬರೂ ದೇವರ ಕೋಣೆಯಕಡೆಗೆ ನಡೆದರು.

೩

ಎಂಟುದಿನಗಳು ಉರುಳಿದ್ದುವು. ಲೀಲಾ ತಾನು ಮಾಡಿರುವ ಕೆಲಸ ವನ್ನು ತಾಯಿಯಬಳಿ ವಿಧಿಯಿಲ್ಲದೆ ಬಾಯಿಬಿಟ್ಟಿದ್ದಳು. ಸೀತಮ್ಮನು ಖೇದಗೊಂಡು ಮಗಳನ್ನು ಸಮಾಧಾನಪಡಿಸಿ, ವಿದ್ಯಾಭ್ಯಾಸವನ್ನು ನಿಲ್ಲಿಸಲು ಬಹಳ ಪ್ರಯತ್ನಪಟ್ಟಳು. ಸಾಧ್ಯವಾಗಲಿಲ್ಲ. ಲೀಲಾಗೆ ಓದುವುದನ್ನು ಬಿಟ್ಟರೆ ಭವಿಷ್ಯವೇ ಇಲ್ಲವೆಂಬಂತೆ ಭಾಸವಾಗುತ್ತಿದ್ದಿತು. "ಡಾಕ್ಟರ್ ನಾಗರತ್ನ ರವರಂತೆ ನೀನೂ ಡಾಕ್ಟರ್ ಆಗಬೇಕು" ಎಂದು ಹಿಂದಿನಿಂದಲೂ ತಾಯಿ ಪದೇ ಪದೇ ಹೇಳುತ್ತಿದ್ದ ಮಾತುಗಳು ನೆನಪಿನಲ್ಲಿ ನೆಟ್ಟು ನಿಂತಿದ್ದುವು. ಅವಳ

ಭವಿಷ್ಯದ ಕಲ್ಪನೆಯು ಸ್ಪಷ್ಟವಾಗಿ ನಿಂತು ಕರೆಯುತ್ತಿದ್ದಿತು. ಅದರ ಸಾಧನೆಗಾಗಿ ಯಾವ ಬಲಿದಾನವಾದರೂ ಅಲ್ಪವೇ ಎಂಬ ದೃಢಸಂಕಲ್ಪವು ಮೂಡಿತ್ತು. ತಾಯಿಯು ತನ್ನ ಹಿಂದಿನ ಮಾತುಗಳನ್ನು, ಅಭಿಪ್ರಾಯಗಳನ್ನು, ಹಠವನ್ನು ತಾನೇ ನುಂಗುತ್ತಿರುವುದನ್ನು ಕಂಡು ಲೀಲೂಗೆ ಪರಮಾಶ್ಚರ್ಯವಾಯಿತು. ಕೇವಲ ತನ್ನ ಗಂಡನ ಮೇಲಿನ ಮಮತೆ ಪ್ರೇಮಗಳಿಂದ ಸೀತಮ್ಮನು ಈ ರೀತಿ ತನಗೇ ಒಪ್ಪಿಗೆಯಿಲ್ಲದ ಕಟ್ಟಿಗೆ ಸಿಕ್ಕಿಬಿದ್ದು ತನ್ನ ವಿದ್ಯಾಭ್ಯಾಸಕ್ಕೆ ಅಡ್ಡಿ ಬಂದಿರುವಳೆಂದು ಭಾಸವಾಗುತ್ತಿತ್ತು ಲೀಲೂಗೆ ತನ್ನ ವಾಗ್ಧೋರಣೆ ವಿಚಾರಸರಣಿಗಳಿಂದ ಸೀತಮ್ಮನ ಸಂಕಲ್ಪವನ್ನು ಪ್ರತಿಸಲವೂ ಕುಗ್ಗಿಸುತ್ತಾ ಬಂದು, ಕಡೆಗೆ ಅವಳು ಪೂರ್ಣಒಪ್ಪಿಗೆ ಕೊಡದಿದ್ದರೂ, ಅಸಮ್ಮತಿಯನ್ನು ಒಡ್ಡದ ಸ್ಥಿತಿಗೆ ತಂದಿಟ್ಟಳು. ಸ್ನೇಹಿತರ ಮನೆಗೆಂದು ಹೇಳಿ ಸರಿಯಾಗಿ ಹತ್ತು ಘಂಟೆಗೆ ಊಟವನ್ನು ಮುಗಿಸಿಕೊಂಡು ಲೀಲೂ ಸರೋಜನೊಂದಿಗೆ ಕಾಲೇಜಿಗೆ ಹೋಗಿಬರಲು ಪ್ರಾರಂಭಿಸಿದಳು. ಸುಮಾರು ಎಂಟು ಹತ್ತುದಿನ ಈ ಸಂಗತಿ ರಾಮಚಂದ್ರಮೂರ್ತಿಯ ಅರಿವಿಗೆ ಬರಲಿಲ್ಲ. "ಹೇಗೂ ಕಾಲೇಜಿಗೆ ಸೇರುವ ತಾರೀಖು ಮುಗಿದುಹೋಯಿತು. ಅಂತೂ ಒದಗಿದ್ದ ಗಂಡಾಂತರದಿಂದ ಪಾರಾದದ್ದಾಯಿತು. ಮಧ್ಯಾಹ್ನದ ಬೇಸರಿಕೆಯನ್ನು ಹೋಗಲಾಡಿಸಿಕೊಳ್ಳುವ ಸಲುವಾಗಿ ಗೆಳತಿಯರ ಮನೆಗೆ ಹೋಗಿಬರುತ್ತಾಳೆ" ಎಂದುಕೊಂಡ ಮೂರ್ತಿಯು, ತನ್ನ ಪಾಡಿಗೆ ತಾನು ಹತ್ತುಘಂಟೆಗೆ ಮುಂಚೆಯೇ, ಕಛೇರಿಗೆ ಹೊರಟು ಆರೇಳುಘಂಟೆಗೆ ಹಿಂದಿರುಗುತ್ತಿದ್ದ. ಈ ಮಧ್ಯೆ ವೆಂಕಟೇಶನನ್ನ ಪತ್ತೆಮಾಡಲು ಸಕಲ ಪ್ರಯತ್ನಗಳನ್ನೂ ಮಾಡುತ್ತಿದ್ದ. "ಏನಾದರೂ ಮಾಡಿ, ಅವನು ಈಸಾರಿ S. S. L. C. ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸ್ ಬರುವಂತೆ ಮಾಡಿ, ನಂತರ ಇಂಟರ್‌ಮೀಡಿಯೆಟ್ ಪರೀಕ್ಷೆಗೆ ಓದುವಂತೆ ಏರ್ಪಾಟು ಮಾಡಬೇಕು ನಂತರ ಆದಷ್ಟು ಜಾಗ್ರತೆ ಲೀಲೂ ಮದುವೆ. ನಂತರ ನಿಶ್ಚಿಂತಜೀವನ" ಹೀಗೆ ಹಗಲುಗನಸುಗಳನ್ನು ಕಾಣುತ್ತಿದ್ದ. ಸೀತಮ್ಮನ ಹೃದಯವಾದರೋ ಯಾವುದೋ ಪರೋಕ್ಷಭಯದಿಂದ ನಡುಗುತ್ತಿದ್ದಿತು. "ಲೀಲೂ ಮಾಡಿರುವ ಕೆಲಸ ಅವರ ತಿಳಿವಳಿಕೆಗೆ ಬಂದರೆ, ಅವರೆಷ್ಟು ನೋಯುವರು ?! ಆ ನೋವಿನಲ್ಲಿ ಅವರ ಹೃದಯವು ಕಲಕಿಹೋಗಿ ಮನಸ್ಸು ಮತಿಗೆಟ್ಟು ಇನ್ನೇನು ಅವಾಂತರಗಳಾಗಿಬಿಡುವುವೋ ?! 'ಅಲ್ಲದೇ

ಮಗಳು ತಮ್ಮಿಷ್ಟಕ್ಕೆ ವಿರುದ್ಧವಾಗಿ, ತನ್ನ ಸಂಕಲ್ಪಕ್ಕೆ ತಿಲಾಂಜಲಿಕೊಟ್ಟು ನಡೆಸುತ್ತಿರುವ ಈ ದ್ರೋಹಕಾರ್ಯಕ್ಕೆ ಪ್ರತ್ಯಕ್ಷ ನೆರವಾಗಿ, ತಮ್ಮ ತಿಳಿವಳಿಕೆ ಯಿಂದ ಅದನ್ನು ಮರೆಮಾಚಿದ ಹೆಂಡತಿ – ಎಂಥ ಪತಿತೆ ' ಎಂಬ ಭಾವನೆಯು ಗಂಡನ ಮನಸ್ಸಿನಲ್ಲಿ ಮೂಡಿಬಿಟ್ಟರೆ ಗತಿಯೇನು ? " ಹೀಗೆ ಆಕೆಯಮನಸ್ಸು ಉಲ್ಲೋಲ ಕಲ್ಲೋಲವಾಗಿದ್ದಿತು.

ಒಂದು ದಿನ ಮಧ್ಯಾಹ್ನ ಮೂರುಘಂಟೆಯ ಸಮಯದಲ್ಲಿ ರಾಮಚಂದ್ರ ಮೂರ್ತಿಯು ಮತ್ತೊಬ್ಬ ವೃದ್ಧರೊಂದಿಗೆ ಅನಿರೀಕ್ಷಿತವಾಗಿ ಮನೆಗೆ ಬಂದ. ಸೀತಮ್ಮನು ಸಂಜೆಗೆ ಉಪ್ಪಿಟ್ಟು ಕಾಫಿಗಳನ್ನು ಅಣಿಮಾಡುತ್ತಿದ್ದಳು. ಗಂಡನ ಅನಿರೀಕ್ಷಿತ ಆಗಮನದಿಂದ ಸೀತಮ್ಮ ಬೆಚ್ಚಿದಳು. "ಯಾವ್ರು ದಾವರೂ ಗಂಡನ್ನ ಗೊತ್ತುಮಾಡಿಕೊಂಡು, ಹೆಣ್ಣನ್ನು ನೋಡಲೋಸುಗ ಆತನ ತಂದೆಯನ್ನೇನಾದರೂ ಕರೆತಂದಿದಾರೋ ? 'ಈಗ ಲೀಲೂನ ಕರೆ.' ಎಂದರೆ ನನ್ನಗತೀ ? !" ಈ ಯೋಚನೆ ಮಿಂಚಿನಂತೆ ಹೊಳೆದು ಸೀತಮ್ಮ ಬೆಚ್ಚಿದಳು. ಗಂಡನ ಮುಖ ಕಂಡೊಡನೆಯೇ ನಡುವೆಯಲ್ಲಿನ ಮಂದಲಿಗೆಯ ಮೇಲೆ ರತ್ನಗಂಬಳಿಯನ್ನು ಹಾಸಿ, ಒಳಕ್ಕೆ ಹೊರಟುಹೋದಳು. ಮೂರ್ತಿಯು ಆ ವೃದ್ಧರನ್ನು ರತ್ನಗಂಬಳಿಯ ಮೇಲೆ ಕೂಡಿಸಿ, ತಾನು ಕೋಟು ಟೋಪಿಗಳನ್ನು ತೆಗೆದಿಟ್ಟು ಬಂದು ಪಕ್ಕದಲ್ಲಿ ಕೂತು, ಹೆಂಡತಿಯನ್ನು ಕರೆದ.

" ಸೀತಾ ! " ಸೀತಮ್ಮನಿಗೆ ಗುಂಡಿಗೆ ' ದಢೀಲ್ ' ಎಂದಿತು. ಸೆರಗು ಸರಿಪಡಿಸಿಕೊಂಡು ಬಂದು ಬಾಗಿಲಹಿಂದೆ ನಿಂತಳು. " ಬಾ ಬಾ ! ಇವರು ಅಮಲ್ದಾರ್ ವೆಂಕಟರಾಯರ ಮನೆಯಲ್ಲಿ ಅವರಿಬ್ಬರ ಹೆಣ್ಣುಮಕ್ಕಳಿಗೂ ವೀಣೆ ಪಾಠ ಹೇಳಿಕೊಡುತಾ ಇದಾರೆ. ಒಳ್ಳೆ ವಿದ್ಯಾವಂತರು. ನಿಧಾನಿಗಳು. ನಮ್ಮ ಲೀಲೂಗೆ ಇವರ ಕೈಲೇ ಪಾಠ ಹೇಳಿಸೋಣಾಂತ ಕರೆತಂದೆ. ಒಂದು ವಾರದಿಂದ ಹೇಳುತ್ತಿದ್ದೆ. ಈ ದಿನ ಬಿಡುವು ಮಾಡಿಕೊಂಡು ಆಫೀಸ್ ಹತ್ತಿರ ಬಂದರು. ನಾನೂ ಮಧ್ಯಾಹ್ನ ಕಛೇರಿಗೆ ರಜಾ ಬರೆದುಬಿಟ್ಟು, ಮನೆಗೆ ಕರ ಕೊಂಡು ಬಂದೆ. ಇವತ್ತೇ ದಿವಸ ಚೆನ್ನಾಗಿದೆಯಂತೆ. ಪಾಪ ಆ ಮಗೂನೂ ಹೊತ್ತುಹೋಗದೆ ಸ್ನೇಹಿತರ ಮನೇಗೆಲ್ಲಾ ಅಲೆದಾಡುತಿರುತ್ತೆ. ವೀಣೇಗೆ ಇವರಕೈಗೆ ದುಡ್ಡು ಕೊಟ್ಟಿದೀನಿ. ನಾಳಿದ್ದು ಪಾಠಕ್ಕೆ ಬರೋವಾಗ ತೆಗೆಸಿ

ಕೊಂಡು ಬರುತಾರಂತೆ....ಆಂ-ಲೀಲೂ ಕೂಗು ! ಹೋಗಿ ಆ ಸರೋಜನ ಮನೆಯಿಂದ ಈವತ್ತಿಗೆ ವೀಣೆ ತಂದಿರಲಿ."

ಸೀತಮ್ಮನ ಕಾಲುಗಳು ನಡುಗಿದವು. ಈಗೇನು ಗತಿ. ಸ್ವಲ್ಪ ಧೈರ್ಯ ತಂದುಕೊಂಡು—"ಅವಳು ಈಗತಾನೇ ಸ್ನೇಹಿತಿಯ ಮನೆಗೆ ಹೋದಳು. ಇನ್ನೂ ಬರೋದಕ್ಕೆ ಎಷ್ಟು ಹೊತ್ತಾಗುತ್ತೋ ?" ಎಂದಳು.

"ಸರೋಜನ ಮನೆಗೆ ಹೋದಳೇ ?"

"ಗೊತ್ತಿಲ್ಲ.......ಅಲ್ಲದೇ, ಸ್ವಂತ ವೀಣೆ ಬಂದಮೇಲೆ ಪೂಜೆಮಾಡಿ ಪ್ರಾರಂಭಿಸಿಬಿಟ್ಟರೆ ಒಳ್ಳೆಯದಲ್ಲವೇ ?"

"ಅದೆಲ್ಲಾ ಯೋಚನೆ ಮಾಡಿದೀವಿ. ಈದಿನ ಬಿಟ್ಟರೆ ಇನ್ನು ಏಳು ದಿವಸ ಪಾಠ ಪ್ರಾರಂಭಮಾಡೋಹಾಗಿಲ್ಲ. ಸರಿ. ನಾನೇ ನೋಡಿಕೊಂಡು ಬರುತೇನೆ. ಹ್ಯಾಗೂ ಸರೋಜನ ಮನೇಯಿಂದ ವೀಣೆ ಬೇರೆ ತರಬೇಕು. ಲೀಲೂ ಮುಕ್ಕಾಲುಪಾಲು ಸರೋಜನ ಮನೇಲೇ ಇರಬೇಕು."

ಎಂದು ಹೇಳಿ ಮೇಲೆದ್ದ. ಸೀತಮ್ಮ ಕೈಕೈ ಹಿಸುಕಿಕೊಂಡಳು. "ಏನೋ ಈದಿನವೇ ಮಾನ ಪರೀಕ್ಷೆಯಾಗಿದೆಯಲ್ಲಾ ?" ಎನ್ನಿಸಿತು. "ಅಲ್ಲಾಂದ್ರೆ ! ಸರೋಜ ಕಾಲೇಜಿಗೆ ಹೋಗಿರುತಾಳೆ. ಆದ್ದರಿಂದ ಲೀಲೂ..........." ಮೂರ್ತಿ ಕೋಟು ಟೋಪಿ ಹಾಕಿಕೊಂಡು ಹೊರಡಲನುವಾಗಿ "ಅಲ್ಲಿಲ್ಲ ದಿದ್ದರೆ ಮಾಲತೀ ಮನೆಯಲ್ಲೋ, ಸುಮಿತ್ರೆಯ ಮನೆಯಲ್ಲೋ ಇರಬೇಕು. ಈಗ ಕರೆತರುತೀನಿ. ಸಂಪಂಗಿ ರಾಮಯ್ಯನವರೇ ! ಒಂದು ಕಾಲುಘಂಟೆ ವಿಶ್ರಮಿಸಿಕೊಳ್ಳಿ. ವೀಣೆ ತೆಗಿಸಿಕೊಂಡು, ಹುಡುಗೀನೂ ಕರೆಕೊಂಡು ಬಂದು ಬಿಡುತೇನೆ" ಎಂದು ವೃದ್ಧರಿಗೆ ಹೇಳಿ ಹೊರಟುಬಿಟ್ಟ. ಸೀತಮ್ಮನ ಅಂತಃ ಕರಣ ಕುದಿಯಲಾರಂಭಿಸಿತು. ಯಾವ ಕೆಲಸವೂ ತೋಚದಂತಾಯಿತು. ಕಾಲುಗಳು ಎಲ್ಲೂ ನಿಲ್ಲಲಾರದಾದುವು. ಕ್ಷಣಕ್ಕೊಮ್ಮೆ ಬಾಗಿಲಿಗೆ ಬಂದು ನೋಡುವಳು. ಮತ್ತೆ ಅಡುಗೆಯ ಮನೆಗೆ ಹಿಂದಿರುಗುವಳು. ಬಹುಕಷ್ಟ ದಿಂದ ಅರ್ಧಘಂಟೆ ಕಳೆದಳು ಗಂಡನು ಬರಲಿಲ್ಲ. ವೃದ್ಧರು ಕಾದು, ಕಾದು ಸ್ವಲ್ಪ ಬೇಸರಹೊಂದಿ, ಮೇಲೆದ್ದು,

"ಅಮ್ಮಾ ! ನಾನು ಅಮಲ್ದಾರರ ಮನೆ ಪಾಠ ತೀರಿಸಿಕೊಂಡು ಮತ್ತೆ ಐದುಘಂಟೆಗೆ ಬರುತೇನೆ. ರಾಮಚಂದ್ರರಾಯರು 'ಮಧ್ಯಾಹ್ನದ

ಹೊತ್ತು ಬನ್ನಿ' ಎಂದಿದಾರೆ. ನಾಳಿದ್ದಿನಿಂದ ಮಧ್ಯಾಹ್ನದಹೊತ್ತೇ ಬರು ತೇನೆ." ಎಂದು ಹೇಳಿ ಹೊರಟುಬಿಟ್ಟರು. ಅವರನ್ನು ತಡೆಯಲು ಸೀತಮ್ಮ ನಿಗೆ ಇಷ್ಟವೂ ಇರಲಿಲ್ಲ. ಏಕೆಂದರೆ ಈದಿನ ಮನೆಯಲ್ಲಿ ಇನ್ನೇನೇನು ಅವಾಂತರವಾಗುವುದೋ—ಅದನ್ನೆಲ್ಲಾ ಅವರೇಕೆ ನೋಡಬೇಕು—ಈ ಯೋಚನೆಯಿಂದ.

ಮನೆಯಿಂದ ಸರಸರನೆ ಹೊರಟ ರಾಮಚಂದ್ರಮೂರ್ತಿ ಸರೋಜನ ಮನೆಗೆ ಬರುವವೇಳೆಗೆ ಕೇವಲ ಐದಾರು ನಿಮಿಷಗಳಾದುವು ಅಷ್ಟೇ. ಅವರ ಮನೆಯಬಾಗಿಲು ಹಾಕಿತ್ತು. ಹೊರಗಡೆಯಿಂದಲೇ "ಲೀಲೂ! ಲೀಲೂ!!" ಎಂದು ಕೂಗಿದ. ಸರೋಜನ ತಾಯಿ ಒಳಗಿನಿಂದ ಬಂದು ಬಾಗಿಲುತೆರೆದರು ಅವರಿಗೆ ಆಶ್ಚರ್ಯವಾಯಿತು 'ಕಾಲೇಜಿಗೆ ಹೋಗಿರುವ ಮಗಳನ್ನು ಹುಡುಕಿಕೊಂಡು ಈ ವೇಳೆಗೆ ತಮ್ಮಮನೆಗೆ ಬರಲುಕಾರಣ?' "ಲೀಲೂ ಸರೋಜಾ ಇಬ್ಬರೂ ಕಾಲೇಜಿಗೆ ಹತ್ತುಘಂಟೆಗೆ ಹೋದರು. ಎಂದಿನಂತೆ ಸಂಜೆ ಐದೂವರೆಗೆ ಬರುತಾರೆ. ಈಗೇನು ಹುಡುಕಿಕೊಂಡು ಬಂದಿರಲ್ಲಾ? ಕಾಲೇಜಿಗೇನಾದರೂ ಮಧ್ಯಾಹ್ನ ರಜವೇನು?" ಎಂದು ಸೌಮ್ಯವಾಗಿಯೇ ಕೇಳಿದರು. ರಾಮಚಂದ್ರಮೂರ್ತಿ ಕಕ್ಕಾಬಿಕ್ಕಾದ. ಮರುಮಾತಾಡದೆ ಕ್ಷಮೆ ಬೇಡುವುದೇ ಕ್ಷೇಮ-ವೆನ್ನಿಸಿತು. "ಲೀಲೂಗೆ ಬೆಳಗ್ಗೆ ಮೈಲಿ ಸ್ವಲ್ಪ ಸ್ವಲ್ಪ ವಿರಲಿಲ್ಲ. ಕಾಲೇಜಿಗೆ ಹೋಗಬೇಡಾಂದಿದ್ದೆ........"

"ನಮ್ಮ ಮನೆಗೆ ಬಂದಾಗ ನಗುನಗುತಾ ಅಷ್ಟು ಗೆಲುವಾಗಿದ್ದಳು. ಎಂದಿನಂತೆಯೇ ಇದ್ದಳು. ಅಲ್ಲದೇ ಈ ದಿನ ಯಾವುದೋ ಟೆಸ್ಟ್ಅಂತೆ. ಅದಕ್ಕಾಗಿ ಕಾಗದ ಪೇನಾ ಎಲ್ಲಾ ಸಿದ್ಧಮಾಡಿಕೊಂಡು ಇಬ್ಬರೂ ಹೋದರು"

ಮೂರ್ತಿ ಅವಾಕ್ಕಾದ. "ಕ್ಷಮಿಸಿ" ಎಂದು ತಗ್ಗಿಸಿದ ಕತ್ತನ್ನೆತ್ತದೆ ಸರಸರನೆ ಮುಂದೆ ಹೊರಟ. "ಇದೇನೋ ವಿಚಿತ್ರಪ್ರಸಂಗವಾಗಿದೆ. ಮನೆ ಯಲ್ಲಿ ಬೇಜಾರೆಂದು ಗೆಳತಿಯೊಂದಿಗೆ ಸುಮ್ಮನೆಹೋಗಿ ತರಗತಿಯಲ್ಲಿ ಕುಳಿತು ಕೊಳ್ಳುತ್ತಿರಬಹುದು. ಅಡ್ಮಿಷನ್ ಫಾರಂಗೆ ನಾನು ರುಜುವೇ ಮಾಡದೇ ಅವಳು ಕಾಲೇಜಿಗೆ ಸೇರುವುದಾದರೂ ಹೇಗೆ? ಏನೋ? ಇಷ್ಟುದೂರ ಬಂದಾಯಿತು. ಕಾಲೇಜಿಗೇನೇ ಹೋಗಿ ಲೀಲೂವನ್ನು ಕಂಡು ಮನೆಗೆ

ಕರೆತರುವುದೇ ಮೇಲು. ಆಗುವಷ್ಟು ಹೊತ್ತು ಆಯಿತು." ಎಂದು ಯೋಚಿಸುತ್ತಾ ಕಾಲೇಜಿನ ಕಡೆಗೆ ಸರಸರನೆ ನಡೆದ.

ಗೇಟಿನಬಳಿಗೆ ಬಂದವನೇ ತಟ್ಟನೆ ನಿಂತು ಸುತ್ತಲೂ ನೋಡಿದ. ಕಾಲೇಜಿನ ಹೊರವಳೆಯುದಲ್ಲೆಲ್ಲಾದರೂ ಗೆಳತಿಯರೊಂದಿಗಿರಬಹುದೇನೋ ಲೀಲೂ – ಎಂದು. ಯಾವ ಹುಡುಗಿಯೂ ಇರಲಿಲ್ಲ. ಒಳಗೆ ನಡೆದು, ನೇರವಾಗಿ ಆಫೀಸ್ ರೂಮಿನೊಳಕ್ಕೆ ಹೋಗಿ ಅಲ್ಲಿನ ಹೆಡ್‌ಕ್ಲಾರ್ಕನಮುಂದೆ ನಿಂತ. ಅವರು ಕುರ್ಚಿಕೊಟ್ಟು ಕೂಡಿಸಿ –

" ತಮಗೇನು ಬೇಕು ? " ಎಂದು ಪ್ರಶ್ನಿಸಿದರು.

" ಎಸ್. ಆರ್. ಲೀಲಾ ಎಂಬ ಹುಡುಗಿ ಜ್ಯೂನಿಯರ್ ಇಂಟರ್ ಮೀಡಿಯೆಟ್ ಕ್ಲಾಸಿಗೆ ಸೇರಿದೆಯೇ ? "

" ಬಲಗೆನ್ನೆಯ ಮೇಲೆ ಗುಳಿ ಇದೆಯಲ್ಲಾ ಆ ಹುಡುಗಿಯೇ ? "

" ಹೌದು ಹೌದು."

" ತಮ್ಮ ಮಗಳೇನು ? "

" ಹೌದು ಹೌದು."

" ಬಲು ಜಾಣೆ – ಬುದ್ಧಿವಂತೆ ಅಂತ ನಮ್ಮ ಪ್ರಿನ್ಸಿಪಾಲ್ ಕರೆಸಿ ವಿಚಾರಿಸುತ್ತಿದ್ದರು ಮೊನ್ನೆ........ಹೌದೂ. ಈಗ ನೀವು ಆ ಹುಡುಗೀನ ನೋಡಬೇಕಾದರೆ ಒಂದಿಪ್ಪತ್ತು ನಿಮಿಷ ಕಾಯಬೇಕು. ಪ್ರಿನ್ಸಿಪಾಲ್ ಕ್ಲಾಸ್ ತಗೊಂಡಿದಾರೆ ಅಲ್ಲದೆ ಟೆಸ್ಟ್ ಪೀರಿಯಡ್."

' ಎಲ್ಲಾ ಸರಿ. ಅವಳು ತನ್ನ ರುಜುವಿಲ್ಲದೇ ಕಾಲೇಜಿಗೆ ಸೇರಿದಳು ಹೇಗೆ ? ಇವರು ಸೇರಿಸಿದರು ಹೇಗೆ ' ....ಎಂದು ಮೂರ್ತಿ ಯೋಚಿಸುತ್ತಾ ಕುಳಿತ. ಎರಡು ನಿಮಿಷಗಳ ನಂತರ ತಟ್ಟನೆ ಯೋಚನೆಹೊಳೆಯಿತು—" ಸ್ವಲ್ಪ ಅವಳ ಅಡ್ಮಿಷನ್‌ಫಾರಂ ನೋಡಬೇಕು. ಅದರಲ್ಲಿ ಅವಳ ಡೇಟ್ ಆಫ್ ಬರ್ತ್....."

" ಸರಿಯಾಗಿದೆ. S. S. L. C. ಕಾರ್ಡಿನಲ್ಲಿ ನೀವು ಕೊಟ್ಟಿರೋ ಡೇಟೇ – ಸರಿಯಾಗಿ ಎಂಟರಾಗಿದೆ. ನಾವೆಲ್ಲಾ ಚೆಕ್‌ಮಾಡಿ ಫೈಲ್‌ಮಾಡಿದೇವೆ. ಫಾರಂಗಳಿಗೆಲ್ಲಾ ಪ್ರಿನ್ಸಿಪಾಲ್ ಸೈನ್‌ಸಹಾ ಆಗಿಹೋಗಿದೆ."

" ಅದೂ – ಸ್ವಲ್ಪ ಅನುಮಾನವಾಗಿತ್ತು. "

" ಈಗ ನೀವು ಅವನ್ನ ನೋಡಬೇಕೇನೂ ?"

"ಸ್ವಲ್ಪ ನೋಡಬೇಕಾಗಿತ್ತು. ನಿಮಗೆ ತೊಂದರೆಯಾಗದಿರೋ ಪಕ್ಷಕ್ಕೆ........"

"ತೊಂದರೆ ಎಂಥಾದ್ದು ಸ್ವಾಮೀ....ಹಾಂ ತಗೊಳ್ಳೀ ನೋಡಿ. ಇದೇ ಫಾರಂ – ಅದಕ್ಕೆ ಪಿನ್ ಮಾಡಿರೋದು ಕಾರ್ಡು" ಎಂದು ಎರಡು ನಿಮಿಷದಲ್ಲಿ ಫೈಲಿನಿಂದ ತೆಗೆದು ಫಾರಂನ್ನು ರಾಮಚಂದ್ರಮೂರ್ತಿಯ ಮುಂದಿಟ್ಟ ಆತ. ಮೂರ್ತಿ ನಾಲ್ಕು ಕಣ್ಣಾಗಿ ತನ್ನ ರುಜುವಿನ ಕಡೆಗೆ ನೋಡಿದ. 'ಹೌದು ಹೌದು; ತನ್ನದೇ ರುಜು ಅನುಮಾನವಿಲ್ಲ. ಕಾರ್ಡಿನಲ್ಲಿನ ತನ್ನ ರುಜು ನೋಡಿದ. ಎರಡನ್ನೂ ಹೋಲಿಸಿದ. ಏನೂ ವ್ಯತ್ಯಾಸವಿಲ್ಲ. ಆದರೆ ತಾನು ಫಾರಂಗೆ ರುಜು ಮಾಡಲಿಲ್ಲವಲ್ಲ. ಖಂಡಿತ ಮಾಡಲಿಲ್ಲ ಹಾಗೇ ನೋಡಿದ. ಫಾರಂನಲ್ಲಿನ ರುಜುವಿನಲ್ಲಿ ಒಂದೇ ವ್ಯತ್ಯಾಸ. ಕಡೆಯ ಅಕ್ಷರ 'ಮೈ' ನ ಬಾಲವನ್ನ ಎಡಕ್ಕೆಳೆದು ಗೀರುಹಾಕಿ, ಅದರ ಕೆಳಗೆ ಎರಡು ಚುಕ್ಕೆಗಳನ್ನಿಡಬೇಕಾಗಿತ್ತಲ್ಲಾ. ಕಾರ್ಡಿನಲ್ಲಿ ಹಾಗೇಇದೆ. ತಾನು ಚುಕ್ಕೆಗಳನ್ನಿಡದೇ ಪೆನ್ನಾ ತೆಗೆಯುವುದಿಲ್ಲ. ಮತ್ತೆ ಇದೂ? ....ಸರಿಸರಿ. ಲೀಲೂ ಪೆನ್ನಿನ ಬರವಣಿಗೆ. ಅವಳ ಪೆನ್ನನ್ನು ತಾನು ಎಂದೂ ಮುಟ್ಟಿಲ್ಲ ಹೊಸದಾಗಿ ತಂದದಿನ ಮಾತ್ರ ಇಂಕ್ ಹಾಕಿ ಒಂದೆರಡು ನಿಮಿಷಗಳು ಬರೆದದ್ದು ಅಷ್ಟೇ. ಈಗೇನು ಮಾಡುವುದು? ವಿಚಾರಗಳು ಕೈಮಿಂಚಿಹೋಗುತ್ತಿವೆ. ಆತುರದಲ್ಲಿ ಏನುಮಾಡಿದರೂ ತನ್ನ ಹೊಟ್ಟೆಯನ್ನು ತಾನೇ ತಿವಿದುಕೊಂಡಂತೆ'

"ಸರಿಯಾಗಿದೆಯೇ ಸ್ವಾಮೀ?"

"ಹಂ! ಹಂ! ಸರಿಯಾಗಿದೆ" ಎಂದು ನಿದ್ದೆಯಿಂದೆಚ್ಚತ್ತವನಂತೆ ನುಡಿದ ಮೂರ್ತಿ. ಮೇಲೆದ್ದು "ಮತ್ತೆ ಬರುತ್ತೇನೆ" ಎಂದು ಹೇಳಿಬಿಟ್ಟು ಹೊರಟು ಬಿಟ್ಟ—ಮನೆಯಕಡೆಗೆ.

ಮನೆಗೆ ಬರುವವೇಳೆಗೆ ನಾಲ್ಕೂಕಾಲು ಘಂಟೆಯಾಗಿದ್ದಿತು ಹೊರ ಬಾಗಿಲಿನಿಂದಲೇ — "ಸಂಪಂಗಿರಾಮಯ್ಯನವರೇ!" ಎಂದು ಕೂಗಿದ. ಉತ್ತರವಿಲ್ಲ, ಅವರೂ ಕಾಣಿಸಲಿಲ್ಲ ಅಡುಗೆಯ ಮನೆಯ ಬಾಗಿಲಿನಿಂದ ಹೊರಬಂದ ಸೀತಮ್ಮನನ್ನು ಕಂಡರೂ ಕಾಣದವನಂತೆ, ಮತ್ತೆ ಕಛೇರಿಯ ಕಡೆಗೆ ಹೊರಟುಹೋದ.

# ೪

ಎರಡು ವರುಷಗಳು ಉರುಳಿಹೋಗಿದ್ದುವು. ಆದರೆ ಲೀಲೂ ಮತ್ತು ಅವಳ ತಂದೆ ತಾಯಿಗಳಿಗೆ ಎರಡು ವರುಷಗಳೂ ಎರಡು ಯುಗಗಳಂತೆ ಕಳೆಯುತ್ತಾ ಬಂದಿದ್ದುವು. ಲೀಲೂ ಇಂಟರ್‌ಮೀಡಿಯೆಟ್ ಪರೀಕ್ಷೆಯಲ್ಲೂ ಫಸ್ಟ್‌ಕ್ಲಾಸ್‌ನಲ್ಲಿ ಪಾಸಾಗಿದ್ದಳು. ಆದರೆ ಈ ಮಧ್ಯೆ ರಾಮಚಂದ್ರಮೂರ್ತಿಗೆ ಮೂರು ಬಾರಿ ಹೊಡೆದಾಟ ಮಾಡಬೇಕಾಗಿ ಬಂದಿತ್ತು. ಒಂದು ವರುಷದ ಹಿಂದೆ ಯಾವನೋ ಪುಂಡ ಪ್ರತಿದಿನವೂ ಇವಳನ್ನು ಹಿಂಬಾಲಿಸಿ ಸೈಕಲ್ ಮೇಲೆ ಬರುತ್ತಾ, ' ಈ ಗುಲಾಬಿಹೂ ತಗೊ ' ಎಂದು ಅನುಸರಿಸುತ್ತಿದ್ದನಂತೆ. ಅವನನ್ನು ಹಿಂಬಾಲಿಸಿಬಂದು ಹಿಡಿದ ರಾಮಚಂದ್ರಮೂರ್ತಿ ತನ್ನ ವಯಸ್ಸನ್ನೂ ಮರೆತು ಹುಲಿಯಂತೆ ಅವನ ಮೇಲೆ ಬಿದ್ದು ಬಡಿದು ತನ್ನ ಟೋಪಿ ಕೊಚ್ಚೆಯಲ್ಲಿಬಿದ್ದು, ಕೋಟು ಹರಿದುಹೋದರೂ ಲಕ್ಷಿಸದೆ ಅವನನ್ನು ಓಡಿಸಿಕೊಂಡು ಹೋಗಿದ್ದ. ಮತ್ತೊಂದು ಬಾರಿ ಮಗಳ ಹೆಸರನ್ನು ತಿಳಿದು ಹೇಗೋ ತನ್ನ ಮನೆಯ ಮುಂದೆ, ಮತ್ತು ಸರೋಜನ ಮನೆಯಮುಂದೆ ಈ ಹೆಣ್ಣು ಮಕ್ಕಳ ಹೆಸರನ್ನೇ ಹಿಡಿದು ಕೂಗುತ್ತಾ ಸುಳಿದಾಡುತ್ತಿದ್ದ ಇಬ್ಬರು ತರುಣರನ್ನು ಒಬ್ಬನೇ ಎದುರಿಸಿ ಹೊಡೆದು, ಆ ಗಲಾಟೆಯಲ್ಲಿ ಮೂಗು ಜಜ್ಜಿ ಬಹುರಕ್ತ ಹರಿದು, ನಾಲ್ಕುದಿನ ಹಾಸಿಗೆಯಲ್ಲಿದ್ದ. ಕಡೆಯದಾಗಿ ಇವಳ ವಿಳಾಸಕ್ಕೆ ಪ್ರೇಮಪತ್ರವನ್ನು ಬರೆಯುತ್ತಿದ್ದು, ಕಡೆಗೆ ' ಇಂಥ ಸ್ಥಳದಲ್ಲಿ ನೀನು ನನ್ನನ್ನು ಭೇಟಿಯಾಗದಿದ್ದರೆ ನಾನು ಪ್ರಾಣತ್ಯಾಗ ಮಾಡುವೆನೆ 'ಂದು ಬರೆದಿದ್ದವನೊಬ್ಬನಿಗೆ ತಾನೇ ಲೀಲೂ ಹೆಸರಿನಲ್ಲಿ ಪತ್ರ ಬರೆದು, ಆ ಏಕಾಂತ ಸ್ಥಳದಲ್ಲಿ ತಾನೊಬ್ಬನೇ ಅವನನ್ನು ಸಂಧಿಸಿ, ಬೆಚ್ಚುಬಿದ್ದ ಅವನನ್ನು ಚಚ್ಚಿ, ಹಾದಿಹೋಕರ ಸಹಾಯದಿಂದ ಅವನನ್ನು ಪೋಲೀಸ್ ಸ್ಟೇಷನ್ನಿಗೆ ಎಳೆತಂದು, ಅವನು ಬರೆಯುತ್ತಿದ್ದ ಪತ್ರಗಳ ಸಮೇತ ಅವನನ್ನು ಪೋಲೀಸ್ ಸುಫರ್ದ್ ಮಾಡಿದ್ದನು. ಇಷ್ಟೆಲ್ಲಾ ಅವಾಂತರಗಳ ಮಧ್ಯೆ, ಸೀತಮ್ಮನು ತನಗೇ ಅರಿವಿಲ್ಲದಂತೆ ಕೃಶವಾಗುತ್ತಾ ಬರುತ್ತಿದ್ದಳು. ಮನೆಗೆಲಸದಲ್ಲಿ ಲವಲವಿಕೆಯಿಲ್ಲ ಹಿಂದೆಲ್ಲಾ ಗಂಡನು ಹೇಳುತ್ತಿದ್ದ ಮತ್ತೆ ಕೆಲವು ಕುಟುಂಬಗಳಲ್ಲಿನ

ಹುಡುಗಿಯರ ದುರಂತ ಬಾಳು ನೆನಪಿಗೆ ನುಗ್ಗಿ ಬಂದು, ತನ್ನ "ಲೀಲು"ವನ್ನು ಹೇಗಾದರೂಮಾಡಿ ಬೇಗ ಮದುವೆಮಾಡಿ ಕೊಟ್ಟು ಬಿಟ್ಟು, ಅವಳು ಗುಣಾಢ್ಯನೊಬ್ಬನ ರಕ್ಷಣೆಗೆ ಸೇರಿದ್ದನ್ನು ಕಂಡಂದು ತಾನು ಬದುಕಿದ್ದಕ್ಕೆ ಸಾರ್ಥಕವೆಂದೂ, ಇಲ್ಲದಿದ್ದರೆ ಮಗಳ ಮಂಗಳಮಯ ಭವಿಷ್ಯಕ್ಕೆ ತಾನೇಕಿಚ್ಚಿಟ್ಟ ಪಾಪಿನಿಯಾಗುವೆನೆಂಬ ಭಾವನೆ ಬಹಳವಾಗಿ ಕಾಡಿಸುತ್ತಿತ್ತು. ಈ ಮಧ್ಯೆ ಮೂರ್ತಿಯು "ರಾತ್ರಿ ಕಂಡ ಬಾವಿಗೆ, ಹಗಲು ಹಾರಿದಂತೆ" ತನ್ನ ಬಾಳಾಯಿತೆಂದೂ, ಗೃಹಕೃತ್ಯದಲ್ಲಿ ಒದಗಿಬರುತ್ತಿದ್ದ ಯಾವ ವಿಚಿತ್ರ ಸನ್ನಿವೇಶವೂ ಸಹಜವಾಗಿಯೇ ಇದೆಯೆಂದೂ, ಯಾವುದೋ ಒಂದು ಅವ್ಯಕ್ತ ಅದೃಷ್ಟ ಬಲವು ತನ್ನನ್ನು ತಳ್ಳುತ್ತಿದೆಯೆಂದೂ, ನಿರ್ವೀರ್ಯನಾಗಿ ನಿಸ್ತೇಜನಾಗಿ ಓಡಾಡುತ್ತಿದ್ದನು. "ಈಗಿನ ಪರಿಸ್ಥಿತಿಯಲ್ಲಿ ನಾನಂತೂ ಮಗಳಿಗೆ ಗಂಡು ನೋಡುವಂತಿಲ್ಲ. ಆದರೆ ಅವಳೇ ಒಪ್ಪಿದ ವರನು ಒದಗಿದರೆ, ಆ ವರನ ಕಡೆಯವರ ಕೇಳಿಕೆಗಳನ್ನು ಪೂರೈಸಲು ತಾನು ದಿವಾಳಿಯಾಗಿಯಾದರೂ ಸಾಧ್ಯವಿದ್ದಲ್ಲಿ ಆಗ ಮದುವೆಯ ಯೋಚನೆ" ಎಂದು ಸಂಕಲ್ಪ ಹೀನನಾಗಿ ಕುಳಿತುಬಿಡುತ್ತಿದ್ದ. ಹೆಂಡತಿಯ ದೇಹಸ್ಥಿತಿಯು ಬಹಳ ಕಳವಳವನ್ನುಂಟು ಮಾಡುತ್ತಿತ್ತು. ಲೀಲೂ ಭವಿಷ್ಯವೂ ಸಹ ಮರುಭೂಮಿಯಾಗಿ ಕಾಣಿಸಿ ಅವನನ್ನು ಕಂಗೆಡಿಸುತ್ತಿತ್ತು. ಈ ಮಧ್ಯೆ ವೆಂಕಟೇಶನ ಚಿಂತೆ. ಎರಡು ವರುಷಗಳಾದುವು. ಒಂದುದಿನವಾದರೂ ಮುಖ ತೋರಿಸಲಿಲ್ಲ. ಒಂದು ಕಾಗದ ಸಹಾ ಬರೆಯಲಿಲ್ಲ. ಅವನ ಮಮತೆ ಕೋಪಕ್ಕೆ ತಿರುಗಿ "ವೆಂಕಟೇಶ ನೇನಾದರೂ ಅಪಮಾನದಿಂದ........ಬಿಟ್ಟನೋ!" ಎಂಬ ಸಂಕಟದಲ್ಲಿ ಕೊನೆಯಾಗುತ್ತಿತ್ತು.

ಲೀಲೂಗೆ ಇಂಗ್ಲೀಷ್ ಭಾಷೆಯಲ್ಲಿದ್ದ ಮಮತೆ, ಹಲವಾರು ಕಾಲೇಜು ಡಿಬೇಟುಗಳಲ್ಲಿ ಅವಳ ವಾಗ್ಧೋರಣೆಯ ಮೆಚ್ಚುಗೆಯಾಗಿ ಬಂದಿದ್ದ ನಾಲ್ಕಾರು ಪ್ರಶಸ್ತಿಪತ್ರಿಕೆಗಳು, ಬೆಳ್ಳಿಯಕಪ್‌ಗಳು, ಚಿನ್ನದಮೆಡಲ್, ಕಾಲೇಜಿನ ತರುಣ ಇಂಗ್ಲಿಷ್ ಉಪಾಧ್ಯಾಯರೊಬ್ಬರು ಅವಳಿಗಾಗಿ ಪಟ್ಟಶ್ರಮ ಇತ್ಯಾದಿಗಳ ಫಲವಾಗಿ, ಲೀಲೂಗೆ ಇಂಗ್ಲಿಷ್ ಆನರ್ಸ್ ಕ್ಲಾಸಿನಲ್ಲಿ ಸೀಟ್ ರಿಜರ್ವ್ ಆಗಿ ಹೋಗಿತ್ತು. ಇನ್ನವಳಿಗೆ ಅವಳ ಭವಿಷ್ಯ ಸುವರ್ಣಮಯವಾಗಿ ಕಾಣುತ್ತಿತ್ತು. ವೆಂಕಟೇಶನಂತೂ ಅವಳ ಮನಸ್ಸಿನ ದಿಗಂತದಿಂದ ಶಾಶ್ವತವಾಗಿ ಜಾರಿ

ಹೋಗಿದ್ದ. ಈಗಂತೂ ತನ್ನನ್ನು ಹಾದಿ ಪೋಕರಲ್ಲಿ ಯಾರಾದರೂ ಹಿಂದಿನಂತೆ ಕೆಣಕಿದರೆ ತಾನೇ ಅವರಿಗೆ ಬುದ್ಧಿಗಲಿಸುವಷ್ಟು ಧೈರಸ್ಥಳಾಗಿದ್ದಳು. "ಹಿಂದಿನ ಅಂಜುಬುರುಕಿ ಹುಡುಗಿಯಲ್ಲ ನಾನು. ಸಾಕಷ್ಟು ವ್ಯವಹಾರ ಜ್ಞಾನವನ್ನು ಪಡೆದಿರುವ ವಿದ್ಯಾವತಿ. ಆದರೆ ನನ್ನ ತಂದೆ ತಾಯಿಗಳು ಇನ್ನೂ ನನ್ನನ್ನು ಆರುವರುಷದ ಮಗುವಿನಂತೆ ಕಾಣುವರಲ್ಲಾ!" ಎಂಬ ಕೊರತೆ. "ನ್ಯಾಯವೇ! ಅವರಿಗೆ ತಾನೆಂದಿದ್ದರೂ ಮಗು ಆದರೆ ಅವರ ಮಮತೆ ತನ್ನ ಭವಿಷ್ಯ ಭವನಕ್ಕೆ ಭಂಗತಾರದಿದ್ದರೆ ಸರಿ" ಎಂಬ ಸಮಾಧಾನ. "ಇಂಟರ್‌ಕಾಲೇಜ್ ಡಿಬೇಟ್‌ನಲ್ಲಿ ಪ್ರಥಮ ಬಹುಮಾನವಾದ ಚಿನ್ನದ ಪದಕ ಬಂದಂದಿನಿಂದ ದೇಶದ ಕಾಲೇಜುಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರ ಬಾಯಲ್ಲೆಲ್ಲಾ ಎಸ್. ಆರ್. ಲೀಲೂ ಮಾತೇ! ಎಷ್ಟೊಂದು ಮೆಚ್ಚುಕೆಯಪತ್ರಗಳು—! ತಿಳಿದವರಿಂದ – ತಿಳಿಯದವರಿಂದ, ಊರಿನವರಿಂದ, ಹೊರಗಿನವರಿಂದ, ವಿದ್ಯಾರ್ಥಿಗಳಿಂದ, ವಿದ್ಯಾರ್ಥಿನಿಯರಿಂದ, ಪ್ರೊಫೆಸರ್‌ಗಳಿಂದ— ಓಹೋಹೋ! ಆದರೆ, ಎಲ್ಲಕ್ಕಿಂತ ಹೆಚ್ಚಾಗಿ ಆ ದಿನ ಪ್ರೈವ್ ಅಪೋಸರ್ ಆಗಿ ಮಾತನಾಡಿ ಸೋತುಹೋದ ರವೀಂದ್ರ – ಅವನು ತನ್ನ ಸೋಲಿಗಾಗಿ ನೊಂದು ಮುಖತಿರುಗಿಸಿಕೊಳ್ಳುವ ಬದಲು, ಆ ಗುಂಪಿನಮಧ್ಯೆ ನುಗ್ಗಿಬಂದು ತನಗೆ ಷೇಕ್‌ಹ್ಯಾಂಡ್ಸ್ ಕೊಟ್ಟು ಎಷ್ಟೊಂದು ಕಂಗ್ರ್ಯಾಚುಲೇಷನ್ ಕೊಟ್ಟ. ಗಂಡಸರು ನಿಜವಾಗಿಯೂ ಷಿವಲ್ರಸ್. ಅವನೇನು ನನಗಿಂತ ಕಡಿಮೆ ಬುದ್ಧಿವಂತನಲ್ಲ. ಸೊಗಸಾಗಿಯೇ ಮಾತನಾಡಿದ – ವಾದಿಸಿದ. ನಾನು ಸಭೆಯಲ್ಲಿ ಅವನ ವಾದವನ್ನು ಎಷ್ಟೊಂದು ನಗೆಗೀಡುಮಾಡಿದೆ! ಆದರೂ ಎಳ್ಳಷ್ಟು ಮುನಿಸಿಲ್ಲ. ನಗುನಗುತ್ತಿದ್ದ............ಅವನಿಗಿನ್ನೂ ಮದುವೆಯಾಗಿರಲಾರದು. ಹೌದು ಎರಡನೇವರ್ಷದ ಆನರ್ಸ್ ಮುಗಿಸಿಕೊಂಡು ಬರುವ ವರುಷ ಅಮೆರಿಕಾಕ್ಕೋ ಏನೋ ಹೋಗುವನೆಂದು ಆ ತರುಣ ಇಂಗ್ಲಿಷ್ ಉಪಾಧ್ಯಾಯರು ಹೇಳುತ್ತಿದ್ದರು. ಹುಂ........ಇರಲಿ. ಈಗ ಓದು, ಓದು – ಓದು – ಅದೊಂದೇ ಗುರಿ." ಹೀಗೆ ಲೀಲೂ ಹೃದಯ ತುಂಬಿ ತುಳುಕಿತ್ತು.

ರಾಮಚಂದ್ರಮೂರ್ತಿಯ ಕಛೇರಿಯ ಕೆಲಸವು ಹದಗೆಟ್ಟಿತ್ತು. ಅವನು ವಿಧಿಯಿಲ್ಲದೆ ನಿರುತ್ಸಾಹಿಯಾಗಿ ಮಾಡುತ್ತಿದ್ದ ಕೆಲಸಗಳಲ್ಲಿನ ತಪ್ಪುನೆಪ್ಪು

ಗಳಿಂದ ಅವನ ಸೆರ್ಕ್ಲ್ ಸೂಪರಿಂಟೆಂಡೆಂಟ್ ಸಾಕಷ್ಟು ಅತೃಪ್ತನಾಗಿದ್ದನು. 'ರಜವನ್ನಾದರೂ ತೆಗೆದುಕೊಂಡು ಮನಸ್ಸು ನೆಮ್ಮದಿಯಾದನಂತರ ಕೆಲಸಕ್ಕೆ ಬರುವಂತೆ' ನಾಲ್ಕಾರುಬಾರಿ ಹೇಳಿದ್ದ. 'ಕೆಲಸಕ್ಕೆ ರಜವನ್ನು ತೆಗೆದು ಕೊಳ್ಳಬೇಕಾದಂಥ ರೋಗ ತನಗೇನು? ಅಲ್ಲದೇ ಅರ್ಧ ಸಂಬಳದ ರಜದಲ್ಲಿ ತಿನ್ನುವುದಾದರೂ ಏನು?........ಲೀಲೂಗೆ ವಿದ್ಯಾಭ್ಯಾಸಕ್ಕಾಗಿ ತಾನೇನೂ ಖರ್ಚು ಮಾಡಬೇಕಾಗಿಲ್ಲ–ಏಕೆಂದರೆ ಅವಳ ದೌರ್ಭಾಗ್ಯ ಅವಳಿಗೆ ಸ್ಕಾಲರ್ ಷಿಪ್ ರೂಪದಲ್ಲಿ ಬರುತ್ತಿದೆ. ಆದರಲ್ಲೇ ಅವಳು ಆಗಾಗ ತಾಯಿಯ ಔಷಧೋಪಚಾರಕ್ಕೆ ಅಲ್ಪಸ್ವಲ್ಪ ಖರ್ಚುಮಾಡುತ್ತಿದ್ದಳು—ಆದರೂ ಅರ್ಧ ಸಂಬಳದ ಬಾಳು–ಛೀ! ಬದುಕಿರುವವರೆಗೂ ದುಡಿಯುವುದು–ದುಡಿಯು ವುದು. ದುಡಿಯುವುದು" ಹೀಗೆ ಸೋತು ಕೈಕಟ್ಟುತ್ತಿದ್ದನು.

ಆ ದಿನ ಭಾನುವಾರ. ರಾಮಚಂದ್ರಮೂರ್ತಿ ಮನೆಯಲ್ಲೇ ಇದ್ದ. ಮಗಳಿಗೆ ಬಿಡುವುಕೊಟ್ಟು ತಾನೇ ಪೂರ್ಣವಾಗಿ ಅಡುಗೇ ಕೆಲಸದಲ್ಲಿ ತೊಡ ಗಿದ್ದ. ನಿತ್ಯದಂತೆ ಸುತ್ತುಗೆಲಸಕ್ಕೂ ಮಗಳನ್ನು ಕರಿಯದೆ ಅವಳನ್ನು "ಅಮ್ಮನಬಳಿ" ಇರುವಂತೆ ಹೇಳಿದ್ದ. ಸೀತಮ್ಮನ ಖಾಯಿಲೆ ಇಂಥದ್ದೇ ಎಂದು ನಿರ್ದಿಷ್ಟವಾಗಿ ಯಾವ ವೈದ್ಯರೂ ನಿರ್ಧಾರಕ್ಕೆ ಬಂದಿರಲಿಲ್ಲ. ಒಟ್ಟಿನಲ್ಲಿ ರಕ್ತ ಕಡಿಮೆಯಾಗಿರುವುದರಿಂದ ಶರೀರದಲ್ಲಿ ಮಿಕ್ಕೆಲ್ಲ ಚೇಷ್ಟೆಗಳೂ ಇವೆ ಯೆಂದು, ಅವಳ ಮನಸ್ಸಿಗೆ ನೆಮ್ಮದಿಯಾಗಿ, ಒಂದೆರಡು ಟಾನಿಕ್‌ಗಳನ್ನು ಸೇವಿಸಿದರೆ ಗುಣಮುಖವಾಗುವುದೆಂದು ಅಭಿಪ್ರಾಯಪಟ್ಟಿದ್ದರು. ಟಾನಿಕ್ ಗಳನ್ನೇನೋ ಸೇವಿಸಬಹುದು. ಮನಸ್ಸಿನ ನೆಮ್ಮದಿಯನ್ನು ಹೇಗೆ ಸಂಪಾದಿಸು ವುದು? ಮಗಳು ಹತ್ತಿರ ಬಿಡುವಾಗಿ ಕುಳಿತಿರುವ ಇಂದು ಹೇಗಾದರೂಮಾಡಿ ಅವಳ ಮುಂದಿನ ಓದನ್ನು ನಿಲ್ಲಿಸುವಂತೆ ಹೇಳಿ, ಯಾವುದಾದರೂ ಗಂಡನ್ನು ನೋಡಿ ಮದುವೆಮಾಡಿಬಿಡುವಂತೆ ಗಂಡನನ್ನು ಕೇಳಿಕೊಳ್ಳಬೇಕೆಂದು ಮನಸ್ಸುಮಾಡುತ್ತಿದ್ದಳು.

ಹನ್ನೊಂದೂವರೆಘಂಟೆಯ ಸಮಯ. ಮೂರ್ತಿಯು ಅಡುಗೆ ಯನ್ನೆಲ್ಲಾ ಮುಗಿಸಿ, ಹೆಂಡತಿಗೆ ಗಂಜಿ ಸಿದ್ಧಮಾಡುತ್ತಿದ್ದ. ಹೊರಗಡೆ "ಪೋಸ್ಟ್" ಎಂದು ಕೂಗಿದಂತಾಯಿತು. ತಿಂಗಳಿಗೊಂದು ಸಾರಿ ಎರಡು ಸಾರಿ ಎಲ್ಲಿಂದ ಕಾಗದ ಬಂದು, ಪೋಸ್ಟ್‌ಮ್ಯಾನು 'ಪೋಸ್ಟ್' ಎಂದು

ಕೂಗಿದರೂ ಆ ಧ್ವನಿಯನ್ನು ಕೇಳುತ್ತಲೇ ವೆಂಕಟೇಶನು ಬದುಕಿರುವನು – ಎನಿಸಿಂದಲೇ ಈ ಕಾಗದ ಬಂದಿರಬೇಕೆಂದು ಅವನ ಬಲವತ್ತರವಾದ ಆಶೆ. ಆದರೆ ನಂತರ ಬಹುನಿರಾಶೆಗೊಳ್ಳುತ್ತಿದ್ದ. ಈ ದಿನವೂ ಅಂತೆಯೇ. ಸರ್ರನೆ ಹೊರಕ್ಕೆಬಂದು ಕಾಗದ ತೆಗೆದುಕೊಂಡ. ದೊಡ್ಡ ರಿಜಿಸ್ಟರ್ಡ್ ಕವರು. ಒಳಗೇನಿರಬಹುದು? ಏನೇ ಇರಲಿ. ವೆಂಕಟೇಶ ಮೂರ್ತಿಯ ಕಾಗದ. ಆದುದರಿಂದ ಅವನು ತನ್ನ ಊಹೆಯಂತೆ ಬದುಕಿದ್ದಾನೆ. ಅಷ್ಟೇ ಸಾಕು – ಈ ಆನಂದದಲ್ಲಿ ಕವರನ್ನು ಹಿಡಿದು ಅಡುಗೆಯಮನೆಗೋಡಿಬಂದು ದೇವರ ಮುಂದಿನ ಮಣೆಯಮೇಲೆ ಕುಳಿತು, ಕವರನ್ನು ತೆರೆದ. ಒಳಗಡೆಯಿಂದ ಒಂದು ನೂರುರೂಪಾಯಿನ ದೊಡ್ಡನೋಟು ಹೊರಬಿತ್ತು. ರಾಮಚಂದ್ರಮೂರ್ತಿ ತನ್ನ ಕಣ್ಣನ್ನು ತಾನೇ ನಂಬಲಾರದಾದ. ಒಳಗಿದ್ದ ಪತ್ರವನ್ನುಹಿಡಿದು ಓದಲಾರಂಭಿಸಿದ ಬಹು ದೀರ್ಘಪತ್ರ. ಅದರಲ್ಲಿ ಆ ಮನೆಯ ಮೂವರಿಗೂ ಅನಂತ ವಂದನೆಗಳು, ಕ್ಷಮಾಪಣೆಗಳು ತುಂಬಿವೆ. ಆಹಾ ಹುಡುಗನ ಪ್ರೇಮವೆಂತಹುದು. ಆದರೆ ತಾನೇನು ಮಾಡುತ್ತಿದ್ದಾನೆ? ಎಲ್ಲರ ಯೋಗಕ್ಷೇಮವನ್ನೂ ತಿಳಿಯಬಯಸಿರುವವನು ತನ್ನ ಯೋಗಕ್ಷೇಮದ ಬಗ್ಗೆ ಏನು ಹೇಳಿದ್ದಾನೆ?....ಅದು ಕಡೆಯ ಹಾಳೆಯಲ್ಲಿದೆ......." ತಮಗೆ ತಿಳಿಸದೇ, ತಮಗೆ ಮುಖ ತೋರಿಸಲಾರದೆ ಇಲ್ಲಿಗೆ ಬಂದುಬಿಟ್ಟೆ. ಸೆಟ್ಟಿಯ ಅಂಗಡಿಗೆ ಕೊಡುವಂತೆ ಅಮ್ಮ ಕೊಟ್ಟಿದ್ದ ಹತ್ತುರೂಪಾಯಿಗಳನ್ನೂ, ತಾವು ಕೊಟ್ಟಿದ್ದ ಐದುರೂಪಾಯಿಗಳನ್ನೂ ಯೊತ್ತುಕೊಂಡು ಬಂದುಬಿಟ್ಟೆ. ಆ ಹಣವೇ ನನ್ನನ್ನು ಈ ಊರಿನವರೆಗೂ ಕರೆತಂದಿತು. ಈ ಮಹಾ ಪಟ್ಟಣಕ್ಕೆ ಭಿಕಾರಿಯಾಗಿ ಬಂದೆ. ಆದರೆ ಈಗ ನನ್ನಕೈಹಿಡಿದಿರುವ ಪುಣ್ಯಾತ್ಮರ ಕೃಪೆಯಿಂದ ಅವರ ವ್ಯಾಪಾರಸಂಸ್ಥೆಯ ಕಛೇರಿಯಲ್ಲಿ ನೂರೈವತ್ತು ರೂಪಾಯಿ ಸಂಬಳ ಬರುತ್ತಿದೆ. ಮೊದಮೊದಲು ಕೇವಲ ಅವರ ಮನೆಯ ಊಟಕ್ಕೆಮಾತ್ರ ನಿಂತು ಕೆಲಸಮಾಡುತ್ತಿದ್ದೆ. ನಂತರ ನಲವತ್ತು ರೂಪಾಯಿಯಿಂದ ಪ್ರಾರಂಭವಾದ ಸಂಬಳ ಈ ಎರಡು ವರುಷಗಳಲ್ಲಿ ನೂರೈವತ್ತು ರೂಪಾಯಾಗಿದೆ. ನನ್ನ ವಿದ್ಯಾಭ್ಯಾಸವಂತೂ ಅಷ್ಟಕ್ಕೇ ನಿಂತಿತು. ಇಲ್ಲಿಗೆ ಬಂದನಂತರ ಈ ಎರಡು ವರುಷಗಳಲ್ಲಿ ಷಾರ್ಟ್‌ಹ್ಯಾಂಡ್ ಟೈಪ್‌ರೈಟಿಂಗ್‌ನ ಸೀನಿಯರ್ ಪರೀಕ್ಷೆಗಳನ್ನೂ, ಅಕೌಂಟ್ಸ್ ಪರೀಕ್ಷೆಯನ್ನೂ ಪಾಸ್ ಮಾಡಿದೆ.

ನನ್ನ ಇಲ್ಲಿನ ಧಣಿಗಳು ಅಷ್ಟೇ ಯೋಗ್ಯತೆ ತಮ್ಮ ಸೆಕ್ರೆಟರಿಗೆ ಸಾಕೆಂದು ಹೇಳುತ್ತಾರೆ. ಅವರ ಮನೆಯ ಅಡುಗೆಯ ಕೆಲಸದಿಂದ ಹಿಡಿದು ಕಛೇರಿಯ ಕೆಲಸಗಳವರೆಗೆ ಸಮಸ್ತವನ್ನೂ ಅಗತ್ಯವೊದಗಿದಾಗ ಮಾಡುತ್ತೇನೆ. ಅವರಂತೂ ನನ್ನ ವಿಚಾರದಲ್ಲಿ ತಮ್ಮಂತೇ ಪ್ರೇಮದಿಂದಿದ್ದಾರೆ. ನಿಮ್ಮೆಲ್ಲರ ಪ್ರೇಮವೇ ಆಬ್ಬಲಿಯಾದ ನನ್ನ ಆಸ್ತಿ; ಬೊಂಬಾಯಿ ಬಹು ದೊಡ್ಡ ಪಟ್ಟಣ. ಆದರೆ ಈ ಎರಡು ವರುಷಗಳಲ್ಲಿ ಒಂದು ದಿನವೂ ಊರು ಸುತ್ತಲು ಹೊರಡಲಿಲ್ಲ. ಈ ಕ್ರಿಸ್‌ಮಸ್‌ಗೆ ನಿಮ್ಮೆಲ್ಲರನ್ನೂ ಬರಮಾಡಿಕೊಂಡು, ನಿಮ್ಮೊಂದಿಗೆ ನಮ್ಮ ಧಣಿಗಳ ಕಾರಿನಲ್ಲಿ ಮೂರುದಿನ ಊರನ್ನು ನೋಡಬೇಕೆಂದು ಸಂಕಲ್ಪಿಸಿದ್ದೇನೆ. ಆ ವೇಳೆಗೆ ಇನ್ನೂರು ರೂಪಾಯನ್ನು ಹದಿನೈದುದಿನ ಮುಂಚೆಯೇ ಕಳುಹಿಸುತ್ತೇನೆ. ನೀವು ನನ್ನ ತಾಯಿತಂದೆಗಳೆಂದು ಇವರಲ್ಲಿ ಹೇಳಿದ್ದೇನೆ. ಈ ನನ್ನ ಸ್ವಾತಂತ್ರ್ಯವನ್ನು ತಾವು ಮನ್ನಿಸುವಿರೆಂದು ನಂಬಿದೇನೆ. ಯಾವ ಸಂಕಲ್ಪದಿಂದ ಇಷ್ಟು ದಿನವೂ ತಮಗೆ ಕಾಗದ ಬರಯಲಿಲ್ಲವೋ ಆ ಸಂಕಲ್ಪ ಪೂರೈಸಿದೆ. ಅದರ ವಿವರ ಮುಂದಿನ ಕಾಗದದಲ್ಲಿ ಶ್ರುತಪಡಿಸಲ್ಪಡುತ್ತೆ. "ಅಮ್ಮನಿಗೆ" ನನ್ನ ಶಿರಸಾಷ್ಟಾಂಗ ನಮಸ್ಕಾರಗಳನ್ನೂ, ಸಹಸ್ರ ನಮಸ್ಕಾರಗಳನ್ನೂ ಒಪ್ಪಿಸುತ್ತಿದೇನೆ. ಅವರಿಟ್ಟ ಭಿಕ್ಷಾನ್ನದ ಮಗು ನಾನು. ಲೀಲೂಗೆ ಮದುವೆಯಾಯಿತೇ ? ಆಗಿದ್ದಲ್ಲಿ ಅಳಿಯ ಯಾರು ? ಆಗದಿದ್ದಲ್ಲಿ ಈಗ ಅವರು ಏನು ಮಾಡುತ್ತಿದಾರೆ ? ನಮ್ಮ ಧಣಿಗಳು ಹಲವು ಬಾರಿ ಹೇಳಿದರೂ ತಾಯಿ ತಂದೆಗಳಾದ ನಿಮ್ಮ ಅಪ್ಪಣೆಯಿಲ್ಲದೆ ನಾನು ಯಾರನ್ನೂ ಮದುವೆಯಾಗುವುದಿಲ್ಲವೆಂದು ಹೇಳಿದೇನೆ. ಈ ಕಾಗದ ಕಂಡ ಕೂಡಲೇ ನಿಮ್ಮೆಲ್ಲರ ಯೋಗ ಕ್ಷೇಮಕ್ಕೆ ಕಾಗದ ಬರೆಸಬೇಕು. ಬಹುಕಾತುರನಾಗಿ ಉತ್ತರದ ನಿರೀಕ್ಷಣೆಯಲ್ಲಿದ್ದೇನೆ.

— ನಿಮ್ಮ ಸಾಕುಮಗ ವೆಂಕಟೇಶ

ಓದುತ್ತ ಓದುತ್ತ ರಾಮಚಂದ್ರಮೂರ್ತಿಯ ಕಣ್ಣುಗಳು ನೀರಿನಿಂದ ತುಂಬಿ ತುಟಿಗಳು ಮಗುವಿನಂತೆ ಅದುರತೊಡಗಿದುವು. ಗದ್ಗದಿತನಾಗಿ ದೇವರ ಮುಂದೆ ಬಿಕ್ಕಿ ಬಿಕ್ಕಿ ಅಳತೊಡಗಿದ. ತಾಯಿಗೆ ಗಂಜಿಯನ್ನು ತೆಗೆದುಕೊಂಡು ಹೋಗಲು ಬಂದ ಲೀಲೂ ಅಪ್ಪನ ಈ ಸ್ಥಿತಿಯನ್ನು ದೂರದಿಂದ ನೋಡಿ ಬೆಚ್ಚಿದಳು. ಹಿಂದಿರುಗಿಹೋಗಿ ತಾಯಿಗೆ ತಿಳಿಸಿದಳು. ಸೀತಮ್ಮನು

ಮಂಚದಿಂದಿಳಿದು ಸರಸರನೆ ಬಂದು ಗಂಡನಬಳಿ ಕುಳಿತು "ಏನೂಂದ್ರೆ ಸಮಾಚಾರ ? ಏನುಹೇಳಿ ?" ಎಂದಳು. ರಾಮಚಂದ್ರಮೂರ್ತಿ ಗದ್ಗದಿತ ನಾಗಿ, ಮಾತನಾಡಲಾರದೆ ಕಾಗದ, ನೋಟುಗಳನ್ನು ಅವಳ ಕೈಗೆ ಕೊಟ್ಟು ಹೊರಗಡೆಗೆ ಹೊರಟುಹೋದ. ಸೀತಮ್ಮನು ಲೀಲೂವನ್ನು ಕಾಗದ ಓದುವಂತೆ ಹೇಳಿದಳು. ಓದಿ ಮುಗಿಯುವ ವೇಳೆಗೆ ಆಕೆಗೂ ಹೊಟ್ಟೆ ತಳಮಳಿಸಿ ಕಣ್ಣೀರು ತಡೆಯದೆ ಹರಿಯಿತು. "ದೇವರ ದಯದಿಂದ ತಬ್ಬಲಿ ಎಲ್ಲಾದರೂ ಸುಖವಾಗಿದ್ದರೆ ಸಾಕು." ಎಂದಳು. ಲೀಲೂವಿನ ಮನಸ್ಸಿ ಗೇಕೋ ಸಂತೋಷವಾಗಲೀ, ಸಮಾಧಾನವಾಗಲೀ ಆಗಲೇ ಇಲ್ಲ. ಅದಕ್ಕೆ ಪ್ರತಿಯಾಗಿ ಒಂದುಬಗೆಯ ಪಾಪಬುದ್ಧಿಯೇ ಹೊಳೆಯಿತು. ಅದಕ್ಕೆ ಕಾರಣವೇನೆಂದು ಅವಳೇ ತಿಳಿಯದಾದಳು. "ಎಲ್ಲೋ ಹೊರಟುಹೋದ - ಸತ್ತನೋ - ಬದುಕಿದನೋ - ಎಲ್ಲಾದರೂ ಹೋಗಲಿ. ಅಂತೂ ಹೊರಟು ಹೋದನಲ್ಲ ಪತ್ತೆಯಿಲ್ಲದಂತೆ—ಹೀಗೆ ನಿರಾಳವಾಗಿದ್ದರೆ, ಮತ್ತೆ ಬದುಕಿ ದ್ದಾನಂತೆ. ಕೆಲಸದಲ್ಲಿದ್ದಾನಂತೆ. ಮದುವೆಯೂ ಆಗಿಲ್ಲವಂತೆ—ಒಳ್ಳೇ ಶನೀಶ್ವರ ಕಾಣಿಸಿಕೊಂಡಹಾಗಾಯಿತಲ್ಲಾ. ಈ ಕಾಗದದಿಂದ ತನ್ನ ಮುಂದಿನ ಭವಿಷ್ಯಕ್ಕೆ ಇನ್ನೇನು ಅಡ್ಡಿ ಆತಂಕಗಳೊದಗುವುವೋ ಕಾಣೆ ನಲ್ಲಾ !" ಎಂದು ಚಿಂತಾಕ್ರಾಂತಳಾದಳು.

ಆದಿನ ಸಂಜೆ ಸೀತಮ್ಮನ ಮನಸ್ಸಿಗೆ ಹೋದ ಜೀವ ಬಂದಂತೆ ನೆಮ್ಮದಿ ಯಾಗಿತ್ತು. ತನ್ನ ಇಷ್ಟು ದಿನದ ಸಂಕಟದ ಬೇಡಿಕೆಗೆ ಭಗವಂತ ಒಲಿದನೆಂದು ಭಾವಿಸಿದಳು. ಈಗ ತನ್ನ ತಾಯ್ತನದ ಅಧಿಕಾರವನ್ನು ಪೂರ್ಣವಾಗಿ ಪ್ರಯೋಗಿಸಿ ಲೀಲೂವನ್ನು ಮದುವೆಗೊಪ್ಪಿಸಿಬಿಟ್ಟು, ವೆಂಕಟೇಶಮೂರ್ತಿ ಯನ್ನು ಬೊಂಬಾಯಿಂದ ಕರೆಸಿಬಿಟ್ಟು, ಇಬ್ಬರಿಗೂ ಮದುವೆಯನ್ನು ಮಾಡಿ ಬಿಟ್ಟರೇ — ಮುಂದೆ ತಾನು ಬದುಕಿದ್ದರೂ ಸರಿ - ಇಲ್ಲದಿದ್ದಲ್ಲಿ ನಿಶ್ಚಿಂತೆ ಯಾಗಿ ಕಣ್ಣು ಮುಚ್ಚಬಹುದು — ಹೀಗೆಂದು ಸಂಕಲ್ಪಮಾಡುತ್ತಿದ್ದಳು. ರಾಮಚಂದ್ರಮೂರ್ತಿಯು ವೆಂಕಟೇಶನ ಪ್ರೇಮಕ್ಕೆ ಸೋತು ಅವನ ನೆನಪಿನಲ್ಲೇ ಇದ್ದ. ಸೀತಮ್ಮನ ಮನಸ್ಸಿನಲ್ಲಿದ್ದಂತೆ ಅವನ ಮನಸ್ಸಿನಲ್ಲಿ ಆಶೆ ಆತಂಕಗಳಿರ ಲಿಲ್ಲ. ತನಗೇ ಅರಿವಿಲ್ಲದೆ ಈ ಎರಡು ವರುಷಗಳಲ್ಲಿ ಲೀಲೂ ವಿಚಾರವಾಗಿ ತನ್ನ ಪ್ರೇಮ ಕಡಿಮೆಯಾಗುತ್ತಾ ಬಂದಿದ್ದುದನ್ನ ತಿಳಿದಿದ್ದ. ಅವಳು

ಒಮ್ಮೊಮ್ಮೆ ತನ್ನ ಮುಂದೆ ತೋಳು ತಟ್ಟಿ ನಿಂತ ಪ್ರತಿಸ್ಪರ್ಧಿಯಂತೆ ಕಾಣು ತ್ತಿದ್ದಳು. ಅವಳ ಭವಿಷ್ಯಕ್ಕೆ ಅವಳೇ ಕಾರಣಳೆಂದು – ತನ್ನ ಕೈವಾಡವೇನೂ ಇಲ್ಲವೆಂದು ಭಾವಿಸಿಬಿಟ್ಟಿದ್ದ. ಲೀಲೂವಿನ ಮದುವೆಯ ವಿಚಾರ ಅವನ ಅಂತಃಕರಣದಲ್ಲಿ ಇರಲೇ ಇಲ್ಲ. ಹೆಂಡತಿಯು ಸೂಚಿಸಿದ ಮೇಲೂ ಸುಮ್ಮ ನಿದ್ದ.

" ದೇವರದಯದಿಂದ ವೆಂಕಟೇಶನಿಗಿನ್ನೂ ಮದುವೆಯಾಗಿಲ್ಲ. ಅಲ್ಲದೇ ' ಲೀಲೂಗೆ ಮದುವೆಯಾಯಿತೇ ಇಲ್ಲವೇ ' ಅಂತ ಕೇಳಿದ್ದಾನೆ. ಆದುದರಿಂದ ಈಗಲೂ ಅವನನ್ನ ಕರೆಸಿ ಮದುವೆ ಮಾಡಿಬಿಡೋದೇ....ಅಲ್ಲವೇ ಅಂದ್ರೆ ?"

" ಹೂಂ."

" ಅದು ಯಾಕೆ ನೀವು ಬಾಯಿಬಿಟ್ಟು ಮಾತನಾಡೊಲ್ಲ ? ನನ ಗೊಬ್ಬಳಿಗೇ ಮಗಳೇ ಲೀಲೂ ? ನಿಮಗೂ ಮಗಳಲ್ಲವೇ ?"

" ನಿನಗೂ ಮಗಳಲ್ಲ."

" ಅದು ಯಾಕಿಂಥ ಮಾತನಾಡುತೀರಾಂದ್ರೇ ?"

" ಕರೆದು ಕೇಳಿಬಿಡು ಈಗ. ಅವಳು ನಿನ್ನ ಮಗಳಾಗಿದ್ದರೆ ನಿನ್ನ ಮಾತು ಕೇಳೇ ಕೇಳುತಾಳೆ."

" ಕೇಳದಿದ್ದರೆ ಬಿಡೋರು ಯಾರು ?"

" ಆ ಹಠ ಮಾಡಬೇಡ ಸೀತಾ ! ಮಾಡಬೇಡಾ ! ಸದ್ಯ ನೀನು ಆರೋಗ್ಯವಾಗಿದ್ದರೆ ಸಾಕು. ಮನಸ್ಸಿನಲ್ಲಿ ಯಾವ ಆಶೆಗಳಿಗೂ ಅವಕಾಶ ಕೊಡಬೇಡ. ಮುಂದಾಗೋ ನಿರಾಶೆಗೆ ಜೀವ ಝುರ್ಝರಿತವಾಗಿ ಹೋಗುತ್ತೆ. ಕಂಡೋ ಕಾಣದೇನೋ ತಪ್ಪುದಾರಿ ಹಿಡಿದೆವು. ಬಹುದೂರ ಬರೋಕೆ ಮುಂಚೇನೇನೇ ಎಚ್ಚರಿಕೆಗೆ ಬೆಲೆ ಕೊಡಲಿಲ್ಲ. ಈಗ ಬಹುದೂರ ಬಂದು ಬಿಟ್ಟಿದೇವೆ. ಆದ್ದರಿಂದ ದಾರೀಲಿ ನಮಗೆ ಎಂದೂ ಕಾಣದ, ನಿರೀಕ್ಷಿಸದ ವಿಚಿತ್ರ ಸ್ಥಳಗಳು ಕಂಡರೆ ಆಶ್ಚರ್ಯ ಪಡಬೇಕಾದ್ದಿಲ್ಲ. ನಾವು ನಿರೀಕ್ಷಣೆ ಮಾಡೋ ಸ್ಥಳಗಳೂ ದೃಶ್ಯಗಳಂತೂ ಖಂಡಿತ ಕಾಣೊಲ್ಲ ನೀನು ನಿನ್ನ ಜೀವ ಭದ್ರವಾಗಿಟ್ಟುಕೋ. ಯಾರಿಂದಲೂ ಏನೂ ಅಪೇಕ್ಷಿಸಬೇಡ "

" ಚೆನ್ನಾಗಿದೆ ನಿಮ್ಮ ವೇದಾಂತ. ಬರಬರುತಾ ಲೀಲೂ ವಿಚಾರದಲ್ಲಿ ನಿಮಗೆ ಮಮತೆಯೇ ಮಾಯವಾಗುತಾ ಇದೆ. ನಾನೇನು ಈದಿನದವರೆಗೂ

ನಿರಾಶಳಾಗೇ ಇದ್ದೆ. ಆದರೆ ಈದಿನ ವೆಂಕಟೇಶನ ಕಾಗದ ಕಂಡ ಮೇಲೆ ಹೋಗಿದ್ದ ಪ್ರಾಣ ಹಿಂದಿರುಗಿ ಬಂದಹಾಗಾಗಿದೆ. ಏನಾದರೂಮಾಡಿ ಲೀಲೂನ ಒಪ್ಪಿಸಿ ಈ ಲಗ್ನ ನೆರವೇರಿಸಲೇಬೇಕು."

"ಬೇಡ ಸೀತಾ! ಬೇಡ! ನಿನ್ನ ದಮ್ಮಯ್ಯ! ಹಠಮಾಡಿ ವೈ ಕೆಡಿಸಿಕೋಬೇಡ"

"ಅಗೋ! ಲೀಲೂ ಬಂದಹಾಗಿದೆ. ಲೀಲೂ! ಲೀಲೂ!!"

"ಬಂದೇವ್ಮಾ!"

ಎರಡು ನಿಮಿಷಗಳನಂತರ ಲೀಲೂ ಬಂದಳು. ಬರುತ್ತಿರುವಂತೆಯೇ ಅವಳ ಮನಸ್ಸಿಗೆ ಮುಂದೆ ಕಾದಿರುವ ಪರಿಸ್ಥಿತಿ ಚೆನ್ನಾಗಿ ಅರಿವಿಗೆ ಬಂದಿತು. ಅವಳೂ ಸಹ ಇದ್ದ ಅಲ್ಪಾವಕಾಶದಲ್ಲಿ ಹೆಚ್ಚು ವಿಚಾರಮಾಡಲು ಅವಕಾಶ ವಿಲ್ಲದೆ, ತನ್ನ ಸಂಕಲ್ಪವನ್ನುಮಾತ್ರ ದೃಢಪಡಿಸಿಕೊಂಡು ಸ್ವಲ್ಪ ಉದ್ವಿಗ್ನ ಳಾಗಿಯೇ ಒಳಕ್ಕೆ ಬಂದಳು. ಬರುವಾಗ "ಹಾಳಾಗಿಹೋಗಿದ್ದವನ ಶನಿ ಕಾಗದ ಯಾಕೆ ಬರಬೇಕಾಗಿತ್ತೋ! ಅನಿಷ್ಟ!!" ಎಂದು ಹೃದಯಾಂತ ರಾಳದಲ್ಲಿ ಧ್ವನಿಯಾಗುತ್ತಿತು.

"ಬಾ ಲೀಲಾ ಕೂತುಕೊ" ಎಂದು ಹಾಸಿಗೆಯಿಂದೆದ್ದು ಕೂತಿದ್ದ ಸೀತಮ್ಮನು ತನ್ನಪಕ್ಕದ ಕಡೆ ಕೈ ತೋರಿಸಿದಳು. ಲೀಲೂ ಬೇಡದವ ಳಂತೆಯೇ ಬಂದು ಕೂತಳು. ಅವಳ ಮುಖ ಮುದ್ರೆ, ಬಂದು ಕುಳಿತ ರೀತಿ ಗಳನ್ನು ಗಮನಿಸಿದ ಮೂರ್ತಿ, "ಹೋಗುತ್ತಿರುವ ದಾರಿಗೆ ಸಹಜವಾಗಿದೆ— ಸೀತೆ ವೃಥಾ ನೋವುತಿನ್ನುತ್ತಾಳಲ್ಲ!" ಎಂದುಕೊಂಡ.

"ಲೀಲೂ! ನೀನೇನು ಹುಡುಗಿಯಲ್ಲ. ಅರಿಯದವಳಲ್ಲ. ನಾವು ಅರಿಯದೇ ಮಾಡಿರೋ ಕರ್ತವ್ಯಲೋಪಾನ ಈಗ ಸರಿಪಡಿಸಬೇಕು. ನೀನು ತಿಳಿದೋ ತಿಳಿಯದೆಯೋ ಮಾಡಿದ ಒಂದು ರುಜುವಿನಿಂದ ಸ್ಥಿತಿ ಬಹಳ ಹದಗೆಟ್ಟುಹೋಯಿತು."

"ಅಮ್ಮಾ! ನೀನು ಹಿಂದಿನದೆಲ್ಲಾ ಹಿಡಿದು ಕಡೆಯೋಹಾಗಿದ್ದರೆ ನಾನು ಕೇಳಲಾರೆ. ಮುಂದೇನಾಗಬೇಕೂನ್ನೋದನ್ನ ಹೇಳಿದರೆ, ನನಗೇ ನೇರವಾಗಿ ಸಂಬಂಧಪಟ್ಟ ವಿಚಾರವಾದರೆ, ಆಗಬಹುದು—ಬೇಡಾನ್ನೋದನ್ನ ಹೇಳಬಲ್ಲೆ—ಅಷ್ಟೇ."

" ಸರಿಯಮ್ಮ. ಈಗ ನಿನ್ನ ಎಳೀ ವಯಸ್ಸಿನಲ್ಲಿ ನಿನಗೊಂದು ಮದುವೇ ಮಾಡದೇಹೋದದ್ದು ನಮ್ಮ ತಪ್ಪು. ನಮ್ಮ ತಪ್ಪೂಂತ ಯಾಕೆ ಹೇಳಲಿ ! ಮಾಡಬೇಕೂನ್ನೋ ನಿಮ್ಮ ತಂದೆಯ ಕೈ ತಡೆದದ್ದು ನನ್ನ ತಪ್ಪು."

" ಏನೋ ನನ್ನನ್ನ ಹೆತ್ತ ಪ್ರೀತಿಗೆ ಅಷ್ಟಾದರೂ ಮಾಡಿದೆಯಲ್ಲ. ಇಲ್ಲದೇ ಹೋಗಿದ್ದರೆ ಇಷ್ಟವಿಲ್ಲದವನ್ನ ಗಂಡಾಂತ ಉರಲು ಹಾಕಿಕೊಂಡು ಬದುಕಿರೋವರೆಗೂ ಹೆಣಗಾಡಬೇಕಾದ ಸಂಕಟಕ್ಕೆ ಗುರಿಯಾಗಬೇಕಾಗುತ್ತಿತ್ತು."

" ಈಗ, ನಿನ್ನ ಮದುವೆ ಮಾಡಲೇಬೇಕು. "

" ಅದೇನು ಅಂಥಾ ತರಾತುರೀ ? "

" ಲೀಲಾ ! ನನಗೆ ದಿನದಿನಕ್ಕೆ ವೈಲಿ ಶಕ್ತಿ ಕಡಿಮೆಯಾಗುತಾ ಇದೆ. ನಿನ್ನ ಮದುವೇನ ಕಣ್ಣಾರ ನೋಡಿಬಿಟ್ಟರೆ ಬದುಕಿಕೊಳ್ಳುತೀನೇನೋ ಅನ್ನೋ ಆಶೆ ಕಾಣೇ ! ನಾನು ಬದುಕಿರೋದು ನಿನಗೆ ಬೇಡವಾದರೆ........ಹಾಗೇ ಹೇಳಿಬಿಡು."

" ಇದೇನಮ್ಮ ಇಂಥಾ ಮಾತಾಡುತೀ ? "

" ಹೌದು ಲೀಲೂ ! ನಿನ್ನ ಮದುವೆಯಾಗದಿದ್ದರೆ, ಅದೂ ಈ ವರ್ಷವೇ, ನಂತರ ನಾನು ಇರಲಾರೆ. ನನಗೆ ಖಂಡಿತವಾಗಿ ಹಾಗನ್ನಿಸುತಾ ಇದೆ "

" ಅಲ್ಲವಮ್ಮಾ ! ಮೊದಲಿಂದ ನೀನು ಹೇಳುತ್ತಿದ್ದ ಮಾತುಗಳಿಗೂ ಈಗಾಡುತಿರೋ ಈ ಮಾತುಗಳಿಗೂ ಅರ್ಥಾರ್ಥಕ್ಕೆ ಸಂಬಂಧವಿಲ್ಲವೇ ? ಈಗ ತಾನೇ ಇಂಟರ್‌ಮೀಡಿಯೆಟ್ ಮುಗಿದಿದೆ. ಪ್ರೌಢವ್ಯಾಸಂಗ ಈಗೀಗ ಪ್ರಾರಂಭವಾಗುತಾ ಇದೆ. ಇಂಥಾ ಸ್ಥಿತೀಲಿ ' ಮದುವೆಯಾಗಿಬಿಡು ' ಅಂದರೆ ನನ್ನ ವಿದ್ಯಾಭ್ಯಾಸದ ಗತಿಯೇನು ? ಅದನ್ನ ಪ್ರಾರಂಭಮಾಡಿ ಇಷ್ಟು ದಿವಸ ಕಷ್ಟಪಟ್ಟು ಹಗಲೂ ರಾತ್ರೆ ಓದಿದರ ಪುರುಷಾರ್ಥವೇನು ? ನೀನೂ ಸಹಾ........... "

" ನೋಡು ಲೀಲೂ. ನೀನು ಬಿ.ಎ. ಪ್ಯಾಸ್ ಮಾಡಿ, ಕೆಲಸಕ್ಕೆ ಸೇರಿ ಸಂಪಾದನೆಮಾಡಿ ನಮ್ಮಿಬ್ಬರ ಹೊಟ್ಟೆ ಹೊರೆಸಬೇಕಾಗಿಲ್ಲ. ನಿನ್ನ ಬಾಳಿಗೆ ನೀನು ಈಗ ಕಲೀತಿರೋ ವಿದ್ಯ ಅಗತ್ಯವಲ್ಲ; ಇಷ್ಟೇ ಅಲ್ಲ. ಅದರಿಂದ ನಿನ್ನ ಹೆಣ್ಣುಬಾಳಿಗೆ ಮಹಾ ವಿಪತ್ಕಾರಕ ಅನ್ನೋದು ನನಗೀಗ ಚೆನ್ನಾಗಿ ಮನದಟ್ಟಾಗುತಾ ಇದೆ. ನಿನ್ನನ್ನ ಹೈಸ್ಕೂಲಿಗೇನೇ ಸೇರಿಸಬಾರದಾಗಿತ್ತೂ

ಅನ್ನಿಸುತಾ ಇದೆ. ಹೈಸ್ಕೂಲಿಗೇ ಏನೂ, ಸ್ಕೂಲಿಗೇ ಸೇರಿಸಬಾರದಾಗಿತ್ತು. ಮನೇಲಿ ಸ್ವಲ್ಪ ಚನ್ನಾಗಿ ಕನ್ನಡ ಇಂಗ್ಲಿಷ್ ಓದೋದು ಬರೆಯೋದು, ಲೆಕ್ಕಾ ಪಕ್ಕಾನ ಅವರ ಮಾತಿನಂತೆ ಬಾಯಿಮುಚ್ಚಿಕೊಂಡು ಕಲಿಸಿ ನಿನ್ನ ಹತ್ತು ಹನ್ನೆರಡನೆಯ ವಯಸ್ಸಿಗೆ ಮದುವೆ ಮಾಡಿದ್ದಿದ್ದರೆ ನಮ್ಮ ಮನೇಲಿ ತುಂಬಿದ್ದ ಆನಂದ ನೂರ್ಮಡಿಯಾಗುತ್ತಿತ್ತೇ ಅಲ್ಲದೆ, ಹೀಗೆ ಮನೇನ ಆತಂಕದ ಬೇಗೆಗೆ ತಳ್ಳುತಿರಲಿಲ್ಲ."

"ಅಮ್ಮಾ! ಈಗ ಹಿಂದಿನ ವಿಚಾರ ನೆನಸಿಕೊಂಡು ಪ್ರಯೋಜನವಿಲ್ಲ. ಇನ್ನು ನೂರುವರುಷ ತಪಸ್ಸು ಮಾಡಿದರೂ, ಮದುವೇಂದರೆ ಏನೂ ಅನ್ನೋದನ್ನ ತಿಳೀದಿದ್ದ ಆ ಪುಚ್ಚುಹುಡುಗಿಯಾಗೋದಕ್ಕೆ ಸಾಧ್ಯವಿಲ್ಲ. ಅಥವಾ ಇದುವರೆಗೂ ಮಾಡಿರೋ ಪ್ಯಾಸ್‌ಗಳನ್ನ ತಲೇಲಿ ತುಂಬಿಕೊಂಡಿರೋ ಪ್ರಪಂಚಜ್ಞಾನಾನ ಎಳ್ಳಷ್ಟೂ ತಗ್ಗಿಸೋದಕ್ಕೆ ಸಾಧ್ಯವಿಲ್ಲ. ಈಗಿರೋ ಹಾಗೆ, ಬಾಳಬೇಕಾದ ನನಗೂ ಸಂತೋಷವಾಗೋಹಾಗೇ ಮಾಡೋ ಕೆಲಸವೇನಾದರೂ ಇದ್ದರೆ ಹೇಳು. ಯೋಚನೆ ಮಾಡೋಣ."

"ಲೀಲೂ! ನೀನು ಮದುವೆ ಮಾಡಿಕೋಬೇಕೂ. ಖಂಡಿತ ಮಾಡಿಕೋಬೇಕೂ. ನಿಮ್ಮಪ್ಪ ಅಮ್ಮನ ವಿಚಾರದಲ್ಲಿ ಏನಾದರೂ ಪ್ರೀತಿ ಗೌರವಗಳನ್ನ ಆ ನಿನ್ನ ಹಾಳು ವಿದ್ಯಾಭ್ಯಾಸ ಉಳಿಸಿದ್ದರೆ ನಾವು ಹೇಳೋ ಗಂಡನ್ನ ಮದುವೆಯಾಗಬೇಕು."

"ಯಾವ ಗಂಡನ್ನಮ್ಮಾ?"

"ವೆಂಕಟೇಶಮೂರ್ತಿನಾ!"

ಲೀಲೂ ಕಣ್ಣುಗಳು ಮಿಂಚಿದವು. ಎದುರಿಗೆ ಕುಳಿತು ಹೇಳುತ್ತಿರುವವಳು ಅಮ್ಮನಲ್ಲ–ತನ್ನ ಮಲತಾಯಿಯೋ, ಶತೃವೋ ಆಗಿರಬೇಕೆನ್ನುವಂತೆ ರೋಷ ಉದ್ರೇಕವಾಯಿತು

"ಅಮ್ಮಾ! ನೀವು ನನಗೆ ಮದುವೆಮಾಡಬೇಕೂಂತಿದೀರೋ ಇಲ್ಲ ಜೀವದೊರಸೆ ಬೇಯಿಸಬೇಕೂಂತಿದೀರೋ?" "ಲೀಲೂ! ಏನಿಂಥ ಅಮಂಗಳದ ಮಾತಾಡುತೀ. ಅವನು ಬರೆದ ಕಾಗದಾನ ನೀನೇ ಓದಿದೆ. ಅವನ ಪ್ರೇಮ, ಕೃತಜ್ಞತೆ, ಆ ವಾತ್ಸಲ್ಯ ಇನ್ನೆಲ್ಲಿಂದ ಬರಬೇಕು! ಅವನೇನು ಭಿಕಾರಿಯಲ್ಲ. ನೂರೈವತ್ತು ರೂಪಾಯಿ ಸಂಬಳ ತರುತಿದಾನೆ. ಇಂದಲ್ಲ

ಮುಂದಕ್ಕಾದರೂ ನಾನೂರು ಐನೂರ ರೂಪಾಯಿವರೆಗೂ ಸಂಬಳ ಹೆಚ್ಚ ಬಹುದು."

"ಬೊಂಬಾಯಿನ ನೂರೈವತ್ತು ರೂಪಾಯಿಸಂಬಳ ಇಲ್ಲಿನ ಐವತ್ತು ರೂಪಾಯಿಗೆ ಸಮಾನ. ಅಲ್ಲದೇನೇ – ಅಮ್ಮಾ! ನೀನೇ ಸಾವಿರಾರುಬಾರಿ ಹೇಳುತಿದ್ದೆಯಲ್ಲವೇ – ಹೆಂಡತಿಗಿಂತ ಗಂಡ ಹೆಚ್ಚಾಗೇ ಓದಿರಬೇಕೂಂತ? ಅಲ್ಲದೇ ವೆಂಕಟೇಶ ನಿಮ್ಮನ್ನ ಅಪ್ಪ ಅಮ್ಮಾಂತ, ನನ್ನ ತಂಗೀಂತಾನೇ ತಿಳಿಕೊಂಡಿದಾನೆ. ಅದು ನ್ಯಾಯವೇ. ಹಿಂದೂ ಅವನನ್ನು ಅಣ್ಣಾಂತ ತಿಳಿದಿದ್ದೆ. ಮುಂದೂ ಅಣ್ಣಾಂತ ತಿಳಿದಿರುತೇನೇ ಹೊರತು, ಅವನನ್ನ ಮದುವೆಯಾಗೋ ಮಾತನ್ನು ಮತ್ತೆ ಎತ್ತಬೇಡಿ. ಎತ್ತಿದರೆ ನಾನು ಖಂಡಿತ ಬದುಕಿರಲಾರೇ."

ಕ್ಷಣಕಾಲ ಮೂವರೂ ಮಾತಾಡದಿದ್ದರು. ರಾಮಚಂದ್ರಮೂರ್ತಿ ಎದ್ದು ಹೊರಟುಹೋದ. ಸೀತಮ್ಮನು ಚಿಂತಾಕ್ರಾಂತಳಾದಳು.

"ಲೀಲಾ! ಒಂದುವೇಳೆ ನಿನಗಿಂತ ಹೆಚ್ಚು ಓದಿರುವ ಗಂಡನ್ನ ಹುಡುಕಿ ಕರೆತಂದರೆ, ನಾನು ನಿಮ್ಮಪ್ಪ ಇಬ್ಬರೂ ಒಪ್ಪಿದರೆ, ಅವನನ್ನಾದರೂ ಮದುವೆಯಾಗುತೀತಾನೇ?"

"ಅಲ್ಲಮ್ಮಾ! ಮದುವೆಯಾಗಿ ಹತ್ತಾರುವರುಷ ಬಾಳಬೇಕಾದೋಳು ನಾನು. ನನ್ನ ಮನಸ್ಸಿಗೆ ಒಪ್ಪಿಗೆಯಾಗದಿದ್ದರೂ ಚಿಂತೆಯಿಲ್ಲಾಂತ ಹೇಳಿ, ನೀವು ನನ್ನನ್ನ ಮನೇ ಬಿಟ್ಟು ಹೇಗಾದರೂ ದಾಟಿಸಬಿಡಬೇಕೂಂತ ಅನ್ನೋ ಪಕ್ಷಕ್ಕೆ ಹೇಳಿಬಿಡಿ. ನಿಮಗೆ ಯಾವ ಚಿಂತೆಯೂ ಉಳಿಯದಹಾಗೆ ಏರ್ಪಾಟು ಮಾಡುತೀನಿ."

ಸೀತಮ್ಮನಿಗೆ ಚೇಳು ಕುಟಕಿದಂತಾಯಿತು.

"ಲೀಲಾ! ನನ್ನನ್ನ ಬದುಕಿರೋವಾಗಲೇ ಸುಡಬೇಕೂಂತಿದೀಯೇನೇ ತಾಯೀ!!" ಎಂದು ಕಂಬನಿದುಂಬಿದಳು.

"ಅಮ್ಮಾ! ನೀವು ನನ್ನ ಸುಖಕ್ಕೋಸ್ಕರ ಮದುವೆ ಮಾಡಬೇಕೂಂತಿದ್ದರೆ, ನೀವು ಒಪ್ಪಿದ ಗಂಡನ್ನ ನಾನೂ ಒಪ್ಪಬೇಡವೇನಮ್ಮಾ? 'ಬೇಡ!! ಕಣ್ಮುಚ್ಚಿಕೊಂಡು ಬಲಿಯಾಗು – ಬದುಕಿರೋವರೆಗೂ ಕಣ್ಣೀರಿನಲ್ಲಿ ಕೈತೊಳೀ', ಅಂತನ್ನೋ ಪಕ್ಷಕ್ಕೆ ಸ್ಪಷ್ಟವಾಗಿ ಹೇಳಿಬಿಡಿ."

"ಆಗಲಮ್ಮಾ! ನಿನಗಿಂತ ಹೆಚ್ಚು ಓದಿರೋ ಗಂಡನ್ನ ನೋಡುತೀವಿ. ನೀನೂ ನೋಡಿ ಒಪ್ಪೋ ದೊಡ್ಡ ಮನಸ್ಸು ಮಾಡು.... ಇನ್ನು ಹೋಗು. ಸ್ವಲ್ಪ ನನಗೊಂದು ಲೋಟ ಬಿಸಿನೀರು ತಗೊಂಡುಬಾ"

"ಮದುವೆಯಾಗೋವರೆಗೂ ದಯವಿಟ್ಟು ನನ್ನ ವಿದ್ಯಾಭ್ಯಾಸಕ್ಕೆ ಭಂಗತರಬೇಡಿ. ಮದುವೆಯಾದ ಮೇಲೇ ಬರೋ ಗಂಡನಿಗೇನಾದರೂ ನಾನು ವಿದ್ಯಾರ್ಜನೆ ಮಾಡೋದು ಇಷ್ಟವಿಲ್ಲದ ಪಕ್ಷಕ್ಕೆ ಆಗ ಖಂಡಿತ ನಿಲ್ಲಿಸಿ ಬಿಡುತೇನೆ" ಎಂದು ಹೇಳಿ ಎದ್ದು ಅಡುಗೆಯ ಮನೆಗೆ ಹೊರಟುಹೋದಳು. ಸೀತಮ್ಮ ಆಯಾಸಗೊಂಡು ಹಾಸಿಗೆಯ ಮೇಲೆ ಉರುಳಿಕೊಂಡಳು.

೫

ನಾಲ್ಕು ತಿಂಗಳು ಕಳೆದುಹೋಗಿದ್ದುವು. ಲೀಲೂ ಕಾಲೇಜು ವ್ಯಾಸಂಗ ತಡೆಯಿಲ್ಲದೆ ನಡೆದಿತ್ತು. ಈ ಮಧ್ಯೆ ಕಾಲೇಜಿನ ಗೆಳತಿಯರು ಮತ್ತು ಉಪಾಧ್ಯಾಯಿನಿಯರೊಂದಿಗೆ ಮೈಸೂರಿಗೆ 'ಡಿಬೇಟ್' ಒಂದರ ಸಲುವಾಗಿ ಹೋಗಿ ಬಂದಿದ್ದಳು. ಅದು ಕೇವಲ ವಿದ್ಯಾರ್ಥಿನಿಯರ ಡಿಬೇಟ್ ಆದುದರಿಂದ "ಲೀಲೂ" ಕಾಲೇಜಿಗೆ ಬಹುಮಾನ ಬಾರದಿದ್ದರೂ, ಅವಳ ಭಾಷಣ ಕಲೆಗಾಗಿ ಸ್ಪೆಷಲ್ ಬಹುಮಾನವೊಂದು ಬಂದಿತ್ತು. ಅದನ್ನು ರವೀಂದ್ರನಿಗೆ ತೋರಿಸಬೇಕೆಂಬ ಬಯಕೆ. ಅವನನ್ನು ಹುಡುಕುವುದಾದರೂ ಎಲ್ಲಿ? — ಎಂದು ಚಿಂತಿಸುವಷ್ಟರಲ್ಲೇ ಅವನೇ ಪ್ರೇಕ್ಷಕರ ಗುಂಪಿನಿಂದ ಎದ್ದುಬಂದು ಮೊದಲು ಷೇಕ್‌ಹ್ಯಾಂಡ್ಸ್ ಕೊಟ್ಟು ಮೆಚ್ಚುಕೆಯನ್ನು ತೋರಿಸಿದ. ಅಲ್ಲಿಂದ ಬಂದಮೇಲೆ ಅವನಾಗಿ ಅವನೇ ಬರೆದ ಪತ್ರಕ್ಕೆ ಬೇಡವೆಂದು ಸುಮ್ಮನಿದ್ದರೂ, ಒಂದು ನೀರಸವಾದ ಉತ್ತರವನ್ನಾದರೂ ಬರೆಯಬೇಕಾಗಿ ಬಂದಿತು. ಅದರಿಂದ ಮುಂದೆ ಬೇಡವೆಂದರೂ ವಾರಕ್ಕೊಂದು ಪತ್ರ ಬರತೊಡಗಿತು. ಲೀಲೂ ಎರಡು ವಾರಕ್ಕೊಮ್ಮೆಯಾದರೂ ಅವನಿಗೆ ಎರಡು ಪಂಕ್ತಿಯನ್ನಾದರೂ ಬರೆಯಬೇಕಾಗಿ ಬಂತು. ಅವಳಿಗೇ ಅರಿವಿಲ್ಲದೆ ರವೀಂದ್ರನ ಆ ನಾಮ ರೂಪಗಳು ಅವಳ ಚಿತ್ತಭಿತ್ತಿಯಲ್ಲಿ ಗಾಢವಾಗಿ ಚಿತ್ರಿತವಾಗುತ್ತಿದ್ದುವು.

ಇತ್ತ ಸೀತಮ್ಮನ ದೇಹಸ್ಥಿತಿಯು ಕಾಲಕಳೆದಂತೆಲ್ಲಾ ಹೆಚ್ಚು ನಿರ್ಬಲವಾಗುತ್ತ ಬಂದಿತು. ರಾಮಚಂದ್ರಮೂರ್ತಿಯು ಆಯುರ್ವೇದ, ಯುನಾನಿ, ಹೋಮಿಯೋಪತಿ, ಅಲೋಪತಿಯ ಬಗೆಬಗೆಯ ಚಿಕಿತ್ಸೆಗಳನ್ನೆಲ್ಲಾ ಮುಗಿಸಿ, ಕಡೆಯದಾಗಿ ತನ್ನ ದೇಹದಿಂದ ಐದು ಔನ್ಸ್ ರಕ್ತವನ್ನು ತೆಗೆಸಿ ಅದನ್ನೂ ಆಕೆಗೆ ಟ್ರ್ಯಾನ್ಸ್‌ಫ್ಯೂಷನ್ ಮಾಡಿಸಿದ್ದಾಯಿತು. ಮಗಳ ಮದುವೆಗಾಗಿ ಆಕೆಯ "ಚಟಪಟ" ದಿನೇದಿನೇ ಹೆಚ್ಚುತ್ತಿತ್ತು. "ರಜವನ್ನು ತೆಗೆದುಕೊಂಡು ಹೊರಗೆಹೋಗಿ ಲೀಲೂಗೆ ಒಂದು ಗಂಡನ್ನ ಗೊತ್ತುಮಾಡಿಕೊಂಡು ಬಂದರೆ ನಾನು ಬದುಕುತ್ತೇನೆ"ಂದು ಬಾರಿಬಾರಿಗೂ ಆಕೆ ಹೇಳುತ್ತಿದ್ದರೂ, "ಹೆಂಡತಿಯನ್ನು ಈ ಸ್ಥಿತಿಯಲ್ಲಿ ಯಾರಿಗೆ ಒಪ್ಪಿಸಿ ಹೋಗುವುದು?........ಲೀಲೂಗೆ ಅಮ್ಮನ ಯೋಗಕ್ಷೇಮದ ಕಡೆ ಈಗಿರುವ ಮಮತೆಯನ್ನು ಕಂಡೂ ಅವಳನ್ನು ಬಿಟ್ಟುಹೋಗುವುದು ಹೇಗೆ? ಹೋದಮೇಲೆ ಒಂದು ಗಂಡನ್ನು ಹುಡುಕಿಕೊಂಡೇ ಬರಬೇಕು. 'ಅಮ್ಮನ ಪ್ರಾಣ'ದ ಮೇಲೆ ದೃಷ್ಟಿಯಿದ್ದರೆ, ಒಂದು ವೇಳೆ ಮದುವೆಯಾದರೂ ಆಗಬಹುದು...ತನ್ನ ಕರ್ತವ್ಯವನ್ನಂತೂ ತಾನು ಮನಮೆಚ್ಚುವಂತೆ ಮಾಡಬೇಕು.......ಆ ವೆಂಕಟೇಶನಾದರೂ ಈಗ ಇಲ್ಲಿದ್ದಿದ್ದರೆ?........ಅವನು ಬರೆದ ಮೂರು ಕಾಗದಗಳಿಗೂ ಉತ್ತರ ಬರೆಯಲಿಲ್ಲ. ಮೂರು ರಿಜಿಸ್ಟರ್ ಕವರುಗಳನ್ನೂ ಸಹಿಹಾಕಿ ತೆಗೆದುಕೊಂಡದ್ದಾಯಿತು. ಅವನು ಕಳುಹಿಸಿದ ಮುನ್ನೂರು ರೂಪಾಯಿಗಳನ್ನೂ ಉಪಯೋಗಿಸಿಕೊಂಡದ್ದಾಯಿತು........ಅವನೇ ನೇರವಾಗಿ ಬಂದರೂ ಬರಬಹುದು........ಈಗಂತೂ ದೇವರ ಮೇಲೆ ಭಾರಹಾಕಿ ಹೊರಡಲೇಬೇಕು. ದೀಪವಾರುವುದರೊಳಗೆ ಬತ್ತಿಗೆ ಎಣ್ಣೆಯನ್ನು ಹೊಯ್ದರೆ, ಅದು ಹಾಗೆ ಇನ್ನೂ ಕೆಲಕಾಲ ಬೆಳಕು ಕೊಡುತ್ತದೆ. ಸರಿ." ಹೀಗೆಂದು ಮೂರ್ತಿಯು ಹದಿನೈದು ದಿನಗಳ ರಜಾ ತೆಗೆದುಕೊಂಡು, ತನ್ನ ಗೆಳೆಯರು ಹಲವರಿದ್ದ ತುಮಕೂರಿಗೆ ಬಂದು, ಅಲ್ಲಿನ ತಮ್ಮವರ ಮನೆಗಳಲ್ಲೆಲ್ಲಾ ಗಂಡಿಗಾಗಿ ವಿಚಾರ ಮಾಡುತ್ತಿದ್ದ. ಈ ದಿನಗಳಲ್ಲಿ ಲೀಲು ನಿಜವಾಗಿಯೂ ಅಮ್ಮನನ್ನು ಬಹು ಮುತುವರ್ಜಿಯಿಂದ ಸೇವಿಸುತ್ತಿದ್ದಳು. ತಾನು ಮದುವೆಯಾಗುವುದರಿಂದ ತಾಯಿಯ ದೇಹಸ್ಥಿತಿ ನೆಟ್ಟಗಾಗುವುದಿದ್ದರೆ, ತನ್ನ ಮನಸ್ಸಿನಲ್ಲಿರುವುದನ್ನು ತಿಳಿಸಿಬಿಡಬಾರದೇಕೆ? ಹೇಗೂ ತಂದೆಯು ಊರಿನಲ್ಲಿಲ್ಲ. ಅಮ್ಮನು ಮೊದಲು ಒಪ್ಪಿಬಿಟ್ಟರೆ, ನಂತರ

ತಂದೆಯನ್ನು ಅವಳೇ ಹೇಗೋ ಒಪ್ಪಿಸುತ್ತಾಳೆ. ತಾಯಿಯ ಪ್ರೇಮ ಅನಂತ—ಅವಳು ಮಕ್ಕಳಿಗಾಗಿ ಏನು ತಾನೇ ಮಾಡದೇ ಹೋದಾಳು—?.... ಆದರೆ....ರವೀಂದ್ರನು ಯಾವಜಾತಿಯೆಂದು ಕೇಳಿಬಿಟ್ಟರೆ ಗತಿ........ಹೀಗೆ ಲೀಲೂ ಮನಸ್ಸು ಡೋಲಾಯಮಾನವಾಗಿತ್ತು. ತಾಯಿಯಬಳಿ ಅವಳು ಆಗಾಗ ಮದುವೆಯ ಮಾತನ್ನಾಡುತ್ತಿದ್ದುದರಿಂದ, ಗಂಡನ್ನು ಗೊತ್ತುಮಾಡಿ ಕೊಂಡು ಬಂದರೆ ಲೀಲು ಖಂಡಿತ ಮದುವೆಯಾಗುವಳೆಂಬ ಭರವಸೆ ಆಕೆಯ ಹೃದಯದಲ್ಲೂ ಮೂಡಿತು.

ಇಪ್ಪತ್ತೆರಡು ದಿವಸಗಳ ಹುಡುಕಾಟದ ತರುವಾಯ ಮೂರ್ತಿಯು ಒಬ್ಬ ಗಂಡನ್ನು ಗೊತ್ತುಹಚ್ಚಿದ. ಆತನಿಗೆ ಬಿ. ಎ. ಪರೀಕ್ಷೆಯಲ್ಲಿ ಅರ್ಧ ಭಾಗವಾಗಿ, ಇನ್ನರ್ಧಭಾಗ ನಿಂತುಹೋಗಿತ್ತು. ಬಡತನದ ಕಾರಣ ಆತನು ವಿದ್ಯಾಭ್ಯಾಸವನ್ನ ಅಷ್ಟಕ್ಕೇ ನಿಲ್ಲಿಸಿ, ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಮೂರುವರುಷದ ಹಿಂದೆ ಗುಮಾಸ್ತೆಯಾಗಿ ಸೇರಿ, ತನ್ನ ಯೋಗ್ಯತೆಯ ಪ್ರಭಾವದಿಂದ ಡಿಸ್ಟ್ರಿಕ್ಟ್ ಸಿರಿಸ್ತೇದಾರನಾಗಿದ್ದ. ವಯಸ್ಸು ಸುಮಾರು ಇಪ್ಪತ್ತಾರು. ಹುಷ್ಟಪುಷ್ಟ ನಾಗಿದ್ದ. ಕಾರಣ ಬಾಲ್ಯದಿಂದಲೂ ಗರಡಿಮನೆಯಲ್ಲಿ ಕುಸ್ತಿ ಸಾಧನೆಯಲ್ಲಿ ತೊಡಗಿದ್ದವನು. ಕುಸ್ತಿಯಾಡುವಾಗ ಬಿದ್ದ ಪೆಟ್ಟುಗಳಿಂದ ಬಲಭಾಗದ ಕಿವಿಯು ಮುದುರಿಕೊಂಡು ಗಂಟಾಗಿದ್ದಿತು. ಎಡಭಾಗದ ಕಿವಿಯು ಸ್ವಲ್ಪ ಮುರಿದುಕೊಂಡಿತ್ತು. ಶ್ರೋತ್ರೀಯ ಮನೆತನಕ್ಕೆ ಸೇರಿದ್ದವನಾದ ಕಾರಣ, ನೆತ್ತಿಯಮೇಲೆ ಗೋಪಾದದಷ್ಟು ಶಿಖೆ, ಹಣೆಯಲ್ಲಿ ಗಂಧಾಕ್ಷತೆಗಳಿದ್ದುವು. ಮುಖವು ಅಷ್ಟೇನು ನಯನ ಮನೋಹರವಾಗಿಲ್ಲದಿದ್ದರೂ ವಿಕಾರವೇನೂ ಆಗಿರಲಿಲ್ಲ. ಬಣ್ಣ ಶ್ಯಾಮಲವರ್ಣವಾಗಿದ್ದರೂ, ಮುಖದಲ್ಲಿನ ಗಾಂಭೀರ್ಯ, ಆತ್ಮಾಭಿಮಾನ, ಧೈರ್ಯೋತ್ಸಾಹಗಳಿಂದ ಒಳ್ಳೆಯ ಧೀರೋದಾತ್ತನಾಗಿ ಕಾಣುತ್ತಿದ್ದ. ಹೆಸರು ಗುಂಡಪ್ಪ. ಯಾವನೋ ಹಳೆಯ ನೆಂಟನ ಮೂಲಕ ರಾಮಚಂದ್ರಮೂರ್ತಿ ಈತನನ್ನು ಕಂಡು, ಲೀಲೂ ಫೋಟೋವನ್ನು ತೋರಿಸಿ, ಗೋತ್ರ ಜಾತಕಗಳು ಹೊಂದಿಕೆಯಾದದ್ದನ್ನು ತಿಳಿದನಂತರ, ಊರಿಗೆ ಕರೆತರಲು ಸಂಕಲ್ಪಿಸಿ ಕಾಗದ ಬರೆದ. ತನ್ನ ಇಪ್ಪತ್ತೆರಡು ದಿವಸಗಳ ಪ್ರಯಾಸ ಪೂರ್ಣ ಅಲೆದಾಟದಲ್ಲಿ ಸಿಕ್ಕಿ ದಕ್ಕದೇಹೋದ ಮೂರು ಗಂಡುಗಳ ನಂತರ, ನಾಲ್ಕನೆಯವನಾಗಿ ಸಿಕ್ಕಿ, ಒಪ್ಪಿದ ಈತನೇ ತನ್ನ ಲೀಲೂ"ಗೆ

ಸರಿಯಾದ ಗಂಡನೆಂದು ಅವನ ಭಾವನೆ. ಹೆಂಡತಿಯನ್ನು ಖಂಡಿತವಾಗಿ ಚೆನ್ನಾಗಿ ಸಾಕಬಲ್ಲವನೆಂಬ ಭರವಸೆ. ಆತನು ಕುಸ್ತಿಯಲ್ಲಿ ಗೆದ್ದಿದ್ದ ಬಹುಮಾನಗಳನ್ನು ಕಂಡಮೇಲಂತೂ ಬಹು ಸಂತೋಷಪಟ್ಟನು. ಅಂತೆಯೇ ಮನೆಗೆ ಕಾಗದವನ್ನು ಬರೆದುಬಿಟ್ಟು, ಭಾವೀ ಅಳಿಯನನ್ನು ಕರೆತರುವ ತಾರೀಖನ್ನೂ ಸೂಚಿಸಿದ್ದನು

ಕಾಗದ ಬಂದದಿನ ಅದನ್ನು ಓದಿದ ಲೀಲೂ ಬೆಚ್ಚಿದಳು. ಬಿ.ಎ. ಪರೀಕ್ಷೆ ಅರ್ಧವಾಗಿದೆಯೆಂದಮೇಲೆ ತನಗಿಂತ ಹೆಚ್ಚೇ ಆಯಿತು. ಆತನನ್ನು ಕರೆ ತಂದು ಬಿಟ್ಟಮೇಲೆ 'ಒಲ್ಲೆ' ನೆನ್ನುವುದು ಮಹಾ ಕಷ್ಟವಾಗುವುದು. ಆದರೆ ರವೀಂದ್ರನಿಗೆ ಕೊಟ್ಟಿರುವ ವಾಗ್ದಾನ?....ಇರಲಿ ಈಗಲೇ ಏಕೆ ಆತಂಕ! ಹೀಗೆಂದು ತಂದೆಯು ಭಾವೀ ಅಳಿಯನನ್ನು ಕರೆತರುವ ದಿನ ಹಪ್ಪಳ ಸಂಡಿಗೆ ಗಳನ್ನು ಕರಿದು, ಸೊಗಸಾಗಿ ಅಡುಗೆಯನ್ನು ಮಾಡಿದಳು. ಕಾಲೇಜಿಗಂತೂ ರಜಾ ಕಾಗದವನ್ನು ಸರೋಜನ ಮೂಲಕ ಕಳುಹಿಸಿಬಿಟ್ಟಿದ್ದಳು. ಇವಳ ಅಂದಿನ ಸಡಗರವನ್ನು ಕಂಡ ತಾಯಿಯು "ತನ್ನ ಆತಂಕ ದೂರವಾಯಿತೆಂದು" ಮನಸ್ಸಿನಲ್ಲೇ ಸಂತೋಷಪಟ್ಟುಕೊಳ್ಳುತ್ತಿದ್ದಳು.

ಮಧ್ಯಾಹ್ನ ಹನ್ನೊಂದೂವರೆ ಘಂಟೆಗೆ ಮನೆಯ ಮುಂದೆ ಗಾಡಿಬಂದ ಸದ್ದಾಗಲು, ಲೀಲೂ ಅಡುಗೆಯ ಮನೆಯ ಕಿಟಕಿಯಿಂದ ನೋಡಿದಳು. "ಅಪ್ಪಗಾಡಿ ಇಳಿದ. ಹಿಂದಿನಿಂದ....ಇವನು ಯಾರೂ? ಈ ಕೊಂಟ?.... ನನ್ನನ್ನು ಮದುವೆಯಾಗಲಿರುವನೇ?....ಛೇ! ಛೀ! ಅಪ್ಪನು ನನ್ನನ್ನು ಇಷ್ಟು ಮುದ್ದಿನಿಂದ ಸಾಕಿ ಬೆಳಸಿ, ಕಡೆಗೆ ವರ ಸಾಮ್ಯವನ್ನೂ ನೋಡದೆ ಈ ಕರಪ, ಕೊಂಟನಿಗೆ ಕೊಡುತ್ತಾನೆಯೇ? ಎಂದಿಗೂ ಇಲ್ಲ. ಅಗೋ! ಅದು ಮತ್ತಾರ್ಯರೋ ಗಾಡಿಯಿಂದ ಇಳಿಯುತ್ತಿರುವಂತಿದೆ!....ಅಯ್ಯೋ! ಅವನು ಗಾಡಿಯ ಸಾಬಿ....ದುಡ್ಡು ತೆಗೆದುಕೊಂಡು ಹೊರಟೇ ಬಿಟ್ಟ. ಹಾಗಾದರೇ ಈ ಗಂಟುಮೂಗಿನ ಈ ಕರಪನಿಗೆ ನಾನು ಹೆಂಡತಿಯಾಗಬೇಕೆ?........ಆ ರವೀಂದ್ರ....ಅವನ ಮುಖ, ಅವನ ಎಳೆನಗೆ, ಅವನ ಕೋಮಲತೆ....ಛೀ! ಎಲ್ಲಿಂದೆಲ್ಲಿಗೆ!....ಆದರೆ ಈ ಹಾಳು ಜಾತಿ...." ಎಂದು ಯೋಚಿಸುತ್ತಿರುವಷ್ಟರಲ್ಲಿಯೇ ಒಳಕ್ಕೆ ಬಂದಿದ್ದ ತಂದೆ "ಲೀಲೂ!" ಎಂದು ಕೂಗಿದ. ಲೀಲೂ ಧೈರ್ಯವಾಗಿ ಹೊರಕ್ಕೆ ಬಂದಳು. ಕತ್ತೆತ್ತಿ ಗುಂಡಪ್ಪನನ್ನ ಚೆನ್ನಾಗಿ

ನೋಡಿದಳು. ಆತನೇ ನಾಚಿ ಕತ್ತು ತಗ್ಗಿಸಿಬಿಟ್ಟ. ಮೂರ್ತಿಯು ಲೀಲೂ ಮುಖ ಮುದ್ರೆಯನ್ನು ಕಂಡು— " ಈ ಬುಟ್ಟಿ ಒಳಕ್ಕೆ ತಗೊಂಡು ಹೋಗು. ಅಡುಗೆಯಾಗಿದೆಯೇನು ? " ಎಂದ. ಲೀಲೂ ಗುಂಡಪ್ಪನನ್ನೇ ನೋಡುತ್ತ " ಆಗಿದೆಯಪ್ಪ, ಏಳಿ. ನೀವೂ ನಿಮ್ಮ ಸ್ನೇಹಿತರೂ ಕಾಲು ತೊಳೆದುಕೊಳ್ಳಿ. ಎಲೆಹಾಕಿ ಬಡಿಸುತ್ತೇನೆ." ಎಂದು ಬುಟ್ಟಿಯನ್ನೆತ್ತಿಕೊಂಡು ಶರಮ್ಮನೆ ಒಳಕ್ಕೆ ಹೊರಟುಹೋದಳು. ಮೂರ್ತಿಯು ನಿರೀಕ್ಷಿಸಿದ್ದಕ್ಕಿಂತ ಹೆಚ್ಚು ಪ್ರಬಲವಾಗಿ ಕಂಡಿತು ಲೀಲೂ ಮನಸ್ಸಿನ ಪ್ರತಿಕ್ರಿಯೆ. ತನ್ನ ಕೋಣೆಯಿಂದ ಇಣಿಕಿನೋಡುತ್ತಿದ್ದ ಸೀತಮ್ಮನು, ವರನನ್ನು ಅಷ್ಟಾಗಿ ಮೆಚ್ಚಿಕೊಳ್ಳದಿದ್ದರೂ, ಸದ್ಯ ಲೀಲೂ ಮದುವೆಯಾದರೆ ಸಾಕು. ಅಳಿಯ ಯೋಗ್ಯನಾಗಿದ್ದರಾಯಿತು. ಎಲ್ಲರೂ ಮನ್ಮಥರೇ ಆಗಿರಬೇಕೆಂದರೆ ಹೇಗೆ ಸಾಧ್ಯ — ಎಂದು ಸಮಾಧಾನ ಪಟ್ಟುಕೊಳ್ಳುತ್ತಿದ್ದಳು.

ಊಟವಾಯಿತು. ಗುಂಡಪ್ಪನು ಹುಡುಗಿಯ ಮುಖಮುದ್ರೆಯಿಂದ ತನ್ನ ಪರಿಸ್ಥಿತಿಯನ್ನರಿತುಬಿಟ್ಟನಾಗಿದ್ದರೂ, ಮುಂದೆ ಹೇಗಾದರೂ ಸರಿ ಎಂದುಕೊಂಡು, ಅಚ್ಚುಕಟ್ಟಾಗಿ ಊಟಮಾಡಿ, ನಿಸ್ಸಂಕೋಚವಾಗಿ ಅಡುಗೆಯನ್ನು ಹೊಗಳಿದ. ಅಡಕೆಲೆ ಅಗಿಯುತ್ತಾ ತಂದೆಯೊಂದಿಗೆ ಕುಳಿತಿದ್ದ ಅವನ ಬೋಡುತಲೇ ಗಂಟುಕಿವಿಗಳನ್ನೇ ನೋಡುತ್ತಿದ್ದ ಲೀಲೂ, ಅಮ್ಮನಿಗೆ ಗಂಜಿಕುಡಿಸಿಯಾದಮೇಲೆ—' ಅಮ್ಮಾ ! ನಿನ್ನಳಿಯನನ್ನ ನೋಡಿದೆಯಾ ! ........ಬಾ ! ನೋಡುವೆ." ಎಂದು ಹೇಳಿ ಕರೆತಂದು ಹಾಲಿನ ಕುರ್ಚಿಯ ಮೇಲೆ ತೆರೆಯಹಿಂದೆ ಕೂಡಿಸಿದಳು. ತಾನೂ ಅಚ್ಚುಕಟ್ಟಾಗಿ ಊಟಮಾಡಿ ಬಂದು ತಾಯಿಯ ಪಕ್ಕದಲ್ಲಿ ಕುಳಿತಳು. ರಾಮಚಂದ್ರಮೂರ್ತಿಯೇ ಮಾತನಾರಂಭಿಸಿದ.

ಹುಡುಗಿಯನ್ನ ನೋಡಿದಿರಾ ? "

" ಲಕ್ಷಣವಾಗಿದಾರೆ. ಫೋಟೋದಲ್ಲಿ ನಿಜವಾದ ರೂಪು ತಿಳಿಯೊಲ್ಲ."

" ಏನೋ, ನೀವು ಒಪ್ಪಿ ಬಡವರ ಮನೆ ಹೆಣ್ಣನ್ನ ತಂದುಕೊಂಡರೆ ಆ ಮಗೂಗೆ ಒಂದು ದಿಕ್ಕಾಗುತ್ತೆ ಅಷ್ಟೇ. ಅಷ್ಟುಮಾಡಿ ಕಾಪಾಡಿಬಿಟ್ಟರಾಯಿತು. ಜಾತಕಾನುಕೂಲ ಚೆನ್ನಾಗಿದೆ. ಈ ಶ್ರಾವಣದಲ್ಲೇ ಮಾಡಿಬಿಡೋಣಾಂತಿದೀನಿ ಲಗ್ನಾನ."

"ನೀವು ನಿಮ್ಮ ಮದುವೆಯಾದ ಕಾಲಾನ ಮರೆತುಬಿಡಿ. ಈಗ ಕಾಲ ಬಹಳ ನಾಜೂಕಾಗಿದೆ. ನನಗೇನು – ಲಗ್ನದನ್ನೇ ಅಷ್ಟು ನಿಗವಿಲ್ಲ. ನಿಮ್ಮ ಸೋದರಮಾವನ ಮಗ ಶಿವರಾಮಯ್ಯನ ಬಲವಂತಕ್ಕೆ ಆಗಲೀಂದೆ. ಆದರೆ ಮದುವೆಯೆಂದರೆ ಈ ಕಾಲದಲ್ಲಿ ಪರಸ್ಪರ ಒಪ್ಪಿಗೆಯಾಗಬೇಕು........ ದೇವರಿದಾನೆ, ಏಳಿ. ಸ್ವಲ್ಪ ದಿವಾನ್ ಆಫೀಸ್ ಕಡೆಗೆ ಹೋಗಿ ಬರೋಣ"

ಹೀಗೆನ್ನುತ್ತಾ ಕೋಟು ಟೋಪಿಯನ್ನು ಧರಿಸಿ ಹೊರಬಿದ್ದ ಗಂಡಪ್ಪನನ್ನ, ರಾಮಚಂದ್ರಮೂರ್ತಿಯೂ ನಿರಾಶನಾಗಿ ಹಿಂಬಾಲಿಸಿದ.

ಎರಡು ನಿಮಿಷಗಳನಂತರ ತೆರೆಯನ್ನು ಮೇಲಕ್ಕೆ ಸಿಕ್ಕಿಸಿ ಲೀಲೂ ಬಂದು ತಾಯಿಯ ಮುಂದೆ ನಿಂತಳು. ಅವಳ ನಿಂತ ಧೋರಣೆಯನ್ನು ಕಂಡೇ ಸೀತಮ್ಮನು ಕತ್ತು ತಗ್ಗಿಸಿದಳು.

"ಅಮ್ಮಾ! ಇನ್ನು ನಾನು ಕಾಲೇಜಿಗೆ ಹೊರಡಲೇ?"

"ಯಾಕೆ ಲೀಲಾ! ಈ ದಿನ ರಜಾ ತಗೊಂಡಿಲ್ಲವೇ?"

"ತಗೊಂಡಿದ್ದೆ. ಇನ್ನು ಈಗೇನು ಕೆಲಸ ಮನೇಲಿ. ಅಪ್ಪಾ ಹೇಗೂ ಊರಿಗೆ ಬಂದಿದಾರೆ. ಅವರಿಗಿನ್ನೂ ಎಂಟುದಿನ ರಜವಿದೆ. ಅಲ್ಲದೆ ನಾಳೆಯ ದಿನ ಟೆಸ್ಟ್ ಇದೆಯಂತೆ. ವಿಚಾರಿಸಿಕೊಂಡು ಬರಬೇಕು"

"ಹೋಗಲೇ ಬೇಕಾದರೆ ಹೋಗಿಬಾ. ಆದರೆ ಸರೋಜ ಕೂಡಾ ಹೊರಟುಹೋಗಿರುತಾಳೆ ಈಗ ಒಬ್ಬಳೇ ಹೊರಟು...."

"ಅದಕ್ಕೇನಮ್ಮಾ. ಇಲ್ಲಿಂದ ನಾಲ್ಕು ಫರ್ಲಾಂಗಿರೋ ಕಾಲೇಜಿಗೆ.... ಅದೂ ಮಧ್ಯಾಹ್ನ ಒಂದು ಘಂಟೆನಾಗ....ರಸ್ತೇಲೆಲ್ಲಾ ಜನ ಓಡಾಡುತಿರೋದಿಲ್ವೇ...."

"ಆದರೂ ಲೀಲೂ ನೀನು ಮನೇಲಿದ್ದುಬಿಡೋದೇ ಒಳ್ಳೇದು. ಯಾಕೇಂದರೆ ಅಪ್ಪಾ ಹಿಂದಿರುಗಿ ಬಂದಾರು. ಇನ್ನೂ ಲಗ್ನ ಪತ್ರಿಕೆ ವಿಚಾರ ಅದೂ ಇದೂ ತೀರ್ಮಾನವಾಗಬೇಕು."

"ಹಾಗಾದರೆ ನೀನೂ ಅಳಿಯನ್ನ ಒಪ್ಪಿದೆಯೇನು?"

ಇದು ಸೀತಮ್ಮನ ಅಳಿವು ಉಳಿವಿನ ಪ್ರಶ್ನೆ. ಧೈರ್ಯಮಾಡಿದಳು.

"ಏನಾಗಿದಾನೆ ಆತ. ಏನು ಜುಟ್ಟು ಬಿಟ್ಟಿದಾನೇಂತಲೇ?.... ಬೇಕಾದರೆ ಕ್ರಾಪ್ ಬಿಡೀಂದರಾಯಿತು. ತಿರಿಸ್ತೇದಾರನಾಗಿದಾನಂತೆ ಈ ಸಣ್ಣ

ವಯಸ್ಸಿನಲ್ಲೇ. ಮುಂದೆ ಅಮಲ್ದಾರನಾಗುತಾನೆ. ಧೃಢಕಾಯನಾಗಿದಾನೆ. ಯೋಗ್ಯ. ನಿಷ್ಠನಾಗಿ ಕಾಣುತಾನೆ. ಇದಕ್ಕಿಂತ ಇನ್ನೇನಾಗಬೇಕು?"

"ಅಮ್ಮಾ!" ಲೀಲೂ ಹತಾಶಳಾಗಿ ಕೂಗಿದಳು.

"ಲೀಲಾ!"

"ನೀನೆ ಹೆತ್ತುಹೊತ್ತು ಸಾಕಿದ ಮಗಳನ್ನ ಕೈಯಾರ ಇಂಥ ಕೊಂಟನಿಗೆ ಕೊಡೋದಕ್ಕೆ ಮನಸ್ಸು ಹ್ಯಾಗೆ ಬರುತ್ತೇಮ್ಮಾ"

"ಲೀಲೂ! ನನ್ನಮ್ಮ! ಸಮಾಧಾನ ಮಾಡಿಕೋ. ನಾವು ಮಾಡೋ ಪ್ರತಿಯೊಂದು ಯೋಚನೆ, ಪ್ರತಿಯೊಂದು ಕೆಲಸವೂ ನಿನ್ನ ಕ್ಷೇಮಕ್ಕೋಸ್ಕರ, ನಿನ್ನ ಸುಖಕ್ಕೋಸ್ಕರ. ನಾವು ನಿನ್ನ ಶತೃಗಳಲ್ಲ. ನೀನೀಗ ಮದುವೆಯಾಗಲೇ ಬೇಕು. ಇನ್ನು ನಿನ್ನನ್ನ ಹೀಗೆ ಬಿಟ್ಟುಕೊಂಡಿರೋದು ನಮಗೆ ಮಹಾ ಪಾಪ. ನೋಡು. ಗಂಡಸರಿಗೆ ಬರೀ ರೂಪು ಮುಖ್ಯವಲ್ಲ. ಅವರವಂಶ, ನಿಷ್ಠೆ, ಯೋಗ್ಯತೆ, ದೇಹದಾರ್ಢ್ಯ, ಗುಣ, ವಿದ್ಯೆ — ಹೆಂಗಸಿಗೆ ಶೀಲ. ರೂಪು ಎರಡು ದಿನವಿದ್ದು ಮರೆಯಾಗೋದು. ಎಂಥ ಮನ್ಮಥನಾದರೂ ಸಂಸಾರಕ್ಕೆ ಸಿಕ್ಕಿದ ಮೇಲೆ ವಯಸ್ಸಾದಂತೆ ಆ ರೂಪು ಕಳಕೊಳ್ಳುತಾನೆ. ಈಗ ನೀನು ಬೇರೇ ಮಾತು ಹೇಳೋ ಹಾಗೇ ಇಲ್ಲ. ನಾನು ಬದುಕಿರಬೇಕೂಂತಿದ್ದರೆ ಮದುವೇ ಮಾಡಿಕೊಂಡುಬಿಡಬೇಕು. ಈತ ನಿನಗೆ ಅಷ್ಟು ಮೆಚ್ಚಿಕೆಯಾಗದಿದ್ದರೆ, ಲಕ್ಷಣವಾಗಿರೋ ಆ ವೆಂಕಟೇಶನ್ನೇ ಮದುವೆಯಾಗು. ನೀನು ಮಾಡಿರೋ ಅಂಥಾ ದೊಡ್ಡ ಪ್ಯಾಸೂ ಅಷ್ಟರಲ್ಲೇ ಇದೆ. ಈ ದಿನ ತೀರ್ಮಾನವಾಗಿಬಿಡ ಬೇಕು. ಈ ಇಬ್ಬರಲ್ಲಿ ಒಬ್ಬರನ್ನು ನೀನು ಮದುವೆಮಾಡಿಕೊಳ್ಳಲೇಬೇಕು. ಇಲ್ಲದಿದ್ದರೆ ತಬ್ಬಲಿಯಾಗಬೇಕು, ಯೋಚನೆಮಾಡಿ ಹೇಳು."

ತಾಯಿಯ ಉದ್ವೇಗದ ಮಾತನ್ನ ಕೇಳುತಾ ಕೇಳುತಾ ಲೀಲೂ ಅಂತಃಕರಣ ಕಲಕಿಹೋಯಿತು. ವಿವೇಕವು ತನ್ನ ಕೈಬಿಡುವಂತೆ ಗೋಚರಿಸಿತು. ಕಣ್ಣುಗಳಲ್ಲಿ ನೀರು ತುಂಬಿ ಗಂಟಲು ಬಿಗಿದು ಬಂದಿತು.

"ಅಮ್ಮಾ! ಅಮ್ಮಾ! ವೆಂಕಟೇಶ ನನಗೆ ಅಣ್ಣ. ಈತ ನನಗೆ ತಂದೆಗೆ ಸಮಾನ. ನಾನು ಇವರಿಬ್ಬರಲ್ಲಿ ಯಾರನ್ನೂ ಮದುವೆಯಾಗಲಾರೆ. ನನ್ನ ಮನಸ್ಸೊಪ್ಪದು."

ಸೀತಮ್ಮನ ಹೃದಯಾಳದಿಂದ ಕೋಪಾಗ್ನಿ "ಧಗ್" ಎಂದಿತು.

“ ಲೀಲಾ ?” ಎಂದು ಚೀರಿದಳು.

“ ಅಮ್ಮಾ ! ನಾನು ಬೇರೊಬ್ಬನಿಗೆ ಮಾತು ಕೊಟ್ಟಿದೇನೆ.”

“ ಬೇರೆ ಯಾರಿಗೇ ?”

“ ರವೀಂದ್ರನಿಗೆ.”

“ ಯಾರದೂ ?”

“ ಮೈಸೂರು ಕಾಲೇಜಿನವನು.”

“ ನಮ್ಮ ಜನವೇ ?”

“ ಅಲ್ಲಾಮ್ಮ ! ಸರೋಜನ ಜನ.”

“ ಬ್ರಾಹ್ಮಣನೂ ಅಲ್ಲವೇ ? !”

“ ಈ ಜಾತಿ ಕಟ್ಟುಗಳು ಮನುಷ್ಯರು ಮಾಡಿದ್ದೇ ಅಲ್ಲವೇ ?”

“ ಲೀಲಾ !!” ಎಂದು ಘಟ್ಟಿಯಾಗಿ ಚೀರಿ ಕುರ್ಚಿಯಿಂದ ಕೆಳಕ್ಕುರುಳಿ ಬಿಟ್ಟಳು. ಲೀಲಾ

“ ಅಯ್ಯೋ ! ಅಮ್ಮಾ !” ಎಂದು ಗೋಳಾಡುತ್ತಾ ದಿಕ್ಕುತೋರದೆ ಒಳಗಿಂದ ನೀರನ್ನು ತಂದು, ತಾಯಿಯ ತಲೆಯನ್ನು ತೊಡೆಯಮೇಲಿಟ್ಟು ನೆತ್ತಿಗೆ ನೀರು ತಟ್ಟುತ್ತಾ, ಕಣ್ಣೀರುತುಂಬಿ “ ಅಮ್ಮಾ ! ಅಮ್ಮಾ !!” ಎಂದು ಕೂಗುತ್ತಿದ್ದಳು. ಹೊರಗಿನಿಂದ ಬಂದ ಮೂರ್ತಿ ಈ ದೃಶ್ಯವನ್ನು ನೋಡಿ ಓಡಿಬಂದು ಹೆಂಡತಿಯ ಕೈಮೈ ಮುಟ್ಟಿನೋಡುತ್ತಾ “ ಲೀಲಾ ! ಏನಾಯಿತು ? ” ಎಂದ.

ಲೀಲೂ ಗೋಳಾಡುತ್ತಾ “ ಅಮ್ಮ ಕುರ್ಚಿಯಿಂದ ಉರುಳಿಬಿಟ್ಟಳು.” ಎಂದು ಹೇಳಿದಳು.

ಸೀತಮ್ಮನ ಕೈಕಾಲುಗಳು ತಣ್ಣಗಾಗಿದ್ದುವು. ಹೃದಯದ ಬಡಿತ ನಿಂತು ಹೋಗಿತ್ತು. ಮುಖವು ಪ್ರಶಾಂತವಾಗಿತ್ತು ; ಆದರೆ ಹುಬ್ಬುಗಂಟಿಕ್ಕಿದ್ದಿತು. ಹಣೆಯ ಮೇಲೆ ಬೆವರು ಹನಿ ತುಂತುರಾಗಿ ನಿಂತಿತ್ತು. ತಡೆಯಲಾರದ ಸಂಕಟದಿಂದ ಮೂರ್ತಿಯು—“ ಲೀಲಾ ! ನೀನು ತಬ್ಬಲಿಯಾದೇ !” ಎಂದು ಮುಖ ಮುಚ್ಚಿಕೊಂಡು ಮಗುವಿನಂತೆ ಅಳತೊಡಗಿದ. ಲೀಲೂ “ ಅಮ್ಮಾ ! ” ಎಂದು ತಾಯಿಯ ಮುಖವನ್ನಪ್ಪಿ ಗೋಳಾಡುತ್ತಿದ್ದಳು.

೬

ಏಳು ತಿಂಗಳು ಉರುಳಿಹೋಗಿದ್ದುವು. ಮೊದಮೊದಲು "ತನ್ನ ತಾಯಿಯ ಸಾವಿಗೆ ತಾನೇ ಕಾರಣಳೆ"ಂದು ಕೊರಗುತ್ತಿದ್ದ ಲೀಲೂ, ಕಾಲಾನುಕ್ರಮದಲ್ಲಿ ಸಮಾಧಾನಹೊಂದಿ, ತಾನು ಒಂದುವೇಳೆ ಅಮ್ಮನಂತೆ ಆ ಕೊಂಟನನ್ನೇ ಮದುವೆಯಾಗಿ ತನ್ನ ಸುವರ್ಣ ಭವಿಷ್ಯವನ್ನೆಲ್ಲಾ ಬಲಿಗೊಟ್ಟಿದ್ದರೂ ಸಹ, ರಕ್ತಹೀನತೆಯಿಂದ ದುರ್ಬಲವಾಗಿದ್ದ ಆ ಶರೀರವು ಹೇಗೆತಾನೇ ಉಳಿಯುತ್ತಿತ್ತು ? ಅಲ್ಲದೇ ಹೆತ್ತ ತಾಯಿಯರು ಮಕ್ಕಳೊಂದಿಗೆ ಎಷ್ಟುಕಾಲ ಬಾಳಲು ಸಾಧ್ಯ!" ಎಂಬ ಚಿರ ಸಮಾಧಾನಕ್ಕೆ ಬಂದಿದ್ದಳು. ಆದರೆ ಈ ಮಧ್ಯೆ ತಂದೆಯ ಚಿಂತೆಯೊಂದು ದಿನೇದಿನೇ ಹೆಚ್ಚುತ್ತಿತ್ತು. ಸೀತಮ್ಮನು ಕಾಲವಾದನಂತರ ಮಂಕಾಗಿ ಕೂತೆಡೆಯಲ್ಲೇ ಕೂತಿರುತ್ತಾ ತನಗೆತಾನೇ ಮಾತನಾಡಿಕೊಳ್ಳುತ್ತಿದ್ದ ಮೂರ್ತಿಯು ಈಗ ಹೊರಗೆಲ್ಲಾ ಹುಚ್ಚನಂತೆ ಅಲೆಯುತಾ ಕೃಶನಾಗಿಬಿಟ್ಟಿದ್ದಾನೆ. ಯಾರನ್ನೂ ಗುರ್ತಿಸುವುದಿಲ್ಲ. ಸದಾ "ಸೀತಾ! ಲೀಲೂಗಂಡ ಬಂದ – ಸೀತಾ! ಲೀಲೂಗಂಡ ಬಂದ" ಈ ನಾಲ್ಕು ಮಾತುಗಳೇ. ಮಳೆ ಬರುತ್ತಿದ್ದರೆ ಮನೆಯ ಮುಂದಿನ ಹುಲ್ಲಿನ ಮೇಲೆ ಕೂತು ಅದೇ ಮಾತುಗಳನ್ನಾಡುತ್ತಿರುತ್ತಾನೆ.

ಬರುಬರುತ್ತಾ ರಾಮಚಂದ್ರಮೂರ್ತಿಯ ಸ್ಥಿತಿಯು ಕರುಣಾಜನಕವಾಗುತ್ತ ಬಂತು. ಊಟ ತಿಂಡಿ ಬಟ್ಟೆಬರೆಗಳ ಕಡೆಗೆ ಗಮನ ತಪ್ಪುತ್ತಾಬಂತು. ಸದಾ ಒಂದೇ ಮಾತು – ಯಾರು ಯಾವ ಪ್ರಶ್ನೆಹಾಕಿ ಮಾತನಾಡಿಸಿದರೂ "ಸೀತಾ! ಲೀಲೂ ಗಂಡ ಬಂದ – ಸೀತಾ! ಲೀಲೂ ಗಂಡ ಬಂದ!!" ಇದೇ. ಮೊದಮೊದಲು ಮನೆಯನ್ನು ಬಿಟ್ಟು ಹೊರಗೆ ಹೋಗದಿದ್ದ ಪ್ರಯುಕ್ತ, ಲೀಲೂ ಅಡುಗೆಮಾಡಿ ತಂದೆಗೆ ಊಟಮಾಡಿಸಿ, ತಾನೂ ಊಟ ಮುಗಿಸಿ ಕಾಲೇಜಿಗೆ ಹೋಗಿಬರುತ್ತಿದ್ದಳು. ಸಂಜೆಯೆಲ್ಲಾ ಮನೆಯಲ್ಲೇ ಇರುತ್ತಿದ್ದಳು. ಅಷ್ಟುತಿಂಗಳೂ ಮೂರ್ತಿಗೆ ಪೂರ್ತಿ ಸಂಬಳ ಸ್ಯಾಂಕ್ಷನ್ ಆಗಿದ್ದಕಾರಣ ಜೀವನ ಅಷ್ಟು ಕಷ್ಟವಾಗಿರಲಿಲ್ಲ. ಬರಬರುತ್ತಾ ಜೀವನ ದುರ್ಭರವಾಯಿತು. ತಂದೆಯ ಸಂಬಳವಿಲ್ಲ. ಹಿಂದೆ ವೆಂಕಟೇಶ ಕಳುಹಿಸಿದ್ದ

ಹಣ ತಾಯಿಯ ದಿನ—ಕಾಲಗಳಿಗೆ ಖರ್ಚಾಗಿ ಮಿಕ್ಕಿದ್ದೂ ಸಹ ಮುಗಿದು ಹೋಗಿದ್ದಿತು. ಮೊದಮೊದಲು ಲೀಲೂಗಾಗಿ ಮರುಗುತ್ತಿದ್ದ ನೆರೆ ಹೊರೆಯವರು ಬರುಬರುತ್ತ ಬರಡಾದರು. ಅವಳ ಕಷ್ಟವನ್ನು ಕಂಡು ಕರಗುವವರೇ ಇಲ್ಲವಾದರು. ಇರುವನೊಬ್ಬ ರವೀಂದ್ರ. ಅವನು ಊರಿಂದ ಊರಿಗೆ ಬಂದು, ಮನೆಗೂ ಬಂದುಬಿಟ್ಟರೆ ಈಗಾಗಲೇ ಹೊಗೆಯಾಡುತ್ತಿರುವ ಕೂಗು ಧಗಧಗಾಯಮಾನವಾಗುವುದು. ಅದರಿಂದ ಕೆಲಸ ಕೆಡಬಹುದು. ಈಗಂತೂ ತನ್ನ ಕಡೆಯವರ್ಷದ ವ್ಯಾಸಂಗ. ಅದಕ್ಕೇ ದೊಡ್ಡ ಆತಂಕ. ಹೇಗಾದರೂ ಮಾಡಿ ತಂದೆಯನ್ನು ಆಸ್ಪತ್ರೆಗೆ ಸೇರಿಸಿಬಿಟ್ಟರೆ, ತನ್ನ ಜೀವನಕ್ಕೆ – ವ್ಯಾಸಂಗಕ್ಕೆ ಏನಾದರೂ ಮಾಡಬಹುದು. ಆದರೆ ತಾನೇ ಸೇರಿಸಿಬಿಟ್ಟರೆ ನಾಳೆ ಪ್ರಪಂಚವೇನೆಂದೀತು........?

ನಾಲ್ಕಾರು ದಿವಸಗಳು ಯೋಚಿಸಿ, ಕಡೆಗೆ ವೆಂಕಟೇಶನಿಗೆ ಚಿಕ್ಕದೊಂದು ಕಾಗದವನ್ನೇ ಬರೆದುಬಿಟ್ಟಳು. ಕಾಗದವನ್ನು ಕಾಣುತ್ತಲೇ ಆಶ್ಚರ್ಯ ಸಂತೋಷ ಉತ್ಸಾಹಗಳಿಂದ ಕೂಡಿದ ವೆಂಕಟೇಶ ಕಾಗದವನ್ನೋದುತ್ತ ಓದುತ್ತಾ ಕಂಬನಿದುಂಬಿ ಕುರ್ಚಿಯಲ್ಲಿ ಕುಸಿದುಬಿಟ್ಟ – “ಅಣ್ಣನಾದ ವೆಂಕಟೇಶಮೂರ್ತಿಗೆ ತಂಗಿ ಲೀಲೂ ಮಾಡುವ ನಮಸ್ಕಾರಗಳು. ನೀನು ಒಂದೆ ಕಳುಹಿಸಿದ ಹಣ ಮತ್ತೂ ಕಾಗದಗಳು ಆಗಾಗಲೇ ಕೈಸೇರಿದುವು. ಅಪ್ಪನು ಯಾವುದೋ ಕಾರಣಕ್ಕೆ ಉತ್ತರ ಬರೆಯಲು ತಡಮಾಡುತ್ತಿದ್ದರು. ಈ ಮಧ್ಯೆ ಖಾಯಿಲೆಬಿದ್ದ ಅಮ್ಮನು ತೀರಿಕೊಂಡು ವರುಷವಾಯಿತು. ನಾನಂತೂ ತಬ್ಬಲಿಯಾದೆ. ಅನಂತರ ಅಪ್ಪನ ಮನಸ್ಸಿಗೆ ಮಂಕುಕವಿದು, ಬರುಬರುತ್ತಾ ಹುಚ್ಚಿಗೆ ತಿರುಗಿಕೊಂಡಿದೆ. ನೀನು ಕಳುಹಿಸಿದ ಹಣವೆಲ್ಲಾ ಅಮ್ಮನ ಕೆಲಸಕ್ಕಾಯಿತು. ಈಗ ಅಪ್ಪನ ಸಂಬಳ ಸಹಾ ಬರುತ್ತಿಲ್ಲ ಸ್ಥಿತಿ ಬಹು ಕಠಿಣವಾಗಿದೆ. ದಯಮಾಡಿ ಎರಡು ದಿನ ಮಟ್ಟಿಗೆ ಬಂದುಹೋಗ ಬೇಕಾಗಿ ಬೇಡುತ್ತೇನೆ. ನಿನ್ನತಂಗಿ ಲೀಲೂ.” ಹೀಗಿತ್ತು ಕಾಗದ.

ಅಂದೇ ಹಣವನ್ನು ತೆಗೆದುಕೊಂಡು ಹೊರಟ ವೆಂಕಟೇಶನು ಮೂರು ದಿನಗಳಲ್ಲೇ ತನ್ನ ಸಾಕಿದ ತಂದೆಯನ್ನು ಕಂಡ. ಅವನ ಕರುಳು ಕಿತ್ತು ಬಂದಿತು. ಮನೆಯೆಲ್ಲಾ ಹಾಳುಹಾಳು. ಲೀಲು ದೊಡ್ಡವಳಾಗಿ ಬೆಳೆದು ಹೆಚ್ಚು ನಾಜೂಕಾಗಿ ಕಂಡರೂ, ಮುಖದಲ್ಲಿ ತಾನು ನೋಡುತ್ತಿದ್ದ ಸಹಜ

ವಾದ ಸಂತೋಷವಿಲ್ಲ. ಮೂರ್ತಿಯು ಹರಕನ್ನುಟ್ಟು ಮನೆಯ ಮುಂದಿನ ಹುಲ್ಲಿನಮೇಲೆ ಕುಳಿತು ಅಲ್ಲಿ ಬಿದ್ದಿದ್ದ ಕಲ್ಲುಚಪ್ಪಡಿಯನ್ನು ತಟ್ಟುತ್ತಾ ' ಸೀತಾ ! ಲೀಲೂ ಗಂಡ ಬಂದ !! ಸೀತಾ ! ಲೀಲೂ ಗಂಡ ಬಂದ !! " ಎನ್ನುತ್ತಾ ತನಗೆ ತಾನೇ ಹುಚ್ಚುನಗು ನಗುತ್ತಾ ಇದ್ದ. ವೆಂಕಟೇಶನು ಅಡುಗೆಯ ಮನೆಯಲ್ಲಿ ಇಣಿಕಿನೋಡುತ್ತಲೇ ಗುದ್ದಿಬಂದ ದುಃಖವನ್ನು ತಡೆಯಲಾರದೆ ರೂಮಿಗೆ ಬಂದು ಮಗುವಿನಂತೆ ಅರ್ಧಘಂಟೆ ಅತ್ತ. ಅವನ ಸಂಕಟವನ್ನು ಕಂಡು " ತಾನು ಪಾಪಿನಿ. ತನ್ನಿಂದ ಅಮ್ಮನು ಸತ್ತಳು. " ಎಂಬ ಭಾವನೆ ಲೀಲೂಗೆ ಕ್ಷಣಕಾಲ ಮರಕಳಿಸಿತು.

ಹತ್ತಿರ ಬಂದು ವೆಂಕಟೇಶನನ್ನು ಸಮಾಧಾನಪಡಿಸಿದಳು.

" ಲೀಲಾ ! ಅಮ್ಮನು ಖಾಯಿಲೆಯಾಗಿದ್ದಾಗ ಔಷಧಿ ಕೊಡಿಸ ಲಿಲ್ಲವೇ ! "

" ಎಲ್ಲಾ ಔಷಧಿಯೂ ಮುಗಿಯಿತು."

" ಏನು ಖಾಯಿಲೆಯಾಗಿತ್ತು ? "

" ರಕ್ತ ಕ್ಷಯ "

" ರಕ್ತದ ಟ್ರಾನ್ಸ್‌ಫ್ಯೂಷನ್ ಮಾಡಿಸಬಹುದಾಗಿತ್ತಲ್ಲ."

" ಅದೂ ಆಯಿತು. ಅಪ್ಪನು ಐದು ಔನ್ಸ್ ರಕ್ತಕೊಟ್ಟರು. ಆದರೆ ಒಂದೂ ಪ್ರಯೋಜನವಾಗಲಿಲ್ಲ."

" ನನಗೆ ಒಂದು ಕಾಗದ ಬರೆಯಬಾರದಾಗಿತ್ತೇ. ಅಂಥ ಪಾಪಿಯಾದೆನೇ ನಾನು ? "

" ಅದೇಕೋ ಅಪ್ಪ ಅನುಮಾನಿಸುತ್ತಿದ್ದರು........"

" ಈಗ ಬರೆದಂತೆ ನೀನಾದರೂ ಒಂದು ಕಾರ್ಡ್ ಬರೆಯಬಾರ ದಾಗಿತ್ತೇ ? "

ಉತ್ತರವಿಲ್ಲ.

" ಲೀಲಾ ! ಇನ್ನು ಅಪ್ಪನನ್ನು ಕರೆದುಕೊಂಡು ಈ ಊರನ್ನೇ ಬಿಟ್ಟು ಬೊಂಬಾಯಿಗೆ ಹೊರಟುಹೋಗೋಣ. ಅಲ್ಲಿ ಘನವಾದ ಡಾಕ್ಟರುಗಳಿದ್ದಾರೆ. ಅಪ್ಪನಿಗೆ ಔಷಧೋಪಚಾರ ಮಾಡಿಸೋಣ. ನೀನೂ ಅಲ್ಲೇ ಓದು.

ಮುಂದಕ್ಕೆ ಡಾಕ್ಟರ್ ಪರೀಕ್ಷೆಗೇ ಓದು. ನಂತರ ಬೇಕಾದರೆ ಸರಿಯಾದ ಸ್ಥಿತಿವಂತನನ್ನ ಮದುವೆಯೂ ಆಗಬಹುದು."

"ನಾನು ಈ ವರ್ಷದ ಓದು ಇಲ್ಲೇ ಮುಗಿಸಿ, ಡಿಗ್ರೀ ತಗೊಂಡು ನಂತರ ಬರಬಹುದು. ಈಗ ಕಾಲೇಜು ಬಿಟ್ಟು ಬಂದರೆ ತುಂಬಾ ತೊಂದರೆ ಯಾಗುತ್ತೆ."

"ನಾನು ಅಪ್ಪನನ್ನ ಈರೀತಿ ತಬ್ಬಲಿಮಾಡಿ ಬಿಟ್ಟುಹೋಗಲಾರೆ."

"ಅದು ಸರಿ."

"ಹಾಗಾದರೆ ಅಪ್ಪನನ್ನು ಕರೆಕೊಂಡು ಹೋಗಲೇ ?"

"ಆಗಬಹುದು."

"ಆಮೇಲೆ ನೀನೊಬ್ಬಳೇ ಹೇಗಿರುತೀ ? ಎಲ್ಲಿರುತೀ ?"

"ನಮ್ಮ ಪ್ರಿನ್ಸಿಪಾಲ್‌ರ ಮನೇಲೇ ಇರುತೇನೆ. ಇಲ್ಲದಿದ್ದರೇ ಗರ್ಲ್ಸ ಹಾಸ್ಟೆಲ್‌ನಲ್ಲಿರುತೇನೆ."

"ಹಾಗಾದರೆ ಅಪ್ಪನ ಸಂಗಡ........"

"ಹಾಗಲ್ಲ ವೆಂಕಟೇಶೂ. ಈವರ್ಷ ಮುಗೀತಿದ್ದಹಾಗೇ ಅಲ್ಲಿಗೆ ಬಂದು ಬಿಡುತೇನೆ. ಈಮಧ್ಯೆ ವಾರಕ್ಕೊಂದು ಕಾಗದ ನೀನು ಹಾಕುತಿರ ಬೇಕು."

"ಹೌದೂ ಲೀಲೂ ! ಬೆಳೆದ ಹೆಣ್ಣುಮಗಳು – ಮನೆಯವರು ಯಾರೂ ಇಲ್ಲದೆ ಹೀಗೆ ಒಂಟಿಯಾಗಿದ್ದರೆ, ಸಮಾಜ ಇಲ್ಲದ ಹೆಸರಿಡುತ್ತೆ. ನಿನ್ನ ಮನಸ್ಸಿಗೆ ಸಂಕಟವಾಗುತ್ತೆ. ಈ ದಿನವೆಲ್ಲಾ ಯೋಚಿಸಿ ನೋಡು ನಾವು ನಾಳೆ ಹೊರಡೋದು ಅಪ್ಪನಿಗೆ ಸರಿಯಾದ ಬಟ್ಟೆಗಳನ ತಂದು, ಬೆಳಿಗ್ಗೆ ಅವರನ್ನ ಸಲೂನಿಗೆ ಕರಕೊಂಡು ಹೋಗಿಬಂದು, ಸ್ನಾನಮಾಡಿಸಿ, ಬೇರೇ ಬಟ್ಟೆಹಾಕಿ, ರಾತ್ರೆ ಪೂನಾ ಮೆಯಿಲ್‌ನಲ್ಲಿ ಹೊರಡೋದು. ಸೆಕೆಂಡ್ ಕ್ಲಾಸ್ ಸೀಟ್ ರಿಜರ್ವ್ ಮಾಡಿಸುತೇನೆ."

"ನನಗೆ ಅಪ್ಪನ್ನ ಬಿಟ್ಟಿರೋಕೂ ಮನಸ್ಸು ಬಾರದು. ಇಲ್ಲೇ ಇಟ್ಟು ಕೊಂಡು, ಅವರ ಬೇಕು ಬೇಡಗಳನ್ನ ನೋಡಿಕೊಂಡು, ಜೊತೆಗೆ ನನ್ನ ಡಿಗ್ರೀ ಕೋರ್ಸನೂ ಮುಗಿಸೋದೂ ಕಷ್ಟ."

"ಅಲ್ಲೇ ಓದುವೆ ಬಂದುಬಿಡು ಲೀಲೂ"

" ಅದು ಆಗೊಲ್ಲ ವೆಂಕಟೇಶ್. ಅಪ್ಪನ ವಿಚಾರದಲ್ಲಿ ನಿನಗೆ ನನಗಿಂತ ಕಡಿಮೆ ಪ್ರೀತಿಯೇನಿಲ್ಲ."

" ಹಾಗಾದರೆ ನೀನು ಇಲ್ಲೇ ನಿಲ್ಲುತೀಯಾ ?"

" ಹೌದು ವೆಂಕಟೇಶ್ "

" ಈ ದಿನವೆಲ್ಲಾ ಯೋಚಿಸಿ ನೋಡೂ ಲೀಲೂ "

" ಯೋಚಿಸೋದೇನಿಲ್ಲ ವೆಂಕಟೇಶ್. ಈ ವರ್ಷದ ಪರೀಕ್ಷೆ ಮುಗಿದು ಬೇಸಿಗೆ ರಜಾ ಬರುತ್ತಿದ್ದ ಹಾಗೇ ಹೊರಟು ಬಂದು ಬಿಡುತೇನೆ."

" ನೀನು ಬೆಳದೋಳು. ನನಗಿಂತಾ ವಿದ್ಯಾವಂತೆ. ನಾನು ನಿನ್ನ ಮುಂದಿನ ಕ್ಷೇಮದ ದೃಷ್ಟಿಯಿಂದ ಹೇಳಿದೆ. ನಿನ್ನಿಷ್ಟ."

" ಇಲ್ಲಿ ನನ್ನ ಖರ್ಚಿಗೆ ಸ್ಕಾಲರ್‌ಷಿಪ್ ಅಮೌಂಟು...."

" ನೀನು ಯೋಚನೆ ಮಾಡಬೇಡ. ನನಗೀಗ ಬರುತಿರೋ ಇನ್ನೂರ ಐವತ್ತು ರೂಪಾಯಿಲಿ, ಅಪ್ಪನ ಔಷಧೋಪಚಾರಕ್ಕೊಂದು ನೂರು, ನನ ಗೊಂದು ನೂರಿಟ್ಟುಕೊಂಡು, ನಿನಗೈವತ್ತು ರೂಪಾಯಿ ಧಾರಾಳವಾಗಿ ಕಳಿಸ ಬಲ್ಲೆ."

" ವೆಂಕಟೇಶ್ ! ಈ ಸಮಯದಲ್ಲಿ ನೀನೊಬ್ಬ ನಮ್ಮ ಭಾಗಕ್ಕಿಲ್ಲದೇ ಹೋಗಿದ್ದರೇ........"

" Oh ! Don't flatter me Leeloo ! ಸ್ವಲ್ಪ ಅಪ್ಪನ್ನ ನೋಡಿಕೋ. ನಾನು ರೆಡಿಮೇಡ್ ಡ್ರೆಸ್ ಕಂಪೆನಿಗೆ ಹೋಗಿ ಬರುತೇನೆ."

ವೆಂಕಟೇಶ ಅಲ್ಲಿಂದ ಹೊರಟುಬಿಟ್ಟ. ನಿರಾಧಾರಳಾದ, ಹೆಚ್ಚಾಗಿ ನಿರಂ ಕುಶಳಾದ ಬೆಳೆದ ಹುಡುಗಿ — ಕಾಲೇಜಿನಲ್ಲಿ ಓದುವ ಹುಡುಗಿ – ಲೀಲೂ – ಅವಳ ಭವಿಷ್ಯ ಸುಗಮವಾಗಿ ಕಾಣಲಿಲ್ಲ. ತಾನೂ ಸಹಾ ಆಗಾಗ ಬಂದು ಅವಳ ಜೀವನ ಮಾರ್ಗವನ್ನ ತನ್ನ ಕೈಲಾದಷ್ಟು ಸುಗಮ ಮಾಡುವುದೆಂದು ಸಂಕಲ್ಪಿಸಿ ಹೊರಟುಬಿಟ್ಟ.

ಮಾರನೆಯ ದಿನ ರಾತ್ರಿ ರೈಲಿನಲ್ಲಿ ರಾಮಚಂದ್ರಮೂರ್ತಿಯೊಂದಿಗೆ ಹೊರಟ. ಸ್ಟೇಷನ್ನಿಗೆ ಬಂದಿದ್ದ ಲೀಲೂ, ಸರೋಜ, ಅವಳ ತಮ್ಮ ಮೂವರೂ ಬೀಳ್ಕೊಟ್ಟರು. ಮೂರ್ತಿಗೆ ಲೀಲೂ ಮಾತನಾಡಿಸಿದ್ದೂ, ಕಣ್ಣೀರಿಟ್ಟದ್ದೂ, ತಾನು ವೆಂಕಟೇಶನೊಂದಿಗೆ ರೈಲಿನಲ್ಲಿರುವುದೂ ಒಂದೂ ಅರಿವಿಲ್ಲ. ತನ್ನ

ಮಟ್ಟಿಗೆ ತಾನು ಪಂಚೆಯ ಸೆರಗನ್ನು ಹೊಸೆಯುತ್ತಾ "ಸೀತಾ! ಲೀಲೂ ಗಂಡ ಬಂದ! ಸೀತಾ! ಲೀಲೂ ಗಂಡ ಬಂದ" ಎಂಬ ಈ ಎರಡೇ ವಾಕ್ಯಗಳನ್ನು ಗೊಣಗುಟ್ಟುತ್ತಿದ್ದ.

೨

ಮುಂದೆ ನಾಲ್ಕಾರು ತಿಂಗಳಲ್ಲಿ ರಾಮಚಂದ್ರಮೂರ್ತಿಯ ಸ್ಥಿತಿಯೇನೂ ನರ್ಸಿಂಗ್ ಹೋಂನಲ್ಲಿ ಬದಲಾಯಿಸಿರಲಿಲ್ಲ. ಬರಬರುತ್ತಾ ನಿದ್ರೆಯೂ ಸಹ ನಿಂತುಹೋಗುತ್ತ ಬಂದಿತು. ಈ ಮಧ್ಯೆ ವೆಂಕಟೇಶ ಎರಡು ಮೂರುಸಲ ಲೀಲೂವನ್ನು ನೋಡಲು ತಾನೇ ಖುದ್ದಾಗಿ ಬಂದು ಹೋಗಿದ್ದ. ಮೊದಲೆರಡುಬಾರಿ ಸುತ್ತಮುತ್ತಣ ಮಾತುಗಳನ್ನು - ಲೀಲೂ ವಿಚಾರವಾದ ಅಪವಾದದ ಮಾತುಗಳನ್ನು ಕೇಳೀ ಬಹುವಾಗಿನೊಂದು, ಬೊಂಬಾಯಿಗೆ ಬಂದುಬಿಡುವಂತೆ ಅವಳಿಗೆ ಬಹುಹೇಳಿದ. ಒಬ್ಬಳನ್ನೇ ಲಾಲ್‌ಬಾಗಿಗೆ, ಸಿನಿಮಾಕ್ಕೆ ಕರೆದುಕೊಂಡುಹೋಗಿ ಆ ಸಂದರ್ಭದಲ್ಲಿ ಒಡಹುಟ್ಟಿದವನಿಗಿಂತ ಹೆಚ್ಚು ಆತಂಕ ಪ್ರೀತಿಗಳಿಂದ ಬಹುವಾಗಿ ಸಮಾಧಾನ ಹೇಳಿದ. ಆದರೆ ಅವನ ಆತ್ಮೀಯವಾದ ಸಂಕಟಭರಿತವಾದ ಹಿತವಚನಗಳು ಲೀಲುವಿನ ಉಚ್ಛೃಂಕಲ ಮನೋವೃತ್ತಿಯನ್ನು ಎಳ್ಳಷ್ಟೂ ತಿರುಗಿಸಲಾರದೇ ಹೋಗಿದ್ದುವು. ಮೂರನೆಯಸಲ ಅವಳನ್ನು ಹುಡುಕಿಕೊಂಡು ಬಂದಾಗ ಸಿನಿಮಾ ಮಂದಿರವೊಂದರಲ್ಲಿ ಅವಳು, ಸರೋಜ ಮತ್ತು ರವೀಂದ್ರ - ಮೂವರು ಕುಳಿತು ಮಿತಿಮೀರಿದ ಸಲಿಗೆಯಿಂದ ವರ್ತಿಸುತ್ತಿರುವುದನ್ನು ಕಂಡು, ಅರ್ಧದಲ್ಲೇ ಎದ್ದುಬಂದು, ಅವಳಿಗಾಗಿ ದೀರ್ಘಪತ್ರವೊಂದನ್ನು ಬರೆದು ಸರೋಜನ ತಾಯಿಯಕೈಗೆ ಕೊಟ್ಟು, ಲೀಲುವನ್ನು ನೋಡದೇನೇ ಬೊಂಬಾಯಿಗೆ ಹಿಂದಿರುಗಿಬಿಟ್ಟಿದ್ದ. ನಂತರ ಆ ಪತ್ರವನ್ನೋದಿದ ಲೀಲೂಗೆ ಕೋಪ ರೋಷಗಳು ಹೆಚ್ಚಿ, ನಂತರ ವೆಂಕಟೇಶನು ಕಳುಹಿಸಿದ್ದ ಮನಿಆರ್ಡರನ್ನು ಹಿಂತಿರುಗಿಸಿಬಿಟ್ಟಿದ್ದಳು.

ಇತ್ತ ವೆಂಕಟೇಶಮೂರ್ತಿಯು ಲೀಲುವಿನ ಚಿಂತೆಯನ್ನು ಮನಸ್ಸಿನಿಲ್ಲದೇ

ಕೈಬಿಟ್ಟು, ರಾಮಚಂದ್ರಮೂರ್ತಿಯು ರೋಗನಿವಾರಣೆಗಾಗಿ ಸ್ಥಳದ ಅದ್ವಿತೀಯ ನಿಪುಣ ವೈದ್ಯರನ್ನೆಲ್ಲಾ ಕರೆತಂದು ತೋರಿಸಿ, ಸಲಹೆ ಪಡೆದು, ಹೇಗಾದರೂಮಾಡಿ ಆತನ ಸ್ಥಿತಿಯನ್ನು ಗುಣಪಡಿಸಬೇಕೆಂದು ಸರ್ವಪ್ರಯತ್ನ ವನ್ನೂ ಮಾಡುತ್ತಿದ್ದ. ಈ ಪ್ರಯತ್ನದಲ್ಲಿ ವೆಂಕಟೇಶನ ಯಜಮಾನರೂ ಸಹ ತಮ್ಮ ಸಾಹಸ ಹಣಗಳನ್ನು ಕೈಹಿಡಿಯದೆ ವಿನಿಯೋಗಿಸಿದ್ದರು. ಆದರೆ ಯಾವುದೊಂದೂ ಫಲಿಸುವಂತೆ ಕಾಣಲಿಲ್ಲವಾಗಿ ವೆಂಕಟೇಶ ಮೂರ್ತಿಯು ನಿರಾಶನಾಗಿ ಆತನನ್ನು ಹತ್ತಿರದ ನರ್ಸಿಂಗ್ ಹೋಂನ ಸ್ಪೆಷಲ್ ವಾರ್ಡಿನಲ್ಲಿಟ್ಟು, ಸ್ಪೆಷಲ್ ನರ್ಸಿಗಾಗಿ ಏರ್ಪಾಟುಮಾಡಿದ. ಎಷ್ಟು ಮರೆಯೋಣವೆಂದರೂ ಲೀಲೂ ವಿಚಾರ ಅವನ ಕರುಳನ್ನು ಆಗಾಗ ಹಿಂಡುತ್ತಿತ್ತು.

ಇದ್ದಕ್ಕಿದ್ದಂತೆಯೇ ಒಂದು ದಿನ ವೆಂಕಟೇಶನಿಗೆ ಲೀಲೂವಿನಿಂದ ತಂತಿ ಯೊಂದು ಬಂದಿತು. ಅದರಲ್ಲಿ ಕೇವಲ ನಾಲ್ಕೇ ಮಾತುಗಳಿದ್ದುವು. "ಲೀಲಾಗೆ ಬಹು ಖಾಯಿಲೆ. ತಕ್ಷಣ ಹೊರಟುಬರುವುದು." ತಂತಿಯು ಲೀಲಾ ಹೆಸರಿನಲ್ಲೇ ಇದ್ದಿತು. ವೆಂಕಟೇಶನಿಗೆ ಒಂದೂ ಸ್ಪಷ್ಟವಾಗಿ ತಿಳಿಯ ದಾಯಿತು. "ಲೀಲಾಗೆ ಖಾಯಿಲೆ ಎಂದು ಲೀಲಾ ತಾನೇ ಏಕೆ ತಂತಿ ಕೊಡ ಬೇಕು? ನನ್ನ ಮನಿ ಆರ್ಡರ್‌ನ್ನು ಹಿಂದಿರುಗಿಸಿದವಳು ಈಗೇಕೆ ಹೀಗೆ ನನ್ನನ್ನು ಕರೆಯಬೇಕು? ಅವಳನ್ನ ಮರಳುಮಾಡಿದ್ದ ಆ........... ಏನೋ? ಹೊರಡುವುದೇ ಸರಿ" ಎಂದುಕೊಂಡು, ಯಜಮಾನರಿಗೆ ತಿಳಿಸಿ, ನರ್ಸಿಂಗ್ ಹೋಂನಲ್ಲಿನ ಡಾಕ್ಟರ್‌ಗೆ ಎಚ್ಚರಹೇಳಿ ಅಂದೇ ಹೊರಟುಬಿಟ್ಟ.

ಒಂದೂವರೆದಿನದ ಪ್ರಯಾಣದ ನಂತರ ಊರು ತಲುಪಿ ರೈಲಿನಿಂದಿಳಿದು ತನ್ನ ಕೈಪೆಟ್ಟಿಗೆಯೊಂದಿಗೆ ಸ್ಟೇಷನ್ ಪ್ಲಾಟ್‌ಫಾರಂನಲ್ಲಿ ಇತ್ತ ತಿರುಗುವಂತೆಯೇ ಹಿಂದಿನಿಂದ ಯಾರೋ ಹೆಂಗಸು ತನ್ನ ಎಡಗೈ ಹಿಡಿದಂತಾಯಿತು. ನೋಡಿದ ಲೀಲೂ. ಮುಖ ಕಳೆಯಾಗಿದೆ. ಆದರೆ ಕಣ್ಣುಗಳೆರಡೂ ಕೆಂಪಾಗಿವೆ. ಶರೀರದಲ್ಲಿ ಏನೋ ವಿಶೇಷತೆ ಕಂಡುಬರುತ್ತಿದೆ

"ಲೀಲಾ! ಇದೇನು? ನೀನು ಇಲ್ಲಿ?"

"ರೈಲು ಕಂಬಿಯ ಮೇಲೆ ಮಲಗಿ ಪ್ರಾಣಕಳೆದುಕೊಳ್ಳಬೇಕೆಂದು ಮೂರುದಿನದಿಂದ ಇಲ್ಲಿಗೆ ಬಂದೆ. ಆದರೆ ಮನಸ್ಸು ಬರಲಿಲ್ಲ. ದಿಕ್ಕು ತೋರದೆ ನಿನಗೆ ತಂತಿಕೊಟ್ಟು ನಿನ್ನ ದಾರಿ ಕಾಯುತ್ತಿದೇನೆ."

“ ರಾತ್ರಿಯನ್ನು ಎಲ್ಲಿ ಕಳೆಯುತ್ತಿದ್ದೆ ? ”

“ ಸ್ಟೇಷನ್ನಿನ ಮಹಡಿಯ ಮೇಲೆ ಒಂದು ರೂಮು ತಗೊಂಡಿದೇನೆ.”

“ ಅಲ್ಲಿ ರೂಮು ಸಿಗುತ್ತೇಂತ ನಿನಗೆ ಹೇಗೆ ಗೊತ್ತು ? ”

“ ಆ ಚಂಡಾಲ ಹಿಂದೆಯೇ ಇಲ್ಲಿಗೆ ಕರೆತರುತಿದ್ದ.”

ಲೀಲೂಗೆ ದುಃಖ ತಡೆಯದಾಯಿತು. ವೆಂಕಟೇಶನ ಕತ್ತಿನಿಂದ ತೂಗಾಡುತ್ತಿದ್ದ ಮಫ್ಲರನ್ನ ಮುಖಕ್ಕೆ ಮುಚ್ಚಿಕೊಂಡು ನಿಂತಳು. ಇಬ್ಬರೂ ಮಾತನಾಡದೆ ಮಹಡಿಹತ್ತಿ ಆರನೇ ನಂಬರಿನ ರೂಮಿಗೆ ಬಂದರು. ಲೀಲೂ ಬಾಗಿಲು ತೆಗೆದಳು. ಹಾಸಿಗೆ ಇಲ್ಲ. ಹೊದ್ದಿಗೆ ಇಲ್ಲ. ಖಾಲಿ ಮಂಚಮಾತ್ರ. ಪಾತ್ರೆ ಪದಾರ್ಥಗಳು ಸಹಾ ಕಾಣಿಸಲಿಲ್ಲ. ಒಳಕ್ಕೆ ಪ್ರವೇಶಿಸುತ್ತಿದ್ದಂತೆಯೇ ಲೀಲಾ ಬಾಗಿಲನ್ನು ಮುಚ್ಚಿ ಅಗುಳಿಹಾಕಿ, ಬಿಕ್ಕುತ್ತಾ ವೆಂಕಟೇಶನ ಪಾದಗಳಲ್ಲಿ ಬಿದ್ದು ಅಳತೊಡಗಿದಳು. ವೆಂಕಟೇಶನ ಮನಸ್ಸು ಯಾವಯಾವುದೋ ಯೋಚನೆಗಳ ಬಿರುಗಾಳಿಯಲ್ಲಿ ಸಿಕ್ಕಿದ್ದಿತು.

ಮೆಲ್ಲಗೆ ಹೋಗಿ ಮಂಚದ ಮೇಲೆ ಕೂತ. ಲೀಲೂ ಅವನ ಕಾಲಿನ ಬಳಿಯೇ ನೆಲದ ಮೇಲೆ ಕೂತು ಕತ್ತು ತಗ್ಗಿಸಿ ಸೊರಗುಟ್ಟುತ್ತಿದ್ದಳು. ವೆಂಕಟೇಶನು ಅವಳ ತಲೆಯನ್ನು ನೇವರಿಸುತ್ತಾ ಪ್ರೇಮದಿಂದ ಹೇಳಿದ.

“ ಲೀಲಾ ! ಏಳು. ಮೇಲೇಳು. ನೀನು ಕಣ್ಣನಲ್ಲಿ ನೀರು ಸುರಿಸಬೇಡ. ನನ್ನ ಪ್ರಾಣಾನಾದರೂ ನಿನ್ನ ಮತ್ತೂ ಅಪ್ಪನ ಸುಖಕ್ಕಾಗಿ ಅರ್ಪಿಸೋದಕ್ಕೆ ಸಿದ್ಧವಾಗಿದೇನೆ. ಏನು ಸಂಗತಿ— ವಿವರವಾಗಿ ಹೇಳಿಬಿಡು. ”

“ ನೀವು ನನ್ನ ಕೈ ಹಿಡಿದು ಕಾಪಾಡುತೀನಿಂತ ಹೇಳಿದರೆ ಸರಿ. ಇಲ್ಲದಿದ್ದರೆ ನಾನು ಈ ಮಹಡಿಯಿಂದ ಧುಮುಕಿಯಾದರೂ ಪ್ರಾಣಾ ಕಳೆಕೊಳ್ಳುತೇನೆ. ಪಾಪಿನಿ ನಾನು. ನನ್ನನ್ನ ಹೆತ್ತು ಹೊತ್ತು ಸಾಕಿದಮ್ಮನ ಪ್ರಾಣ ನುಂಗಿದೆ. ಅಂಥ ಪ್ರೇಮನಿಧಿಯಾದ ಅಪ್ಪ – ಅವರ ಜೀವನಾನ ಬೇಯಿಸಿದೆ. ಸುಖವಾಗೆಲ್ಲೋ ಇದ್ದೋರು– ನೀವೊಬ್ಬರು. ನಿಮ್ಮ ಬಾಳನೂ ಭಂಗಮಾಡುತಿದೇನೆ. ನಾನು ಬದುಕಿರಬಾರದು.” ಎಂದು ಮತ್ತೆ ರೋದಿಸತೊಡಗಿದಳು.

ಇಷ್ಟು ದಿನವೂ ಏಕವಚನದಲ್ಲಿ ಸಂಬೋಧನೆಮಾಡುತ್ತಿದ್ದು, ಈಗ ಇದ್ದಕ್ಕಿದ್ದಂತೆಯೇ ಬಹುವಚನದಲ್ಲಿ ಇಷ್ಟೊಂದು ಗೌರವದಿಂದ ಮಾತನಾಡಿಸುತ್ತಿರಲು ಕಾರಣವೇನು ?— ಎಂದು ವೆಂಕಟೇಶ ಯೋಚಿಸಿದ. ಬಗೆಹರಿಯಲಿಲ್ಲ.

"ಲೀಲಾ ! ನಿನಗೆ ಈಗ ಬಂದಿರುವ ಕಷ್ಟಾನ ಪರಿಹಾರಮಾಡೋದು ನನ್ನಿಂದ ಶಕ್ಯವಾದರೆ, ನೀನು ಧೈರ್ಯವಾಗಿ ಬಾಯಿಬಿಟ್ಟು ಹೇಳು ಬೆಂಕೀಲಿ ಬೀಳೋದರೂ ಸಿದ್ಧವಾಗಿದೇನೆ."

—ಇದನ್ನು ಕೇಳಿ ಲೀಲೂ ದುಃಖ ಇಮ್ಮಡಿಸಿತು. ಅವನ ಪಾದಗಳ ಮೇಲೆ ಮುಖವಿಟ್ಟು ಕಣ್ಣೀರು ಸುರಿಸುತ್ತಾ—"ಅಯ್ಯೋ! ನಿಮ್ಮೆಲ್ಲರ ಹೃದಯಗಳ ಪ್ರೇಮಕಲಶಗಳನ್ನೊಡೆದು, ವಿಷಪಾನಮಾಡಿದ ಪಾಪಿನಿಯಾದೆ. ನಾನು ಯಾವ ಬಾಯಿಂದ ನನ್ನ ಪಾಪಾನ ಹೇಳಿಕೊಳ್ಳಲೀ !" ಎಂದು ಗೋಳಾಡುತ್ತಿದ್ದಳು.

ವೆಂಕಟೇಶನು ಅವಳನ್ನೆತ್ತಿ ಪಕ್ಕದಲ್ಲಿ ಕುಳ್ಳಿರಿಸಿಕೊಂಡು, ಕಣ್ಣೀರೊರಸಿ, ಸಮಾಧಾನಪಡಿಸುತ್ತಾ—"ಲೀಲಾ ! ಆ ನಿನ್ನ ಪಾಪ ನನಗೆ ಪಾಪವಲ್ಲ—ಹೇಳು" ಎಂದ. ಲೀಲು ಕತ್ತನ್ನು ತಗ್ಗಿಸಿಯೇ ಉಕ್ಕಿಬರುವ ಅಳುವನ್ನು ನುಂಗುತ್ತಾ ಹೇಳಿದಳು—"ಬೆಳ್ಳಗಿರುವುದೆಲ್ಲಾ ಹಾಲೆಂದು ನಂಬಿ, ಆ ಪಾಪಿಯ ಮಾತುಗಳಿಗೆ ಬೆರಗಾಗಿ ಕಾಲು ಜಾರಿದೆ."

"ಸರೋಜನ ಸೆಂಟರ್ನೇ ?"

"ಹೌದೂ !"

"ಎಷ್ಟು ದಿನವಾಯಿತು."

"ಐದು ತಿಂಗಳಾಯಿತು ?"

"ಅಂದಿನಿಂದ ?"

"ಯಾರಿಗೂ ಹೇಳದೆ ಹೊಟ್ಟೆಯ ಸಂಕಟವನ್ನು ನುಂಗಲು ಪ್ರಯತ್ನಿಸುತ್ತಾ ತಡೆಯಲಾರದೆ ತಂತೀಕೊಟ್ಟೆ."

"ಅವನೇ ನಿನ್ನನ್ನು ಮದುವೆಯಾಗಬೇಕು. ಆಗುವಂತೆ ಮಾಡಬೇಕು."

"ಹಯ್ಯೋ! ಅದಕ್ಕಾಗಿ ಆ ಚಂಡಾಲನನ್ನ ಬೇಡಿ, ಕಾಲು ಹಿಡಿದು ಕೇಳಿಕೊಂಡು, ಅತ್ತು ಗೋಳಾಡಿದೆ. ಎಲ್ಲ ವ್ಯರ್ಥವಾಯಿತು."

"ಇರಲಿ. ಲಾಯರಿದ್ದಾರೆ. ಕೋರ್ಟಿದೇ"

"ಅಯ್ಯೋ ! ಅದುವರೆಗೂ ನಾನು ಬದುಕಿರುವುದಿಲ್ಲ."

"ಮಾಡಿರುವ ಪಾಪಕ್ಕೆ ಅವನು ಏನುಹೇಳುತಾನೆ ನೋಡೋಣ. ಹೋಗಿ ಮಾತನಾಡಿಸೋಣ."

"ಅದಕ್ಕೂ ಸಿಕ್ಕುವಂತಿಲ್ಲ. ಕಡೆಯದಾಗಿ ಈ ಕಾಗದ ಬರೆದು ತನ್ನ ಕೊಲೆಪಾತಕ ಕೆಲಸಾನ ಪೂರೈಸಿದಾನೆ." ಎಂದು ಹೇಳುತ್ತಾ ಲೀಲೂ ತನ್ನ ಕೈಪೆಟ್ಟಿಗೆಯಿಂದ ಕಾಗದವೊಂದನ್ನು ತೆಗೆದು ಕೊಟ್ಟಳು. ಅದರಲ್ಲಿ ಈ ರೀತಿ ಬರೆದಿತ್ತು. "ಲೀಲಾ! ನಿಮ್ಮ ಕಾಗದ ತಲುಪಿತು. ನಿಮ್ಮ ಪಾಪಕ್ಕೆ ನನ್ನನ್ನ ಗುರಿಮಾಡುತ್ತಿರುವುದನ್ನ ನೋಡಿದರೆ ನನಗೆ ಆಶ್ಚರ್ಯವಾಗುತ್ತದೆ. ನೀವು ವಿಶೇಷವಾಗಿ ನಿಮ್ಮ ಆನರ್ಸ್ ಲೆಕ್ಚರರ್, ಇನ್ನೂ ಹೆಚ್ಚಾಗಿ ನಿಮ್ಮ ಬೊಂಬಾಯಿನ 'ಬ್ರದರ್' ಸಂಗಡ ವ್ಯವಹರಿಸುತ್ತಾ ವಿಹರಿಸುತ್ತಾ, ಸಿನಿಮಾಮಂದಿರಗಳಲ್ಲೂ ಲಾಲ್‌ಬಾಗ್ ಮುಂತಾದ ವಿಹಾರ ಸ್ಥಳಗಳಲ್ಲೂ ಬಹಿರಂಗವಾಗಿಯೇ ಚೆಲ್ಲಾಟವಾಡುತ್ತಿದ್ದುದನ್ನ ಕಣ್ಣಾರೆ ಕಂಡ ನನ್ನ ಮಿತ್ರರು ನನಗೆ ಹತ್ತಾರು ಕಾಗದಗಳನ್ನು ಬರೆದಿದ್ದಾರೆ. ಮುಖ್ಯವಾಗಿ, ಯೋಗ್ಯವಂಶದವರೆಂದು ತಿಳಿದು ನಿಮ್ಮ ಸ್ನೇಹ ಮಾಡಿದುದು ನಮ್ಮ ಕುಲದ ಗೌರವಕ್ಕೇ ಕುಂದು. ಇನ್ನುಮುಂದೆ ನಿಮ್ಮಿಂದ ನನಗೆ ಯಾವ ಪತ್ರವಾಗಲೀ, ಮುಖದರ್ಶನವಾಗಲೀ ಬೇಕಿಲ್ಲ. ಇದರೊಂದಿಗಿರುವ ನನ್ನ ಲಗ್ನಪತ್ರಿಕೆಯು ಕೇವಲ ಸುದ್ದಿ ತಿಳಿಸುವ ಸಲವಾಗಿಯೇ ಹೊರತು, ನಿಮಗೆ ಆಹ್ವಾನವಲ್ಲ – ರವೀಂದ್ರ."

ವೆಂಕಟೇಶನ ಕೋಪ ಉದ್ರೇಕವಾಯಿತು. ಎದ್ದು ಶತಪಥ ತಿರುಗಿದ.

"ಲೀಲಾ! ಎಂಥ ಮೋಸ ಹೋದೆ!" ಎಂದು ಕೈಕೈ ಹಿಸುಕಿಕೊಂಡ.

"ಅಪ್ಪನು ಹೇಳುತ್ತಿದ್ದ ಕಥೆಗಳು—ನಮ್ಮ ಮನೆಯಲ್ಲೇ ಜರುಗಬೇಕಾಗಿದ್ದಿತೇ?"

"ಇದಕ್ಕೆ ಯಾರು ಹೊಣೆ. ಅಪ್ಪ ನಮ್ಮ ಅಂತಸ್ತು ಪರಿಸ್ಥಿತಿಗಳನ್ನು ಯೋಚಿಸಿ ಯೋಚಿಸಿ ಹೆದರುತ್ತಿದ್ದರು – ಅಷ್ಟೇ."

"ಅಪ್ಪನನ್ನ ಒಂದು ಸಲ ದೂರದಿಂದ ನೋಡಿಬಿಡಬೇಕೂನ್ನೋ ಒಂದು ಆಶೆಯಿಂದ ಪ್ರಾಣಾನ ಬಿಗಿ ಹಿಡಿದುಕೊಂಡಿದ್ದೀನಿ. ಪ್ರಾಣ ಕಳೆದುಕೊಳ್ಳೋದಕ್ಕೆ ಪ್ರಯತ್ನಿಸಿದ ಒಂದೊಂದು ಸಲಾನೂ, ಅವರ ಆ ಆತಂಕದ ಮುಖ ಕಣ್ಮುಂದೆ ಕಟ್ಟಿದಹಾಗೆ ಕಾಣಿಸುತಿತ್ತು."

"ಲೀಲಾ ನೀನು ಯಾವುದೇ ಕಾರಣದಿಂದಾಗಲೀ ಪ್ರಾಣಹತ್ಯ ಮಾಡಿಕೊಳ್ಳದಿದ್ದದ್ದು ನನ್ನ ಪುಣ್ಯ. ಇನ್ನು ನಿನಗೆ ಈ ಊರಿನಲ್ಲಿ ಏನೂ ಕೆಲಸವಿಲ್ಲ.

ನಿನ್ನ ಓದು ಇಲ್ಲಿ ಇಷ್ಟಕ್ಕೇ ನಿಂತರೂ, ಮುಂದೆ ಬೊಂಬಾಯಿನಲ್ಲಿ ಮುಂದು ವರಿಸಬಹುದು."

"ನನ್ನ ಓದಿಗೆ ಬೆಂಕಿ ಹಾಕಿತು !"

"ಈಗ ಹೋಗಿ ಎರಡು ಊಟಕ್ಕೆ ಹೇಳಿ ಬರುತೇನೆ. ಊಟ ತೀರಿಸಿ ಕೊಂಡು ಪೂನಾ ಮೆಯಿಲ್ ಹತ್ತಿ ಊರಿಗೆ ಹೋಗೋಣ. ನಿನ್ನ ನೋಡಿ ಯಾದರೂ ಅಪ್ಪನಿಗೆ ಗುಣವಾಗಬಹುದು." ಎಂದು ವೆಂಕಟೇಶನು ಕೊಠಡಿಯ ಬಾಗಿಲನ್ನು ಮುಂದೆಳೆದುಕೊಂಡು, ಭೋಜನಶಾಲೆಯ ಕಡೆಗೆ ಹೊರಟ. ಒಳಗೆ ಲೀಲಾಗೆ ಅಪ್ಪನ ನೆನಪು ಹೆಚ್ಚಿ "ಅಪ್ಪಾ ! ಅಮ್ಮಾ ! ಅಯ್ಯೋ !" ಎಂದು ಗೋಳಾಡುತ್ತಿದ್ದಳು.

ರೈಲು ಪ್ರಯಾಣದಲ್ಲಿ ಉದ್ದಕ್ಕೂ ಲೀಲೂ ಮಲಗಿಬಿಟ್ಟಿದ್ದಳು. ವೆಂಕಟೇಶನು ಕುಳಿತೇ ಇದ್ದನು. ಆಗಾಗ ಲೀಲೂ "ಅಪ್ಪಾ ! ಅಮ್ಮಾ !" ಎಂದು ಕನವರಿಸಿಕೊಳ್ಳುತ್ತಿದ್ದಳು. ಸ್ವಲ್ಪ ಚೆನ್ನಾಗಿ ಎಚ್ಚರವಾದಾಗ—"ಹೋಗಿ ಅಪ್ಪನನ್ನ ಒಂದುಬಾರಿ ನೋಡಿಬಿಟ್ಟು ನಂತರ ಹೇಗೋ ತನ್ನ ಜೀವನದಾಟವನ್ನು ಮುಗಿಸಿಕೊಂಡು ಬಿಡುವುದು" ಎಂಬ ಒಂದೇ ಯೋಚನೆ ಯಲ್ಲಿ ತೊಡಗಿರುತ್ತಿದ್ದಳು. ವೆಂಕಟೇಶನಾದರೋ "ಪಾಪ ತಬ್ಬಲಿ ಹುಡುಗಿ. ಏನೋ ಹಠಮಾರಿತನ ಮಾಡಿ ಅಸಂಗತವಾಯಿತು. ಚಿಂತೆಯಿಲ್ಲ. ನಾನು ಅವಳ ಹೊಟ್ಟೆಯಲ್ಲಿರುವ ಮಗುವಿಗಾದರೂ ದಿಕ್ಕಾಗಿ ಅವಳನ್ನು ನೆಮ್ಮದಿ ಯಾಗಿಟ್ಟಿರಬೇಕು. ಇದಕ್ಕಾಗಿ ನನಗೆ ಈ ಜನ್ಮದಲ್ಲಿ ಮದುವೆಯೇ ಆಗ ದಿದ್ದರೂ ಚಿಂತೆಯಿಲ್ಲ. ಲೋಕಕ್ಕೆ ಸಂಸಾರಿಯಾಗಿ—ಲೀಲುವಿನ ಗಂಡನಾಗಿ, ಹುಟ್ಟುವ ಮಗುವಿನ ತಂದೆಯಾಗಿ ಇದ್ದುಬಿಡುವುದು. ನನ್ನಮಟ್ಟಿಗೆ ಆ ಜನ್ಮ ಬ್ರಹ್ಮಚಾರಿ. ಇದೇ ಸರಿಯಾದ ಮಾರ್ಗ............ಒಂದು ವೇಳೆ ಲೀಲೂ ಮುಂದೆ ತನ್ನನ್ನೇ ನಿಜವಾದ ಗಂಡನನ್ನಾಗಿ ವರಿಸಲು ಒಪ್ಪಿದರೆ.... ....ಅದು ದೈವೇಚ್ಛೆ" ಹೀಗೆ ಚಿಂತಾಪ್ರವಾಹದಲ್ಲಿ ಮುಳುಗಿ ತೇಲುತ್ತಿದ್ದನು.

* * *

ಬೊಂಬಾಯಿನ ದಾದರ್ ಸ್ಟೇಷನ್ನಿಗೆ ಬರುತ್ತಲೇ ಟ್ಯಾಕ್ಸಿಯೊಂದನ್ನು ಕರೆದು, ಇಬ್ಬರೂ ಅದರಲ್ಲಿ ಕುಳಿತರು. ಅಲ್ಲಿಗೆ ಸರಿಯಾಗಿ ತನ್ನ ಕಛೇರಿಯ ಆಳು ಬಂದು ಕಾದಿರುವುದನ್ನು ನೋಡಿ ಕೂಗಿ ಕರೆದ. ಇವನನ್ನು ನೋಡು

ತ್ತಲೇ ಓಡಿಬಂದ ಅವನು ಮರಾಠಿಯಲ್ಲಿ "ಹುಜೂರ್ ! ಆಪ್ಪಾ ಅವರು...." ಎಂದ. ವೆಂಕಟೇಶನು ಮರಾಠಿಯಲ್ಲೇ "ಏನು ಸಮಾಚಾರವೆ"ಂದು ಕೇಳಿದ. ಹಿಂದಿನ ರಾತ್ರಿಯೇ ನಿಧನನಾದ ಸುದ್ದಿಯನ್ನು ಕೇಳುತ್ತಲೇ ಟ್ಯಾಕ್ಸಿಯನ್ನು ನರ್ಸಿಂಗ್ ಹೋಂ ಕಡೆಗೆ ಬಿಡುವಂತೆ ಹೇಳಿದ ಅರ್ಧಘಂಟೆ ಯಲ್ಲಿ ಟ್ಯಾಕ್ಸಿ ಅಲ್ಲಿಗೆ ಬಂದು ನಿಂತಿತು. ತನ್ನ ಯಜಮಾನರೂ ಅಲ್ಲಿರುವುದನ್ನ ನೋಡಿ ಚಕಿತನಾದ. ಇವನನ್ನು ಕಾಣುತ್ತಲೇ ಆತನು ಬಂದು ಕೈಹಿಡಿದು ಸಮಾಧಾನದ ಮಾತುಗಳನ್ನಾಡಿದರು. ವೆಂಕಟೇಶನು "ಲೀಲೂ"ವನ್ನು ತನ್ನ ಹೆಂಡತಿಯೆಂದು ಪರಿಚಯಮಾಡಿಸಿ, ಹಿಂದೆ ದೂರದಲ್ಲಿದ್ದ 'ಡೆಡ್ ಹೌಸ್'ಗೆ ಧಾವಿಸಿದ. ಬಾಗಿಲು ತೆರೆಯುತ್ತಲೇ—ಎದುರಿಗೆ ಕೃಶನಾದ ರಾಮಚಂದ್ರಮೂರ್ತಿ ಗತಪ್ರಾಣನಾಗಿ ಹಗ್ಗದ ಮಂಚದ ಚಾಪೆಯಮೇಲಿರು ವುದನ್ನು ಕಂಡರು. ಲೀಲಾಗೆ ನೆತ್ತಿಯ ಮೇಲೆ ಸಿಡಿಲು ಬಡಿದಂತಾಯಿತು. ಕ್ಷಣಕಾಲ ನಿಶ್ಚೇಷ್ಟಿತಳಾಗಿದ್ದವಳು, ನಂತರ ಓಡಿಹೋಗಿ ತಂದೆಯ ಶವದ ಮೇಲೆ ಬಿದ್ದು ಗೋಳಾಡಿದಳು ವೆಂಕಟೇಶನು ತನ್ನ ದುಃಖವನ್ನು ನುಂಗುತ್ತಾ, ಅವಳನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಿದ್ದ.

ರಾಮಚಂದ್ರಮೂರ್ತಿಯು ತನ್ನ ತಂದೆಯೆಂದು ತನ್ನ ಮಾಲೀಕನಿಗೆ ವೆಂಕಟೇಶ ತಿಳಿಸಿದ್ದ ಈಗ ತಾನೇ ಲೀಲೂ ತನ್ನ ಹೆಂಡತಿಯೆಂದು ಪರಿಚಯ ಮಾಡಿಸಿದ ಆದರೆ ಆಕೆ ಹೋಗಿ ರಾಮಚಂದ್ರಮೂರ್ತಿಯ ಶವದಮೇಲೆ ತಲೆಯಿಟ್ಟು "ಅಪ್ಪಾ ! ಅಪ್ಪಾ !" ಎಂದು ಅಳುತ್ತಿದ್ದಾಳೆ. ಇದು ಹೇಗೆ ಸಾಧ್ಯವೆಂದು ಆತನಿಗೆ ತೋಚಿತು. ವೆಂಕಟೇಶನನ್ನು ಹೊರಕ್ಕೆ ಕರೆದು "ನಿನ್ನ ಹೆಂಡತಿ ಗರ್ಭಿಣಿಯಾಗಿ ಕಾಣುತ್ತಾಳೆ. ಆಕೆಗೆ ಹೆಚ್ಚು ಆಯಾಸವಾಗಬಾರದು. ಆಕೆಯನ್ನ ನಮ್ಮ ಮನೆಗೆ ಬಿಟ್ಟುಬಾ" ಎಂದರು. ಬಹು ಪ್ರಯಾಸದಿಂದ ಲೀಲೂವನ್ನು ಕಾರಿನಲ್ಲಿ ಕೂಡಿಸಿದ್ದಾಯಿತು. ವೆಂಕಟೇಶನು, ಅವನ ಮಾಲೀಕನೂ ಕೂತರು. ಹತ್ತಿರಬಂದ ನರ್ಸ್‌ಗೆ "ತುಸುಹೊತ್ತಿಗೆ ಬರುತ್ತೇನೆ" ಎಂದು ಮಾಲೀಕನು ಹೇಳಿದ. "ಅವರು ಕಡೆಯದಾಗಿ ಏನಾದರೂ ಹೇಳಿದರೇ ?" ಎಂದು ವೆಂಕಟೇಶಮೂರ್ತಿ ಪ್ರಶ್ನಿಸಿದ. "ಕಡೆಯ ಉಸಿರಲ್ಲೂ ಎಂದಿನಂತೆ – 'ಸೀತಾ ! ಲೀಲೂ ಗಂಡ ಬಂದ ! ಸೀತಾ ! ಲೀಲೂ ಗಂಡ ಬಂದ.' ಎನ್ನುತ್ತಾ ಉಸಿರು ಮೆತ್ತ

ಗಾಯಿತು. ಕಡೆಯಲ್ಲಿ ಸೆರೆಬ್ರಲ್ ಹೆಮರೇಜ್ ಆಯಿತು." ಎಂದಳು. ದಾರಿಯಲ್ಲಿ ಮಾಲೀಕನ ಅನುಮಾನ ಪರಿಹಾರಕ್ಕಾಗಿ ವೆಂಕಟೇಶನು ತನ್ನ ಪೂರ್ವ ವೃತ್ತಾಂತವನ್ನು ವಿವರವಾಗಿ ತಿಳಿಸಿ, ತಾನು ಅವರ ಮನೆಯಲ್ಲಿ ಊಟಮಾಡಿಕೊಂಡಿದ್ದ ಕಾರಣ ಅವರನ್ನು 'ಅಪ್ಪ'ನೆಂದೇ ಕರೆಯುತ್ತಿದ್ದ ನೆಂಬುದನ್ನೂ ತಾನು ತಾಯಿ ತಂದೆಯಿಲ್ಲದ ತಬ್ಬಲಿಯೆಂಬುದನ್ನೂ ತಿಳಿಸಿದ.

* * *

ಮೂರು ತಿಂಗಳುಗಳು ಕಳೆದಿದ್ದುವು. ಈ ಮಧ್ಯೆ ಲೀಲುವನ್ನು ಎಡಬಿಡದೆ, ವೆಂಕಟೇಶ, ಮಾಲೀಕನ ಪತ್ನಿ, ಮನೆಯ ಸೇವಕರಾದಿಯಾಗಿ ಸಮಸ್ತರೂ ಬಹು ಪ್ರೀತಿಯಿಂದ ನೋಡಿಕೊಳ್ಳುತ್ತಾ ಉಪಚರಿಸುತ್ತಿದ್ದರು. ಲೀಲೂ ಬಹು ಕೃಶವಾಗಿಬಿಟ್ಟಿದ್ದಳು. ಆದರೂ ಒಮ್ಮೊಮ್ಮೆ ತಾನು "ಆತ್ಮ ಹತ್ಯೆಗೆ" ಮನಸ್ಸು ಮಾಡುವಂತೆಯೇ, ವೆಂಕಟೇಶನ ಪ್ರೇಮ, ಅವನ ಬಲಿದಾನಗಳು ಕಣ್ಣಿಗೆ ಕಟ್ಟಿ 'ಹೇಗೂ ಬಾಳುವುದು ಮೇಲು' ಎಂದೆನಿಸು ತ್ತಿತ್ತು. ಅಂತೂ ಮುಂದಿನೊಂದು ತಿಂಗಳಲ್ಲೇ ಹೆರಿಗೆಯಾಯಿತು. ಹೆಣ್ಣು ಮಗು. ಹತ್ತು ಇಪ್ಪತ್ತು ದಿನಗಳು ಲೀಲೂ ಮಗುವಿನ ಮುಖವನ್ನೇ ನೋಡಲಿಲ್ಲ. ಒಂದು ಕಡೆ ವಿಪರೀತ ನಿಶ್ಶಕ್ತಿ. ಮತ್ತೊಂದು ಕಡೆ ಆ 'ಪಾಪಿ' ಯ ಮುಖವಾಗಿರುವುದೇನೋ ಎಂಬ ಕರುಳು ಕತ್ತರಿಸುವ ನೋವು – ಸಂಕಟ. ಸೇವೆಗೆ ನಿಯುಕ್ತವಾಗಿದ್ದ ದಾದಿಯೇ ಇಬ್ಬರ ರಕ್ಷಣೆ ಯನ್ನೂ ಮಾಡುತ್ತಿದ್ದಳು. ದಿನವೂ ಬೆಳಿಗ್ಗೆ ಡಾಕ್ಟರೊಬ್ಬರು ಬಂದು ತಾಯಿ ಮಗುವನ್ನು ಪರೀಕ್ಷಿಸಿ, ಔಷಧೋಪಚಾರ ಮಾಡುತ್ತಿದ್ದರು.


ಅಂತೂ ನಾಲ್ಕು ತಿಂಗಳುಗಳಾದುವು. ಮಗುವು ತಾಯಿಯ ಹಾಗೆಯೇ ಇರುವುದೆಂದೂ, ನಕ್ಕರೆ ಕೆನ್ನೆಯಮೇಲೆ ಗುಳಿ ಬೀಳುವುದೆಂದೂ ನೋಡಿದವ ರೆಲ್ಲರೂ ಹೇಳುವುದನ್ನೂ, ವೆಂಕಟೇಶನು ಮಗುವನ್ನು "ಪುಟ್ಟ ಲೀಲೂ" ಎಂದು ಕೂಗುವುದನ್ನೂ ಕೇಳಿ ಲೀಲಾಗೆ ಒಂದು ಬಗೆಯ ಸಮಾಧಾನವಾ ಯಿತು. ತಾನು ತಾಯಿ ತಂದೆಗಳನ್ನು ಕೊಂದು ಪಾಪಿಯಾದರೂ ಸುತ್ತಣ ಪ್ರಪಂಚ ತನ್ನ ವಿಚಾರದಲ್ಲಿ ತೋರಿಸುತ್ತಿರುವ ಈ ಪ್ರೇಮಕ್ಕೆ ಅವಳ ಮನಸ್ಸು ಕೃತಜ್ಞತೆಯಿಂದ ಸೋತು — "ಆದದ್ದಾಗಿ ಹೋಯಿತು. ಇವರೆಲ್ಲರ ಪ್ರೇಮ ಕ್ಕಾದರೂ ನಾನು ಬಾಳಬೇಕು" ಎಂದು ಮನಸ್ಸು ನಿರ್ಧರಿಸುತ್ತಾ ಬಂದಿತು.

ಒಂದುದಿನ ಮಧ್ಯಾಹ್ನವೇ ಕಛೇರಿಯಿಂದ ಬಂದ ವೆಂಕಟೇಶನನ್ನು ಕಂಡು ಲೀಲಾ ಆಚ್ಚರಿಗೊಂಡಳು. ಅವನ ಸಡಗರ ಬಹಳವಾಗಿದ್ದಿತು. "ಲೀಲಾ ! ನಮ್ಮ ಯಜಮಾನರು ಮಾತುಂಗಾದಲ್ಲಿ ನಮಗೊಂದು ಪುಟ್ಟ ಬಂಗಲೆಯನ್ನು ಕೊಡಿಸಿದ್ದಾರೆ. ಅಲ್ಲಿ ನಮ್ಮವಾಸ ಮತ್ತು ಕಛೇರಿ ಎರಡೂ ಒಂದೇಕಡೆ. ನಾಳೆಯದಿನವೇ ನಾವು ಅಲ್ಲಿಗೆ ಹೊರಡಬೇಕು ಈಗ ಹೋಗಿ ಅಲ್ಲಿಗೆ ಫರ್ನೀಚರ್, ಪಾತ್ರೆ ಪದಾರ್ಥಗಳನ್ನ ಸಾಗಿಸಬೇಕು ನಾನು ರಾತ್ರೆ ಬರುವುದು ತಡವಾದೀತು. ನೀನು ಊಟ ಮುಗಿಸಿ ಮಲಗಿಬಿಡು." ಎಂದು ಹೇಳಿ ಹೊರಟುಹೋದ. ಅವನ ಸಡಗರ, ಆಶೆ, ಪ್ರೇಮ, ಬಲಿದಾನಗಳನ್ನು ಕಂಡು ಲೀಲಾ ಹೃದಯ ಕರಗಿ ನೀರಾಯಿತು. ಮನಸ್ಸು ಮತ್ತೆ ಡೋಲಾಯಮಾನವಾಯಿತು. 'ಇದೇ ಸತ್ವಪರೀಕ್ಷಾಸಮಯ' ಎಂದೆನ್ನಿಸಿತು. "ತಂದೆ ತಾಯಿಯನ್ನು ನುಂಗಿ ನೀರ್ಕುಡಿದುದಾಯಿತು. ಈಗ ಅಪವಿತ್ರವಾದ ಈ ದೇಹವನ್ನು ಹೊತ್ತು ವೆಂಕಟೇಶನಿಗೆ, ತುಂಬು ಪ್ರೇಮದ ನಿಷ್ಕಳಂಕಮೂರ್ತಿ ವೆಂಕಟೇಶನೊಂದಿಗೆ ಬಾಳುವುದೆಂತು ? ಅಪ್ಪನನ್ನು ನೋಡಿದ್ದಾಯಿತು. ಹೊಟ್ಟೆಯಲ್ಲಿದ್ದ ಪಾಪದ ಹೊರೆಯೂ ಮೈಬಿಟ್ಟು ಕಳೆಯಿತು. ಇನ್ನು ಕಣ್ಮರೆಯಾಗಲು ಅಡ್ಡಿಯೇನಿದೆ? ತಾನು ಜೀವಿಸಿದ್ದಷ್ಟೂ ವೆಂಕಟೇಶನ ಸುಖದ ಬಾಳಿಗೆ ಅಡ್ಡಿ; ಅವನ ಮದುವೆಗೆ, ಜೀವನಕ್ಕೆ ದೊಡ್ಡ ಅಡ್ಡಿ. ತಾನು ಮರೆಯಾದಲ್ಲದೆ ಅವನು ಮದುವೆಯಾಗುವಂತಿಲ್ಲ. ಎಲ್ಲರಿಗೂ 'ತನ್ನ ಹೆಂಡತಿ ಲೀಲಾ' ಎಂದು ಹೇಳಿಬಿಟ್ಟಿದ್ದಾನೆ. ಕಲ್ಲು ಮನಸ್ಸುಮಾಡಿ, ಅವನು ತನ್ನ ಸುಖಕ್ಕಾಗಿ ಬಲಿಯಾಗಲು ಹವಣಿಸಿದಂತೆ ತಾನೂ ಅವನ ಸುಖಕ್ಕಾಗಿ ದೂರವಾಗಬೇಕು." ಹೀಗೆಂದು ಯೋಚಿಸುತ್ತಾ ಆದಿನ ನಡುರಾತ್ರಿ ಎಲ್ಲರೂ ಗಾಢನಿದ್ರೆಯಲ್ಲಿರುವಾಗ ಲೀಲಾ ಮೆಲ್ಲಗೆ ಬಂಗಲೆಯಿಂದ ಹೊರಬಿದ್ದು ತಾನು ನಿತ್ಯವೂ ಮಹಡಿಯಮೇಲಿಂದ ನೋಡಿ ಸಂತೋಷಪಡಲು ಯತ್ನಿಸುತ್ತಿದ್ದ ಸಮುದ್ರದಕಡೆಗೆ ನಡೆದು, ಕಣ್ಣುಗಳನ್ನ ಬಲವಾಗಿ ಮುಚ್ಚಿಕೊಂಡು ತನ್ನ ತಾಯಿಯನ್ನೇ ನೆನೆಸುತ್ತಾ ಅಲೆಗಳ ಮಧ್ಯೆ ಮುಂದೆಮುಂದೆ ನುಗ್ಗುತ್ತಿರುವಷ್ಟರಲ್ಲಿಯೇ ದೊಡ್ಡದೊಂದು ಅಲೆ ಬಂದು ಅವಳ ಆ ತೆಳು ದೇಹವನ್ನು ಕೊಚ್ಚಿಕೊಂಡು ಹೋಯಿತು.

* * *

ಬೆಳಿಗ್ಗೆ ಬಂಗಲೆಯಲ್ಲಿ ಹಾಹಾಕಾರ. ಲೀಲುವನ್ನು ಹುಡುಕಲು ನೂರಾರು ಆಳುಕಾಳುಗಳು ಸಿಬ್ಬಂದಿಯೆಲ್ಲಾ ಸುತ್ತಲೂ ಓಡಿಸಲ್ಪಟ್ಟರು. ದಿಕ್ಕುಗೆಟ್ಟ ವೆಂಕಟೇಶನಿಗೆ ಲೀಲೂ ಮಂಚದಬಳಿ ಒಂದು ಕಾಗದ ಸಿಕ್ಕಿತು. "ಅಣ್ಣಾ! ನಿನ್ನ ಪುಣ್ಯಮಯವಾದ ಬಾಳಿಗೆ ಭಂಗ ತರಲಿರುವ ಈ ದೇಹವನ್ನ ಗಂಗೆಗರ್ಪಿಸಲು ಹೊರಡುತ್ತಿದ್ದೇನೆ ಇದರಿಂದಲಾದರೂ ತನ್ನ ತಾಯಿ ತಂದೆಗಳ ಆತ್ಮಕ್ಕೆ ಸ್ವಲ್ಪವಾದರೂ ಶಾಂತಿಯಾದೀತು. ನಿಮ್ಮ "ಪುಟ್ಟಲೀಲಾ"ಳಿಗೆ ಹತ್ತುವರುಷವಾಗುವುದರೊಳಗೇ ಯಾವನಾದರೂ ಬಡವ ವಿದ್ಯಾವಂತ ಗುಣಾಢ್ಯನಿಗೆ ಕೊಟ್ಟು ಮದುವೆಮಾಡಿ. ಅವಳನ್ನು ಯಾವ ಸ್ಕೂಲಿಗೂ ಸೇರಿಸಬೇಡಿ. ನೀವೂ ನಿಮ್ಮ ಮುಂದಿನ ಹೆಂಡತಿಯೇ ಆ ತಬ್ಬಲಿಗೆ ತಾಯಿತಂದೆಗಳು. ನಿಮ್ಮೆಲ್ಲರ ಪ್ರೇಮವೇ ಈ ಪಾಪಿ ಜನ್ಮದ ಆಸ್ತಿ. ಇತಿ—ನಿಮ್ಮ ಲೀಲೂ"

ವೆಂಕಟೇಶನು ಹುಚ್ಚಾದ. ಸಮುದ್ರದ ತೀರಗಳಲ್ಲೆಲ್ಲಾ ಮೂರು ನಾಲ್ಕು ದಿನ ಹುಚ್ಚಾಗಿ ಅಲೆದಾಡುತ್ತಿದ್ದ. ನಾಲ್ಕನೆಯ ದಿನ ತನ್ನ ಮಾಲೀಕನ ಬಂಗಲೆಯಿಂದ ಸಮೀಪವಲ್ಲಿದ್ದ ತೀರದಲ್ಲೇ ತೇಲಿಬಂದ ಹೆಣ್ಣು ದೇಹದ ಸುತ್ತಲೂ ಜನರಿರುವುದನ್ನು ಕಂಡು ಓಡಿದ. ಹೌದೂ, ಲೀಲುವೇ. ಕಡೆಗೂ ತನಗೆ ವಂಚನೆಮಾಡಿಬಿಟ್ಟು ಹೋದ ಲೀಲೂವೆ. ತಾನು ಆ ಮಗುವಿಗಾಗಿ ಲೀಲೂಗಂಡ. ಅವಳಿಗಾಗಿ ಲೀಲೂ ಅಣ್ಣ. ಆದರೆ ತನಗಾಗಿ—ಜಗತ್ತು ಶೂನ್ಯ—"ಲೀಲಾ!" ಎಂದು ಕೂಗುತ್ತಾ ಆ ದೇಹದಬಳಿ ಬಿದ್ದು ಗೋಳಾಡಿದ.



## ಚಿ. ಸದಾಶಿವಯ್ಯನವರ ಇತರ ಪುಸ್ತಕಗಳು

| | |
|---|---|
| ಸೌಭಾಗ್ಯ | (ನಾಟಕ) |
| ಮಕ್ಕಳೇ ದೇವರು | ,, |
| ಸೊಂಪಿನ ಸಾಗರ | ,, |
| ಭೀಮಸೇನ ಜೇಬಿ | ,, |
| ಶಿವಾಜಿಯ ಬಾಲ್ಯ | ,, |
| ಮೈಸೂರ ಮಾಣಿಕ್ಯ | ,, |
| ಅಮ್ಮ | ,, |
| ಶಿವ—ಮಂಗಳ | ,, |
| ಜಯಶ್ರೀ | ,, |
| ಶಾಂತಿ | ,, |
| ಕನ್ಯಾಸೆರೆ | ,, |
| ಮಾಂಗಲ್ಯ | ,, |
| ರಹಸ್ಯ | ,, |
| ಸಿಂಹ | ,, |
| ಬೃಂದಾವನ | ,, |
| ಉಗಾದಿಯ ಸಡಗರ | ,, |
| ರಾಮ ದರ್ಶನ | ,, |
| ತಂಗಚ್ಚಿ | ,, |
| ಆಮೆಟಿಲೆ | ,, |
| ಏಕನಾಥ | ,, |
| ಪ್ರತೀಕ್ಷೆ | (ಕಥೆಗಳು) |
| ಮೈಸೂರು ಹುಲಿ | ,, |
| ಸ್ವಾಮಿ ರಾಮ ತೀರ್ಥ | (ಜೀವನ ಚರಿತ್ರೆ) |
| ರಾಜಶ್ರೀ | (ಕಾದಂಬರಿ) |
| ಲೀಲೂ ಗಂಡ | |

---

ಆನಂದ್ ಬ್ರದರ್ಸ್ — ಪಬ್ಲಿಷರ್ಸ್ — ಬೆಂಗಳೂರು ೨.